(SRI S. SIDDAPPA.)

facilities to the low-paid Government servants;

(b) if so, the number of houses constructed;

(c) whether the cost of sites has been kept down so as to be within the reach of these poor officials?

*A.*—Sri A. G. RAMACHANDRA RAO (Minister for Law and Education).—

(a) Yes.

(b) None; but 655 houses are under construction for Government servants and others.

(c) The sites are allotted at cost price.

---

**Halase Anecut, Mudigere Taluk (extra land revenue levied for atchkat lands).**

*Q.*—636. Sri G. PUTTASWAMY (Chikmagalur Mudigere—Scheduled Castes).—

Will the Government be pleased to state :—

(a) whether it has come to their notice that an extra land revenue of Rs. 5 per acre is being levied on the lands coming under the atchkat of Halase Anecut in Mudigere Taluk even though no summer crops are grown;

(b) if so, the reason for the same?

*A.*—Sri A. G. RAMACHANDRA RAO (Minister for Law and Education).—

(a) No.

(b) Does not arise in view of answer to item (a) above.

## BUDGET FOR 1956-57—DEMAND FOR GRANTS.

Mr. SPEAKER.—Now demands; we have got three demands for to-day—demand, No. 29, No, 41-A and 45. Demand, No 29,41 A can be taken up and discussed together and for these two Demands, discussion can go on till 4 O'clock and one hour will be spared for the other Demand.

Sri A. BHEEMAPPA NAIK (Molakalmuru).—Would it not be better that each Demand is given specifically some time. Otherwise, what happens is, so many Demands will be lost sight of and on one Demand we may go on talking. I would suggest that for each Demand some time may be allotted and each Demand discussed threadbare.

Sri V. M. MASCARENHAS (St. John's Hill).—The first two can be clubbed together.

Sri G. DUGGAPPA (Holalkere—Scheduled Castes).—Before the Demands are taken up, I have got a representation to make. For this session, I have sent one interpellation about the Mysore Kirloskar, Ltd., Harihar, about the site plan that the Government santioned for them, the share capital, the Government representation there, the Mysore people working in that factory, all these things. Up till now the interpellation has not seen the light of the day and I am afraid Government will not even take interest in collecting the required information from that factory. I understand the Factory people are not willing to supply the answers required. I seek the protection of the Chair to direct the Government to inquire and ascertain why the matter was delayed, why the Factory people are hesitating and not willing to supply the answers required for the questions asked and who is the person responsible. And if there is any officer responsible for the delay in getting these answers. I would request the Chair to direct the Government suitably.

Mr. SPEAKER.—Not only for this question, we have not received replies for a large number of questions. We have reminded the Government to get the replies early.

Sri G. DUGGAPPA.—Even for the questions tabled by me during the last session, I have not received answers. That is why I am making a special representation.

### DEMAND No. 29—CIVIL WORKS
50. CIVIL WORKS

Mr. SPEAKER.—I will move demand No. 29, but Demands Nos. 29

and 41-A may be discussed together.

Motion moved :

> " That a sum not exceeding Rs. 5,01,90,281 be granted to the Government to defray the charges which will come in course of payment during the year ending 31st day of March 1957, in respect of " Civil Works.' "

*ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರಂ)—ಸ್ವಾಮಿ, ನಮ್ಮ ಬೆಂಗಳೂರು ಸಿಟಿಯಲ್ಲಿ ಸುಬೇದಾರ್ ಛತ್ರಂ ರೋಡಿನಲ್ಲಿ—ಶೇಷಾದ್ರಿಪುರದ ಕಡೆಗೆ ಹೋಗುವಾಗ ಅಲ್ಲಿ ಒಂದು ಮದರಾಸ್ ರೈಲ್ವೆ ಲೆವಲ್ ಕ್ರಾಸಿಂಗ್ ಗೇಟ್ ಇದೆ. ಆ ಪ್ರದೇಶದಲ್ಲಿ ಈ ರೈಲ್ವೆ ಗೇಟ್ ಇರುವುದರಿಂದ ಅಲ್ಲಿಯ ವಾಹನ ಸಂಚಾರಕ್ಕೆ ತುಂಬ ಕಷ್ಟವಾಗಿದೆ. ಅದು ಮದರಾಸ್ ರೈಲ್ವೆ ಬ್ರಾಡ್‌ಗೇಜ್ ಲೈನ್. ರೈಲುಗಳ ಮತ್ತು ಗೂಡ್ಸ್‌ಗಾಡಿಗಳ ಹಾಗೂ ಎಂಜಿನ್‌ಗಳ ತಿರುಗಾಟ ಜಾಸ್ತಿ ಆಗಿದೆ. ದಿವಸಕ್ಕೆ ಸರಾಸರಿ 20-30 ಗೂಡ್ಸ್ ಟ್ರೈನುಗಳು ತಿರುಗಾಡುತ್ತವೆ. ಇದರ ಜೊತೆಗೆ ಪ್ರಯಾಣಿಕರ ರೈಲುಗಳು ಬೇರೆ. ಹೀಗಾಗಿ ಆ ರೈಲ್ವೆ ಗೇಟು ಯಾವಾಗ್ಲೂ ಬಂದಾಗಿ ಜನರ ಮತ್ತು ವಾಹನಗಳ ತಿರುಗಾಟಕ್ಕೆ ತುಂಬ ತೊಂದರೆಯಾಗಿದೆ. ಈ ಹಿಂದೆ ಒಂದಾವರ್ತಿ ನಮ್ಮ ಕಾರ್ಪೊರೇಷನ್ನಿನವರೂ ಸಹ ಐವತ್ತು ಲಕ್ಷ ರೂಪಾಯಿಗಳಲ್ಲಿ ಅಲ್ಲಿ ಒಂದು ಓವರ್ ಬ್ರಿಡ್ಜನ್ನು ಕಟ್ಟತಕ್ಕ ಬಗ್ಗೆ ಅಂದಾಜು ತಯಾರಿಸಿದರು. ಬಹುಶಃ ಅವರು ಅಂದಾಜನ್ನು ಸರ್ಕಾರಕ್ಕೆ ಕಳುಹಿಸಿ ಕೊಟ್ಟಿರಬಹುದು. ಆ ಸ್ಥಳದಲ್ಲಿ ಒಂದು ಓವರ್ ಬ್ರಿಡ್ಜಿನ ಅಗತ್ಯ ಬಹಳವಾಗಿದೆಯೆಂದು ಅನೇಕ ವರ್ಷಗಳಿಂದ ಅಲ್ಲಿಯ ಜನರು ಒತ್ತಾಯ ಪಡಿಸುತ್ತಿದ್ದಾರೆ. ಅನೇಕ ಸಂದರ್ಭಗಳಲ್ಲಿ ಆ ಪ್ರದೇಶದಲ್ಲಿ ವಾಸಮಾಡತಕ್ಕ ಜನರು ತ್ವರಿತವಾಗಿ ಆಸ್ಪತ್ರೆ, ಸ್ಕೂಲು, ಕೋರ್ಟು ಕಛೇರಿ ಇತ್ಯಾದಿಗಳಿಗೆ ಹೋಗಬೇಕಾಗಿರುತ್ತದೆ. ಅಂಥಾ ಕಾಲದಲ್ಲಿ ಆ ಗೇಟು ಹಾಕಲ್ಪಟ್ಟು ದಿನದ 24 ಗಂಟೆಗಳ ಕಾಲದಲ್ಲಿ ಸುಮಾರು 12 ಗಂಟೆಗಳ ಕಾಲ ಮುಚ್ಚಲ್ಪಟ್ಟಿರುತ್ತದೆ. ಇದರಿಂದ ಜನರಿಗೆ ತುಂಬ ತೊಂದರೆಯಾಗಿದೆ. ಈ ವಿಚಾರಕ್ಕೆ ಸರ್ಕಾರದವರು ಕೂಡಲೆ ಗಮನ ಕೊಟ್ಟು ಆ ಶೇಷಾದ್ರಿಪುರಂ ನಿವಾಸಿಗಳಿಗೂ, ಮಲ್ಲೇಶ್ವರ, ಶ್ರೀರಾಂಪುರ ಇತ್ಯಾದಿ ಜನರಿಗೆ ಅನುಕೂಲವಾಗಿ ಓಡಾಡಲು ಅವಕಾಶವಿರುವಂತೆ ಅಲ್ಲಿ ಒಂದು ರೈಲ್ವೆ ಓವರ್ ಬ್ರಿಡ್ಜನ್ನು ನಿರ್ಮಾಣಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಅಲ್ಲದೆ ಅಲ್ಲಿ ಅನೇಕ ಕೈಗಾರಿಕೆಗಳು ಬೇರೆ ನಡೆಯುತ್ತವೆ. ಆದಕಾರಣ ಸರ್ಕಾರದವರು ಈ ವಿಚಾರಕ್ಕೆ ಕೂಡಲೆ ಗಮನ ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

1 P.M.

*ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಸ್ವಾಮಿ, ಈಗ ಸಭೆಯ ಮುಂದೆ ಸರ್ಕಾರದವರು ಮಂಡಿಸಿರತಕ್ಕ ಈ ಸಿವಿಲ್‌ವರ್ಕ್ಸ್‌ಗೆ ಸಂಬಂಧಪಟ್ಟ ಹಾಗೆ ಒಂದು ಡಿಮ್ಯಾಂಡ್ ಮತ್ತು ಕ್ಯಾಪಿಟಲ್ ಅಕೌಂಟ್ ಆಫ್ ಸಿವಿಲ್ ವರ್ಕ್ಸ್ ಎಂಬ ಮತ್ತೊಂದು ಡಿಮ್ಯಾಂಡ್ ಈ ಎರಡು ಡಿಮ್ಯಾಂಡುಗಳ ಮೇಲೆ ಈಗ ಮಾತನಾಡಬೇಕಾಗಿದೆ. ಈ ಎರಡು ಡಿಮ್ಯಾಂಡ್‌ಗಳಿಗೆ ಸಂಬಂಧಪಟ್ಟಹಾಗೆ ಸೂಚಿಸಿರತಕ್ಕ ಮೊಬಲಗು 7 ಕೋಟಿ 27ಲಕ್ಷ 58 ಸಾವಿರದ 981 ರೂಪಾಯಿಗಳಾಗುತ್ತವೆ. ಈ ಮೊಬಲಗಿಗೆ ಸಂಬಂಧಪಟ್ಟ ಎಲ್ಲಾ ವಿಚಾರಗಳನ್ನೂ ಐದು ನಿಮಿಷದಲ್ಲಿ ವಿಮರ್ಶೆಮಾಡಬೇಕು ಎಂದರೆ ಎಷ್ಟು ಕಷ್ಟವಾಗುತ್ತದೆ ಎನ್ನುವುದು ಈ ಮಾನ್ಯ ಸಭೆಯ ಎಲ್ಲ ಸದಸ್ಯರಿಗೂ ತಿಳಿದಿರತಕ್ಕದ್ದೇ ಆಗಿದೆ. ಆದಕಾರಣ ಈ ನೀತಿಯ ಬಗ್ಗೆ ಈಗ ಮಾತನಾಡಬೇಕೆಂದಿದ್ದೇನೆ. ನಮ್ಮ ದೇಶಕ್ಕೆ ಸ್ವತಂತ್ರ್ಯ ಬಂದ ಮೇಲೆ ಕಾಂಗ್ರೆಸ್ಸಿನ ಆಡಳಿತ ವರ್ಗ ಎನ್ನತಕ್ಕದ್ದು ಒಂದು ಹೊಸದಾಗಿ ಸೃಷ್ಟಿ ಆಯಿತು. ಹೀಗೆ ಸ್ವಾತಂತ್ರ್ಯ ಬಂದ ಮೇಲೆ ಸೃಷ್ಟಿಯಾದಂಥ ಹೊಸ ವಿಷಯಗಳಲ್ಲಿ ಕಾಂಗ್ರೆಸ್ ಆಡಳಿತ ಮೊದಲನೆಯದು. ಈಗ ಅದರ ಹಿಂದೆಯೇ ಈ ಕಂಟ್ರಾಕ್ಟರುಗಳ ವರ್ಗ ಎನ್ನುವುದಾಗಿ ಒಂದು ಸ್ಥಾಪಿತವಾಗಿದೆ. ಕಂಟ್ರಾಕ್ಟುಗಳನ್ನು ಕೊಡುವಾಗಲೂ ಕೂಡ ಕಾಂಗ್ರೆಸ್ಸಿನವರಿಗೇ ಉತ್ತೇಜನ ಕೊಡುತ್ತಾ ಇದ್ದಾರೆ. ಕೊಡಬಾರದು ಎಂಬ ನಿಯಮವೇನೂ ಇಲ್ಲ. ಕಾಂಗ್ರೆಸ್ಸಿಗೆ ಸೇರಿದರೆ ಕಟ್ರ್ಯಾಂಕ್ಟ್ ಮಾಡಬಾರದು ಎಂದು ಏನೂ ಇಲ್ಲ. ಆದರೆ ಈ ನೀತಿಯಲ್ಲಿ, ಅಧಿಕಾರಿಗಳಿಗೆ, ಯಾವರೀತಿ ಪಿಡುಗು ಉಂಟಾಗುತ್ತದೆ ಎಂಬುವುದನ್ನು ಮಾತ್ರ ವ್ಯವಸ್ಥೆಯ ದೃಷ್ಟಿಯಿಂದ ಸರ್ಕಾರ ಮತ್ತು ದೇಶದ ಜನತೆ ಪರಿಶೀಲನೆ ಮಾಡಬೇಕು. ಇಂಥ ಒಂದು ಹೊಸ ಕಂಟ್ರಾಕ್ಟರುಗಳ ವರ್ಗ ದೇಶದ ಎಲ್ಲ ಕಡೆಯೂ ಬೆಳೆದು ಬರುತ್ತಾ ಇದೆ. ಇದಕ್ಕೆ ಮೊದಲನೆ ಕಾರಣ ಹೆಚ್ಚು ಹೆಚ್ಚು ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ಈ ಪಬ್ಲಿಕ್ ವರ್ಕ್ಸ್ ಇಲಾಖೆಯ ಮುಖಾಂತರ ಖರ್ಚು ಮಾಡಬೇಕಾಗಿ ಬಂದದ್ದೇ ಆಗಿದೆ. ಇಷ್ಟು ಹಣವನ್ನು ಖರ್ಚು ಮಾಡತಕ್ಕ ವ್ಯವಸ್ಥೆಗೆ ಸಾಕಾದಷ್ಟು ಸಂಖ್ಯೆಯಲ್ಲಿ ಕಂಟ್ರ್ಯಾಕ್ಟರುಗಳು ಇಲ್ಲದೇ ಇದ್ದದ್ದು ಈ ರೀತಿ ಹೊಸ ಹೊಸ ಕಂಟ್ರಾಕ್ಟರುಗಳು ಬರುವುದಕ್ಕೆ ಮುಖ್ಯ ಕಾರಣ. ಇದರಲ್ಲಿ ಕಾಂಗ್ರೆಸ್ಸಿನಲ್ಲಿ ಪ್ರಭಾವವನ್ನು ಇಟ್ಟುಕೊಂಡಿರುವ ಈ ಕಂಟ್ರಾಕ್ಟರುಗಳಿಗೆ ಅವರಿಗೆ ಸಂಬಂಧಪಟ್ಟ ಜನರನ್ನು ನಿಯಮಿಸತಕ್ಕದ್ದು ಒಂದು ರೀತಿಯಲ್ಲಿ ಬೆಳೆದು ಬಂದಿದೆ. ಇದರಿಂದ ಹೆಚ್ಚಿನ ಹಾನಿ ದೇಶಕ್ಕೆ ಉಂಟಾಗಿದೆ ಎಂದು ಹೇಳಿ ನಮಗೆ ತಿಳಿದು ಬಂದಿದೆ. ಕಾರಣ ಇಷ್ಟೆ. ಮೊದಲನೆಯದು ಈ ಇಲಾಖೆ ಲಂಚಕ್ಕೆ ತವರುಮನೆಯಾಗಿದೆ ಎಂದು ಹೇಳಿ ಅನೇಕ ವರ್ಷಗಳಿಂದ ಟೀಕೆ ಮಾಡುತ್ತಾ ಇರುವುದು ಕೆಲವರಿಗೆ ಗೊತ್ತಿದೆ ಎಂದು ಅಲ್ಲ, ಅಥವಾ ಜವಾಬ್ದಾರಿ ಇಲ್ಲದೇ ಇರುವ ಜನರು ಟೀಕೆ ಮಾಡಿದ್ದಾರೆ ಎಂದು ಅಲ್ಲ, ರಾಜಗೋಪಾಲಾಚಾರ್ಯರವರಂಥವರೇ ಈ ಪಬ್ಲಿಕ್ ವರ್ಕ್ಸ್ ಇಲಾಖೆ ಎನ್ನುವುದು ದೇಶದ ಎರಡನೆಯ ಶತ್ರು ಎಂದು ಹೇಳಿದ್ದಾರೆ. ಆದರಿಂದ ಏನು ಅರ್ಥವಾಗುತ್ತದೆ ಎಂದರೆ ಈ ಇಲಾಖೆಯಲ್ಲಿ ಸಾರ್ವಜನಿಕ ಹಣ ವೆಚ್ಚವಾಗುವ ಸಂದರ್ಭದಲ್ಲಿ ಮೊದಲನೆಯದಾಗಿ ಅದಕ್ಕೆ ಸಂಬಂಧಪಟ್ಟ ಅಧಿಕಾರ ವರ್ಗ ಹೆಚ್ಚಿನ ಜವಾಬ್ದಾರಿಯನ್ನು ಹೊಂದಿರತಕ್ಕದ್ದು, ಎರಡನೆಯದಾಗಿ ಅದಕ್ಕೆ ಸಂಬಂಧಪಟ್ಟ ಹಾಗೆ ಕಂಟ್ರಾಕ್ಟುಗಳನ್ನು ಹಿಡಿದು ಹಣವನ್ನು ಖರ್ಚು ಮಾಡುವುದಕ್ಕೆ ಮತ್ತು ಕೆಲಸವನ್ನು ಪೂರೈಸುವುದಕ್ಕೆ ಜವಾಬ್ದಾರಿಯನ್ನು ಹೊತ್ತಿರತಕ್ಕ ಕಂಟ್ರಾಕ್ಟರುಗಳು. ಇವರಿಬ್ಬರೂ ಪ್ರಾಮಾಣಿಕತೆಯಿಂದ ವರ್ತಿಸದೇ ಹೋದಲ್ಲಿ ದೇಶದ ಹಣ ಕೋಟ್ಯನುಕೋಟಿ ರೂಪಾಯಿಗಳನ್ನು ಖರ್ಚುಮಾಡುವಾಗ ಖರ್ಚಾಗುವುದು ಮಾತ್ರವೇ ಅಲ್ಲ, ಹೆಚ್ಚಿನ ಹಣದ ದುರುಪಯೋಗ ನಡೆಯುವುದಕ್ಕೆ ಅವಕಾಶವಿದೆ. ಆ ರೀತಿಯಾಗಿ ನಡೆದು ಕೊಂಡು ಹೋಗುತ್ತಿದೆ. ಅದನ್ನು ತಡೆಗಟ್ಟುವುದಕ್ಕೆ, ಆ ರೀತಿ ದೇಶದ ಹಣ ಪೋಲಾಗದೇ ಇರುವ

(ಶ್ರೀ ಎಸ್. ಗೋಪಾಲಗೌಡ.)

ರೀತಿಯಲ್ಲಿ ನಿರ್ವಹಿಸುವುದಕ್ಕೆ ಕಾಂಗ್ರೆಸ್ ಹೆಚ್ಚಿನ ಒಂದು ಕಾರ್ಯಕ್ರಮವನ್ನು ಕೈಕೊಳ್ಳುತ್ತದೆ ಎಂದು ನಾನು ಆಶಿಸಿದ್ದೇನೆ. ಹಿಂದೆ ಒಮ್ಮೆ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಇವೊತ್ತು ಪಬ್ಲಿಕ್‌ವರ್ಕ್ಸ್ ಖಾತೆಯನ್ನು ನಡೆಸಿಕೊಂಡು ಹೋಗುತ್ತಾ ಇರುವವರು 6 ತಿಂಗಳುಗಳಲ್ಲಿ ನಾನು ಈ ಇಲಾಖೆಯಲ್ಲಿರುವ ಲಂಚ ಪ್ರವೃತ್ತಿಯನ್ನು ತಡೆಗಟ್ಟ ಬಲ್ಲೆ ಎಂದು ಹೇಳಿದ್ದರು. ಆಗ ಅವರು ಮಂತ್ರಿ ಆಗಿರಲಿಲ್ಲ. ಈಗ ಅವರ ಅನುಭವ ಕೇಳಿದರೆ, ನಾನು ಮಾಡುವ ಪ್ರಯತ್ನ ಮಾಡಿದೆ ಆದರೆ ಇದರಲ್ಲಿ ಪೂರ್ತಿ ಯಶಸ್ವಿಯಾಗುವುದಕ್ಕೆ ಸಾಧ್ಯವಾಗ ಲಿಲ್ಲ, ಪ್ರಾಮಾಣಿಕತೆ ಎಲ್ಲಾಕಡೆಯೂ ಹೆಚ್ಚಬೇಕು, ಕಂಟ್ರಾಕ್ಟರುಗಳಲ್ಲಿ ಮೊದಲು ಪ್ರಾಮಾಣಿಕತೆ ಬರ ಬೇಕು, ಆಮೇಲೆ ನಾವು ನಮ್ಮ ಸಿಬ್ಬಂದಿಯಲ್ಲಿ ಪ್ರಾಮಾಣಿಕತೆಯನ್ನು ತರುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇಂಥ ಸಂದರ್ಭದಲ್ಲಿ ಕಂಟ್ರಾಕ್ಟರುಗಳಾಗಿರತಕ್ಕ ವರ ಮೇಲೆ ಕಾನೂನಿನ ಪರಿಮಿತಿಯಲ್ಲಿ ಈಗಿರತಕ್ಕ ಕೆಲವು ಹಿಡಿತಗಳನ್ನು ಬಿಟ್ಟರೆ, ಬೇರೆ ಹಿಡಿತಗಳು ಇಲ್ಲ, ಜೊತೆಗೆ ಇಂಥ ಕಂಟ್ರಾಕ್ಟರುಗಳು ಮಂತ್ರಿಗಳ ಸಂಬಂಧಿಕರೋ ಅಥವಾ ಪರಿಚಯಸ್ಥರೋ ಅಥವಾ ಆಡಳಿತ ವರ್ಗದಲ್ಲಿ ಪ್ರಭಾವವನ್ನು ಬೆಳೆಸಿಕೊಂಡಿರ ತಕ್ಕ ಮಾಹನೀಯರೋ ಆಗಿದ್ದ ಪಕ್ಷದಲ್ಲಿ ಸಂಬಂಧ ಪಟ್ಟ ಇಲಾಖೆಯ ನೌಕರರ ಮನೋಭಾವ ಯಾವರೀತಿ ಆಗುತ್ತದೆ ಎನ್ನುವುದು ಬಹಳ ಗಹನವಾದ ವಿಷಯ. ಈ ಕಂಟ್ರಾಕ್ಟರುಗಳು ಅಂದಾಜುಗಳನ್ನು ತಯಾರು ಮಾಡಿದ ಮೇಲೂ ಕೂಡ ಬದಲಾವಣೆಗಳನ್ನು ಮಾಡಿಸಿ ರತಕ್ಕ ನೂರಾರು ಉದಾಹರಣೆಗಳನ್ನು ಕೊಡಬಲ್ಲೆ. ಆಸ್ಪತ್ರೆಕಟ್ಟಡಕ್ಕಾಗಲಿ, ರಸ್ತೆಗಾಗಲಿ ಅಥವಾ ಇನ್ನಾವುದಾದರೂ ಸೇತುವೆಗಾಗಲಿ ಇಲಾಖೆಯ ಮುಖಾಂತರ ಖರ್ಚು ಹಾಕಿಸಿಕೊಂಡು, ಅದೂ ಹೇಗೆ ಮಂತ್ರಿಗಳನ್ನು ಪ್ರಭಾವಕ್ಕೆ ಒಳಗುಮಾಡಿ ಅಥವಾ ಅವರಿಗೆ ಬೇರೆ ಯಾವರೀತಿಯಲ್ಲೋ ಸೇವೆಯನ್ನು ಮಾಡಿ ಆ ಕೆಲಸ ಬಂದ ಮೇಲೆ ಆ ಕೆಲಸದ ಕಂಟ್ರಾಕ್ಟಿಗೂ ಕೂಡ ಪ್ರಯತ್ನ ಮಾಡಿ, ಟೆಂಡರ್, ಎಸ್ಟಿಮೇಟ್ ಇದೆ ಎಂದು ಇಲ್ಲ, ಇಲ್ಲ ಎಂದು ಇಲ್ಲ ಅಂಥ ಒಂದು ಸನ್ನಿವೇಶವನ್ನು ನಿರ್ಮಾಣ ಮಾಡಿ—(ಕೆಲವು ಸಂದರ್ಭಗಳಲ್ಲಿ ಅವರಿಗೇ ಆ ಕಂಟ್ರಾಕ್ಟುಗಳು ದೊರೆಯದೇ ಇರತಕ್ಕ ಸಂದರ್ಭವೂ ಇದೆ; ಆಗ ಬೇರೆ ಯಾರೂ ತೆಗೆದುಕೊಳ್ಳದಿದ್ದರೆ ಆ ಕಾರ್ಯ ಆಗದೇ ಇರತಕ್ಕ ಸಂದರ್ಭವೂ ಇದೆ. ಅಂತಹವರ ಕೇಸುಗಳನ್ನು ಬಿಟ್ಟುಬಿಡಬಹುದು)—ತಾನೇ ಮಾಡದೇ ಇದ್ದರೂ ತನ್ನ ಸೂಚನೆ ಪ್ರಕಾರ, ತನ್ನ ಪ್ರಭಾವದ ಅಡಿಯಲ್ಲೇ ಕೆಲಸಮಾಡತಕ್ಕವರನ್ನು ಇವತ್ತು ನಾವು ನೋಡಬಹುದು. ಇದರಿಂದ ಏನಾಗುತ್ತದೆ? ಇಷ್ಟು ಅಂದಾಜಿನ ಕಟ್ಟಡ ಆಗಬೇಕೆಂದು ಕ್ರಮವಾಗಿ ಕೆಲಸ ಆರಂಭವಾಗಿ ಮೂರು ತಿಂಗಳು ಆಗುವುದ ಕ್ಕಿಲ್ಲ ಮತ್ತೆ ಎಸ್ಟಿಮೇಟನ್ನು ಬದಲಾಯಿಸಿರುವುದ ಮತ್ತೆ ಬದಲಾಯಿಸುವುದು ಈ ರೀತಿ ಎಸ್ಟಿಮೇಟೆಡ್ ಕಾಸ್ಟ್ ಒಂದಕ್ಕೆ ಮೂರರಷ್ಟಾಗಿ 20 ಸಾವಿರದ ಅಂದಾಜು 70 ಸಾವಿರಕ್ಕೆ ಹೋಗುವುದು ಇದೆ. ಈ ಇಲಾಖೆಯಲ್ಲಿ ಪ್ರತಿಯೊಂದು ಅಂಶವನ್ನೂ ನೋಡುತ್ತಾ ಬಂದರೆ ಇದು ನಿಮ್ಮ ಕಣ್ಣಿಗೆ ಕಾಣುತ್ತದೆ. ಇದಕ್ಕೆ ಮಾರ್ಜಿನ್ ಕೊಡುವುದಕ್ಕೆ ಸಿದ್ಧವಾಗಿದ್ದೇನೆ. ಒಂದು ಲಕ್ಷ ಎಸ್ಟಿಮೇಟ್ ಆದರೆ ಒಂದು ಲಕ್ಷ ಇವತ್ತು ಸಾವಿರ ರೂಪಾಯಿ ಖರ್ಚಾಗಬಹುದು. ಅಷ್ಟು ಮಾರ್ಜಿನ್ ಬಿಡಬಹುದು. ಒಂದೂವರೆ ಲಕ್ಷ ಎರಡು ಲಕ್ಷದವರೆಗೂ ಹೋಗುವಷ್ಟು ಎಸ್ಟಿಮೇಟ್ ಆದರೆ ಅದನ್ನು ಎಸ್ಟಿಮೇಟು ಎಂದು ಕರೆಯುವುದಕ್ಕೇ ಸಾಧ್ಯವಿಲ್ಲ. ಇದು ಆ ಪ್ರಭಾವದಿಂದಲೇ ಆಗುವುದಕ್ಕೆ ಸಾಧ್ಯ ಎನ್ನುವುದನ್ನು ನಾವು ಒಪ್ಪಿಕೊಳ್ಳಬೇಕು. ಕಂಟ್ರಾಕ್ಟರುಗಳು ಎಸ್ಟಿಮೇಟಿನಲ್ಲಿ ಕೊಟ್ಟಿರತಕ್ಕ ಸ್ಪೆಸಿಫಿಕೇಷನ್ನಿನಂತೆ ಮಾಡದೆ ತಪ್ಪು ಮಾಡಿದ್ದಾಗ್ಯೂ ಕೂಡ ಫೈನಲ್ ಬಿಲ್ ಹೋಗುವಾಗ ಈ ಮಹನೀಯರು ಹೋಗಿ ಇಂಜನಿಯರ ಆಫೀಸಿನಲ್ಲಿ ಕುಳಿತು ಕೊಂಡು, ಸ್ವಾಮಿ 'ಫೈನಲ್ ಬಿಲ್ ಮಾಡಿಸಿಕೊಡಿ' ಎಂದು ಹೇಳಿಕೊಂಡು ಬೆಂಗಳೂರಿನ ಚೀಫ್ ಇಂಜನಿಯರ ಆಫೀಸಿನಲ್ಲಿ ಜೊತೆಗೆ ಮೂರು ನಾಲ್ಕು ಜನರನ್ನು ಸೇರಿಸಿಕೊಂಡು ತಿರುಗಾಡುತ್ತಿರುತ್ತಾರೆ. ಈ ರೀತಿಯಲ್ಲಿ ಕೆಲಸ ನಡೆದರೆ. . . .

ಒಬ್ಬ ಸದಸ್ಯರು.—ಯಾರು ಆ ರೀತಿ ಮಾಡುತ್ತಾ ಇದ್ದಾರೆ?

ಶ್ರೀ ಎಸ್. ಗೋಪಾಲಗೌಡ.—ಯಾರು ಎನ್ನುವುದನ್ನು ಮೊದಲೇ ಹೇಳಿದೆ. ಕಂಟ್ರಾಕ್ಟರುಗಳು ಮತ್ತು ಅವರಿಗೆ ಬೆಂಬಲ ಕೊಡತಕ್ಕವರು, ಹಣ ಒದಗಿಸತಕ್ಕ ವರು, ಅವರು ಬಹಳ ಮುತುವರ್ಜಿವಹಿಸಿ ಇದು ನಮ್ಮ ಕೆಲಸ, ನಮ್ಮ ಊರಿನ ಕೆಲಸ, ಆಗಲೇಬೇಕು, ಬಹಳ ಫಾಯಿದೆ ಇದೆ ಎಂದು ಹೇಳಿ ಮನವಿಗಳನ್ನು ಸರ್ಕಾರದ ಮುಂದೆ ಇಟ್ಟು ಕೆಲಸಗಳನ್ನು ಮಂಜೂರು ಮಾಡಿಸಿಕೊಂಡು ಹೋಗತಕ್ಕ ಮಹನೀಯರು ಇದ್ದಾರೆ. ಅಂಥ ಸಂದರ್ಭದಲ್ಲಿ ನೌಕರರ ಪ್ರಾಮಾಣಿಕತೆ ಹೆಚ್ಚಾಗಬೇಕು ಎಂದು ನಾವು ಭಾಷಣ ಮಾಡುವುದಾಗಲಿ ಆಗ್ರಹ ಮಾಡುವುದಾಗಲಿ ಯಾವ ಪ್ರಯೋಜನವನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ? ಆದ್ದರಿಂದ ಇವೊತ್ತು ಈ ಇಲಾಖೆ ಪಂಚವಾರ್ಷಿಕ ಯೋಜನೆ ಬಂದಮೇಲೆ ಒಂದಕ್ಕೆ ನಾಲ್ಕರಷ್ಟು ವಿಸ್ತರಿಸಿದೆ, ಈ ಸಂಸ್ಥಾನದ ಒಟ್ಟು ಬಡ್ಜೆಟ್ಟಿನಲ್ಲಿ ಶೇಕಡ 10 ರಷ್ಟು ಹಣ ಈ ಇಲಾಖೆಯ ಮುಖಾಂತರ ಖರ್ಚಾಗುತ್ತಿದೆ.

ನಾನು ಈ ನಾಲ್ಕು ವರ್ಷಗಳಿಂದಲೂ ಈ ರೀತಿ ಟೀಕೆ ಮಾಡುವ ಒಂದು ಅಸಹ್ಯವಾದ ಕೆಲಸವನ್ನು ಮಾಡುತ್ತಾ ಬಂದಿದ್ದೇನೆ. ಹಣ ಪೋಲಾಗುತ್ತಿದೆ, ಅದನ್ನು ತಡೆಯಬೇಕು ಆ ಇಲಾಖೆಯಲ್ಲಿ ಪ್ರಾಮಾಣಿಕತೆಯನ್ನುಂಟುಮಾಡಿ ಎಂದು ಹೇಳುತ್ತಲೇ ಇದ್ದೇನೆ. ಆದರೆ ಅದು ಇನ್ನೂ ಸಾಧ್ಯವಾಗಿಲ್ಲ. ಅದನ್ನು ಯಾವ ರೀತಿ ಮಾಡಬೇಕೆಂದು ಕೆಲವು ಸಲಹೆಗಳನ್ನೂ ಸಹ ನಾನು ಕೊಟ್ಟಿದ್ದೆ. ಬೇರೆ ಕಡೆಗಳಲ್ಲಿ ಕಂಟ್ರಾಕ್ಟರುಗಳನ್ನು ರಿಜಿಸ್ಟರ್ ಮಾಡುವ ಪದ್ಧತಿಯಿದೆ. ಅದೇ ರೀತಿ ಇಲ್ಲಿಯೂ ರಿಜಿಸ್ಟರ್ ಮಾಡಿಸಿಯೆಂದು ಹೇಳಿದರೂ ಆ ರೀತಿ ಮಾಡಿಸಿಲ್ಲ. ಇದರಿಂದ ಕೆಲವು ತೊಂದರೆಗಳೇನೋ ಇರಬಹುದು. ಆದರೂ ಅವರಮೇಲೆ ಹಿಡಿತವನ್ನಿಟ್ಟುಕೊಳ್ಳುವುದಕ್ಕೆ ಇದರಿಂದ ಸಾಧ್ಯವಾಗುತ್ತದೆ. ಇದು ಒಂದು ಲೋಪ.

ಇನ್ನೊಂದೇನೆಂದರೆ, ಇಂಜನಿಯರಿಂಗ್ ಇಲಾಖೆಯವರು ತಮ್ಮ ಕೆಲಸವನ್ನು ಸರಿಯಾಗಿ ಮಾಡಿಲ್ಲ. ಒಬ್ಬ ಕಂಟ್ರಾಕ್ಟರನ್ನು ಅವನು ಕಂಟ್ರಾಕ್ಟರಾಗುವುದಕ್ಕೆ ಅನರ್ಹನೆಂದು ಹೇಳಿದಮೇಲೆಯೂ, ಅವನು ಇನ್ನೊಂದು ಡಿವಿಜನ್ನಿಗೆ ಹೋಗಿ ಆರಾಮವಾಗಿ ಕೆಲಸ ಮಾಡಿಕೊಂಡಿರುವ ನಿದರ್ಶನಗಳಿವೆ. ಆತನು ಅಲ್ಲಿ ಹೋಗಿ, ತನ್ನನ್ನು ಅಪಾದಿಸಿದ ಎಂಜಿನಿಯರು ಬೇರೆ ಜಾತಿಯವನು, ಬೇರೆ ಊರಿನವನಾಗಿದ್ದರಿಂದ ಹಾಗೆ ಮಾಡಿದನೆಂದು ದೂರಿಕೊಂಡು ಬೇರೆ ಎಂಜಿನಿಯರ ಹತ್ತಿರ ಕಂಟ್ರಾಕ್ಟನ್ನು ಪಡೆದು ಸುಖದಿಂದ ಸಿಮೆಂಟಿನ ಮನೆಯನ್ನು ಮಾಡಿಕೊಂಡಿರುತ್ತಾನೆ.

ಇಂಥ ಕಂಟ್ರಾಕ್ಟರುಗಳು ಎಷ್ಟೋ ಜನ ಇದ್ದಾರೆ. ಇಂಥದನ್ನೆಲ್ಲಾ ನಮ್ಮ ಸರ್ಕಾರ ನೋಡಿಕೊಂಡು ಕಣ್ಣುಮುಚ್ಚಿಕೊಂಡು ಕುಳಿತಿದೆ! ಇದರಿಂದಾಗಿ ತಿಳಿಯದ ಜನರು ಎಲ್ಲರೂ ಒಂದೇ ಎಂದು ತೀರ್ಮಾನಕ್ಕೆ ಬರುತ್ತಾರೆ. ಆದ್ದರಿಂದ ಕಂಟ್ರಾಕ್ಟರುಗಳನ್ನು ರಿಜಿಸ್ಟರ್ ಮಾಡುವ ಪದ್ಧತಿಯನ್ನು ಜಾರಿಗೆ ತರುವುದು ಮುಖ್ಯ. ಅದರಲ್ಲಿ a, b, c, d, ಎಂದು 10,000, 20,000, ಒಂದು ಲಕ್ಷ, ಎರಡು ಲಕ್ಷ ಈ ಪ್ರಕಾರ ಆಯಾ ಕಂಟ್ರಾಕ್ಟರುಗಳ ಬಂಡವಾಳಕ್ಕನುಗುಣವಾಗಿ ಗೊತ್ತುಮಾಡಬೇಕು.

ಇನ್ನೊಂದೇನೆಂದರೆ, ಈ ಇಲಾಖೆಯನ್ನು ಪುನಃ ರಚಿಸಬೇಕೆಂದು ಸಮಿತಿಯವರು ಸಲಹೆ ಮಾಡಿದ್ದರು. ಈ ವರ್ಷವೂ ಕೂಡ ಅದನ್ನು ಪೂರ್ಣವಾಗಿ ಕಾರ್ಯಗತ ಮಾಡಲಿಲ್ಲ. ಕೆಲವು ಅಂಶಗಳಲ್ಲಿ ಮಾತ್ರ Re-organise ಮಾಡಿದಂತೆ ಮಾಡಿ ಅಲ್ಲಿಗೇ ಬಿಟ್ಟರು. ಇನ್ನಾದರೂ ಇದಕ್ಕೆ ಗಮನಕೊಟ್ಟು ಪುನರ್ರಚನೆ ಮಾಡುವುದು ಅಗತ್ಯ. ಈ ಹೊತ್ತು ಎಷ್ಟೋ ಸಂದರ್ಭಗಳಲ್ಲಿ ಎಸ್ಟಿಮೇಟ್ ಮಾಡತಕ್ಕವರು, ಸೂಪರ್‌ವೈಸ್ ಮಾಡತಕ್ಕವರು ಕೊನೆಗೆ ಬಿಲ್ಲನ್ನು ಮಂಜೂರು ಮಾಡತಕ್ಕವರು ಎಲ್ಲರೂ ಒಬ್ಬರೇ ಅಧಿಕಾರಿಗಳು ಆಗಿರುತ್ತಾರೆ. ಈ ಎಲ್ಲ ಅಧಿಕಾರಗಳೂ ಒಬ್ಬರಲ್ಲಿಯೇ ಇರುತ್ತವೆ. ಇದನ್ನು ಬೇರ್ಪಡಿಸಬೇಕು. ಎಸ್ಟಿಮೇಟ್ ಮಾಡುವವರು ಒಬ್ಬರಾಗಿದ್ದರೆ ಅದನ್ನು ಮಂಜೂರು ಮಾಡುವವರು ಮತ್ತೊಬ್ಬರಿರಬೇಕು. ಇಲ್ಲದಿದ್ದರೆ ಮೇಲ್ಗಡೆ vigilance ಇರುವುದಿಲ್ಲ. ಕೆಲಸವನ್ನು ತನಿಖೆ ಮಾಡುವ ವಿಷಯದಲ್ಲಾಗಲಿ, ಸಾಮಾನುಸರಂಜಾಮುಗಳನ್ನು ನೋಡಿಕೊಳ್ಳುವ ವಿಷಯದಲ್ಲಾಗಲೀ, ಹೆಚ್ಚಿನ ಗಮನ ಕೊಡದೆ ಹೋದರೆ ಏನು ಪ್ರಯೋಜನ? ಎಲ್ಲವೂ ಆಗಿ ಹೋದ ಮೇಲೆ ನೋಡಿದರೆ ತಾನೇ ಏನು ಮಾಡಲು ಸಾಧ್ಯ? ನನಗೆ ತಿಳಿಯಬಂತು, ತುಂಗಾ ಜಲಾಶಯವನ್ನು ಸರ್ಕಾರದ ಚೀಫ್ ಆರ್ಕಿಟೆಕ್ಟ್‌ರವರು ನೋಡಲು ಹೋದಾಗ, ಅದನ್ನೇಕೆ ಡೊಂಕಾಗಿ ಕಟ್ಟಿದ್ದಾರೆಂದು ಪ್ರಶ್ನಿಸಿದರಂತೆ. ಹಾಗೆ ಹೇಳಿದ್ದರಿಂದ ಏನು ಪ್ರಯೋಜನವಾದೀತು? ಎಷ್ಟೋವೇಳೆ ಸ್ಪೆಸಿಫಿಕೇಷನ್ನಿಗೆ ಸರಿಯಾಗಿ ಕೆಲಸವೇ ನಡೆದಿರುವುದಿಲ್ಲ. ಹಳೆಯ ಕೆಲಸಗಳ ವಿಚಾರವಿರಲಿ, ಇತ್ತೀಚೆಗೆ ನಡೆದ ಅನೇಕ ಕಟ್ಟಡದ ಕೆಲಸಗಳಲ್ಲಿಯೂ ಕೂಡ ಅಲ್ಲಿ ಹಾಕಿರುವ ಬಾಗಿಲುಗಳೇ ಕಿತ್ತುಹೋಗಿರುವುದನ್ನು ನಾನು ತೋರಿಸಬಲ್ಲೆ. ಸಿಮೆಂಟ್ ಕಾಂಕ್ರೀಟ್ ಎಲ್ಲಾ ಬಿರುಕು ಬಿಟ್ಟಿದೆ. ಈ ರೀತಿ ಕೆಲಸಗಳು ನಡೆದರೆ ಅದಕ್ಕೆ ಯಾರು ಜವಾಬ್ದಾರರು? ಹಣ ಟ್ರೆಜರಿಯಿಂದ ಹೊರಗೆ ಹೋದಮೇಲೆ ಪುನಃ ನಮ್ಮ ಕೈಗೆ ಸಿಕ್ಕುತ್ತದೆಯೇ? ಆದ್ದರಿಂದಲೇ ನಾನು ಮೊದಲಿನಿಂದಲೂ ಈ ಇಲಾಖೆಯನ್ನು ಪುನರ್ರಚಿಸಬೇಕೆಂದು ಹೇಳುತ್ತಿದ್ದೇನೆ. ನಾನು ಹೇಳುವುದೆಲ್ಲಾ ಅರಣ್ಯರೋದನವಾಗಿದೆ. ಇಂಥ ಪರಿಸ್ಥಿತಿಯಿರುವಾಗ ಈ ಇಲಾಖೆಯನ್ನು ಸುಧಾರಿಸಿ ಅದನ್ನು ಪ್ರಾಮಾಣಿಕವಾದ ರೀತಿಯಲ್ಲಿ ನಡೆಯುವಂತೆ ಮಾಡಬೇಕೆಂಬುದು ನನ್ನ ಆಶಯ.

ಇನ್ನು ನಮ್ಮ ಊರಿಗೆ ಸಂಬಂಧಪಟ್ಟಹಾಗೆ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ನಾನು ಈಗ ತಾನೆ ಕಟ್ಟಡಗಳ ವಿಷಯವಾಗಿ ವಿದ್ಯಾಮಂತ್ರಿಗಳನ್ನು ಕೇಳಿದೆ. ಎಷ್ಟೋ ಕಡೆಗಳಲ್ಲಿ ಸರ್ಕಾರದವರು ಆಸ್ಪತ್ರೆಗಳನ್ನು ಕಟ್ಟಿಸಿದ್ದಾರೆ. ಆದರೆ ಈ ವಿಷಯದಲ್ಲಿ ಅವರ ನೀತಿ ಒಂದೊಂದು ಸಂದರ್ಭಕ್ಕೆ ಒಂದೊಂದು ರೀತಿಯಲ್ಲಿ ಬದಲಾಯಿಸುತ್ತಿರುವಂತೆ ಕಾಣುತ್ತದೆ. ಕೆಲವು ಕಡೆ ಅರ್ಧ ಹಣ ಕೊಡಬೇಕೆಂದು ಹೇಳುತ್ತಾರೆ. ಇನ್ನು ಕೆಲವು ಕಡೆ ಕಟ್ಟಡವನ್ನು ಕಟ್ಟಿಕೊಟ್ಟರೆ ಆಸ್ಪತ್ರೆಯನ್ನು ಮಂಜೂರುಮಾಡುತ್ತೇವೆ ಎನ್ನುತ್ತಾರೆ. ಇನ್ನು ಕೆಲವು ಕಡೆಗಳಲ್ಲಿ ಎಲ್ಲವನ್ನೂ ತಾವೇ ಹಾಕಿಕೊಂಡು ಆಸ್ಪತ್ರೆಯನ್ನು ಕಟ್ಟಿಸಿಕೊಡುತ್ತಾರೆ. ಹೀಗೆ ಒಂದೊಂದು ಕಡೆ ಒಂದೊಂದು ನೀತಿಯನ್ನು ಅನುಸರಿಸಿ ಆಸ್ಪತ್ರೆಗಳನ್ನು ಕೊಡುವುದಾಗಿದೆ. ಇಷ್ಟೆಲ್ಲಾ ಆದಮೇಲೆಯೂ, ಅಲ್ಲಿನ ಡಾಕ್ಟರುಗಳು ನೆಮ್ಮದಿಯಿಂದ ಕೆಲಸ ಮಾಡುವಂತಿಲ್ಲ. ಆ ಡಾಕ್ಟರುಗಳಿಗೆ ಮನೆಗಳನ್ನು ಸರ್ಕಾರದವರೂ ಕಟ್ಟಿಸಿಕೊಟ್ಟಿಲ್ಲ, ಅಲ್ಲಿನ ಜನರೂ ಕಟ್ಟಿಸಿಕೊಟ್ಟಿಲ್ಲ. ಹಳ್ಳಿಗಳಲ್ಲಿ ಮನೆಗಳಿಗೆ ಅಭಾವವೆಂಬುದು ತಮಗೆ ಗೊತ್ತೇಇದೆ. ಅಸುಗೋಡು ಎಂಬಲ್ಲಿನ ಡಾಕ್ಟರು ತಮಗೆ ಮನೆಯಿಲ್ಲವೆಂದು ಪದೇ ಪದೇ ಬರೆಯುತ್ತಿದ್ದಾರೆ. ಅಂಥ ಕಡೆ ಮನೆಗಳ ಏರ್ಪಾಡು ಮಾಡಿಕೊಡದೆ ಹೋದರೆ ಏನು ಮಾಡುವುದು? ಅದರಲ್ಲೂ ಜಾತೀಯತೆಯಿರುವ ಗ್ರಾಮಗಳಲ್ಲಿ ಹರಿಜನ ಡಾಕ್ಟರುಗಳು ಹೋದರಂತೂ ನೀರುಸಿಕ್ಕುವುದೂ ಕಷ್ಟವಾಗಿರುತ್ತದೆ. ಒಂದು ಹೋಟಲುಕೂಡ ಅಲ್ಲಿರುವುದಿಲ್ಲ. ಮರದಡಿಯಲ್ಲಿ ಅನ್ನ ಬೇಯಿಸಿಕೊಂಡು ಕಾಲಹಾಕುತ್ತಿರುತ್ತಾನೆ. ಹೀಗಾದರೆ ಆತನು ಕೆಲಸ ಮಾಡುವುದು ಹೇಗೆ? ಆಸ್ಪತ್ರೆ ಎಷ್ಟು ಅವಶ್ಯಕವೋ, ಅಲ್ಲಿನ ಅಧಿಕಾರಿಗಳಿಗೆ ಮನೆಗಳನ್ನು ಕಟ್ಟಿಸಿಕೊಡುವುದೂ ಅಷ್ಟೇ ಅವಶ್ಯಕವೆನಿಸುತ್ತದೆ. ಆದ್ದರಿಂದ ತಾವು ಯೋಜನೆಗಳನ್ನು ತಯಾರು ಮಾಡುವಾಗ ಅದಕ್ಕೆ ಸಂಬಂಧಪಟ್ಟಂತೆ ಇರುವ ಮುಖ್ಯ ಅವಶ್ಯಕತೆಗಳೇನು ಎಂಬುದನ್ನು ತಿಳಿದು ಮಾಡಬೇಕೇ ಹೊರತು ಸುಮ್ಮನೆ ಪ್ರಭಾವಯುತರಾದ ಜನರು ಬಂದು ಏನೇನು ಬೇಕೆಂದು ಹೇಳಿದರೂ ಮಾಡುವುದು, ಯಾರೋ ಒಬ್ಬರ ಮಾತಿನಮೇಲೆ ಟಿ.ಬಿ ಗಳನ್ನು ಕಟ್ಟುವುದೇ ಆಗಲಿ, ಅವರ ಮನೆಯ ಮುಂದೆ ಟಾರ್ ರೋಡ್ ಹಾಕಿಸುವುದೇ ಆಗಲಿ, ಯಾವುದೇ ಒಂದು ಕಮ್ಯುನಿಟಿಯವರಿಗಾಗಿ ಹೈಸ್ಕೂಲು ಕಟ್ಟಿಸುವುದು, ಹೋಬಳಿಯಲ್ಲಿ ಶೇಕಡ 90 ಭಾಗ ಕೆಲಸವೆಲ್ಲವನ್ನೂ ಯಾರೋ ಒಬ್ಬ ಗಣ್ಯ ವ್ಯಕ್ತಿಯ ಮನೆಯ ಮುಂದೆ ಮಾಡಿ, ಬಾಕಿ ಹಳ್ಳಿಗಳಲ್ಲಿ 2,000, 3,000 ಜನರಿದ್ದರೂ ಒಂದು ಸ್ಕೂಲನ್ನಾಗಲಿ, ಒಂದು ಕಟ್ಟಡದ ರಿಪೇರಿಯನ್ನಾಗಲಿ, ಅಥವಾ ಇನ್ನಾವ ಅಭಿವೃದ್ಧಿ ಕಾರ್ಯವನ್ನೇ ಆಗಲಿ ಮಾಡದೆ ಇರುವುದು ಸರಿಯಲ್ಲ. ಇಂಥ ಹಳ್ಳಿಗಳನ್ನು ನೂರಾರು ಬೇಕಾದರೂ ನಾನು ಹೇಳಬಲ್ಲೆ. ಈ ರೀತಿಯಾಗಿ ಕೆಲಸಗಳು ನಡೆದರೆ ಅದೊಂದು ಯೋಜನಾ ಬದ್ಧವಾದ ಕಾರ್ಯಕ್ರಮವಾಗಿ ಪಂಚವಾರ್ಷಿಕ ಯೋಜನೆಯೆಂದೆನಿಸಿಕೊಳ್ಳುವುದಿಲ್ಲ. ದೇಶದ ಮುಂದೆ ಇರತಕ್ಕ ಯೋಜನೆಗಳೇ ಬೇರೆಯಾಗಿರುತ್ತವೆ, ಅಲ್ಲಿ ಆಗಿರತಕ್ಕ ಕೆಲಸಗಳೇ ಬೇರೆಯಾಗಿರುತ್ತವೆ. ಈ ರೀತಿ ಆಗಬಾರದೆಂಬುದು ನನ್ನ ಆಶಯ. ಇನ್ನು ಕೆಲವು ರಸ್ತೆಗಳ ಮತ್ತು ಸೇತುವೆಗಳ ವಿಚಾರ ಹೇಳಬೇಕೆಂದಿದ್ದೇನೆ. ನಾನು ಕೆಲವು ಕಡೆ ಹೋದಾಗ ಜನರು ಹೇಳಿದ್ದನ್ನು ಹೇಳುತ್ತೇನೆ. ಮಲೆನಾಡಿನ ಕಡೆ ಸರ್ಕಾರದವರು ಹಣ ಖರ್ಚುಮಾಡಿ ಕೆಲವು ರಸ್ತೆಗಳನ್ನು ಮಾಡಿಸಿ ಕೊಟ್ಟಿದ್ದಾರೆ. ಆದರೆ ಡಿಸ್ಟ್ರಿಕ್ಟ್ ಬೋರ್ಡುಗಳು ಈಗ ಇಲ್ಲದೆ ಇರುವುದರಿಂದ ಅವುಗಳನ್ನು ನೋಡಿಕೊಳ್ಳುವವರೇ ಇಲ್ಲವಾಗಿದೆ. ವಿಲೇಜ್ ಪಂಚಾಯಿತಿಗಳಿಗೂ ಕೂಡ ತಾವು ಹೆಚ್ಚಿನ ಹಣವನ್ನು ತಮಗೆ ಬರುವ ರೆವಿನ್ಯೂನಲ್ಲಿ ಬಿಟ್ಟುಕೊಡದಿರುವುದರಿಂದ ಅವುಗಳೂ ಈ ರಸ್ತೆಗಳನ್ನು maintain ಮಾಡತಕ್ಕ ಸ್ಥಿತಿಯಲ್ಲಿಲ್ಲ. ಹೀಗಾಗಿ ಈ ರಸ್ತೆಗಳಿಗೆ ಹಾಕಿರುವ ಹಣ ವ್ಯರ್ಥವಾಗಿದೆ. ಇದಕ್ಕೆ ತಾವು ಗಮನ ಕೊಡಬೇಕು. ಈಗಾಗಲೇ ಅನೇಕ ಮಾನ್ಯ

(ಶ್ರೀ ಎಸ್. ಗೋಪಾಲಗೌಡ.)

ಸದಸ್ಯರು ಈ ವಿಷಯದಲ್ಲಿ ಸಲಹೆಗಳನ್ನು ಕೊಟ್ಟಿದ್ದಾರೆ. ಸರ್ಕಾರದವರು ಈ ಬಗ್ಗೆ ಹೆಚ್ಚಿನ ಗಮನಕೊಟ್ಟು ಈಗ ಖರ್ಚುಮಾಡಿರುವ ದುಡ್ಡು ವ್ಯರ್ಥವಾಗದ ಹಾಗೆ ಮಾಡುವುದಕ್ಕೆ ಪ್ರಯತ್ನಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಕೆಲವು ರಸ್ತೆಗುರುತು ಹಾಕಿದ್ದೇನೆ. Cut motions move ಮಾಡಿಲ್ಲ, move ಮಾಡಿರುವ ಖೋತಾ ಸೂಚನೆಗಳುಕೂಡ ಏನಾಗುತ್ತವೊ ಎಂಬ ಅನುಮಾನ ಬಂದಿದೆ. ಕೆಲವು ರಸ್ತೆಗಳ ಹೆಸರನ್ನು ಹೇಳುತ್ತೇನೆ. ಅವುನೋಣಬೂರು-ರಾವೆ, ಆರಗ-ನಗರ, ಏಡೂರು-ಬೇಗುವಳ್ಳಿ, ಏಡೂರು-ನಿಡುಗೋಡು, ಏಡೂರು-ಗುಬ್ಬಿಗ, ಹಾರೋಕಣ-ಹುಲಿಕಲ್ಲು, ಗೇಣಸಿನಕುಣಿ-ಕಣಿಕೆಬ್ಬೈಲು—ರಸ್ತೆಗಳಾಗಿವೆ. ಹೊನ್ನೇಮರಡು ಪ್ರಾಜೆಕ್ಟು ಕೊಡುವುದರಿಂದ ಅಲ್ಲಿ ಕೆಲವು ರಸ್ತೆಗಳನ್ನು ಮುಂದಿನ ದೃಷ್ಟಿಯಿಂದ ಏರ್ಪಾಡು ಮಾಡಬೇಕಾಗಿದೆ. ಇವೊತ್ತು ನಗರದ ಹತ್ತಿರ ಎರಡು ರಸ್ತೆಗಳಿವೆ, ಅವು ಹುಲಿಕುಲ್ಲು, ಶಿವಮೊಗ್ಗಾ ರಸ್ತೆಗಳು ಅವು ನಾದುರಸ್ತು ಆಗಿ ಬಿದ್ದುಹೋಗವ ಸ್ಥಿತಿಯಲ್ಲಿವೆ. ಕೆಳಗೆ ನದಿಯಿಂದ ಇಳಿದು ಹೋಗುತ್ತಿದ್ದಾರೆ. ಆದಕಾರಣ ಬಹಳ ಜಾಗ್ರತೆಯಾಗಿ ಎರಡು ಸೇತುವೆಗಳನ್ನು ಏರ್ಪಾಡು ಮಾಡುವುದು ಸೂಕ್ತ. ಬಡ್ಜೆಟ್ಟನ್ನು ನೋಡುತ್ತಿದ್ದೇವೆ. ಪಾಂಚವಾರ್ಷಿಕ ಯೋಜನೆಯಮೇಲೆ ಹೋದ curve ಒಂದೇ ಸಲ ಕೆಳಗೆ ಬಂದಿದೆ. ಹೊಸ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ನಮ್ಮಲ್ಲಿ ಹಣವಿಲ್ಲ ಎಂದು oral ಆಗಿ ನಮ್ಮ ಕಡೆ ಡಿವಿಜನಿಗೆ instruction ಕೊಟ್ಟಿದ್ದಾರೆ ಎಂದು ಕೇಳಿದ್ದೇನೆ. ಪ್ರಚಾರದಲ್ಲಿ ಬಹಳ ಕೆಲಸ ನಡೆಯುತ್ತಿದೆ ಎಂದು ಜನರಿಗೆ ಕೇಳಿಬರುತ್ತಿದೆ. ಕಾರ್ಯತಃ ಏನು ಕೆಲಸ ಮಾಡಿದ್ದಾರೆ ಎಂದು ನೋಡಿದರೆ, ಈ ವರ್ಷ ಒದಗಿಸಿರುವ ಹಣ ಸೇತುವೆಗಳಿಗಾಗಲಿ, ರಸ್ತೆಗಳಿಗಾಗಲಿ ಬಹಳ ಕಮ್ಮಿ. ಬಹುಶಃ ಸರ್ಕಾರದವರು ಕೆಲಸಗಳನ್ನು ಆರಂಭಮಾಡುವುದಿಲ್ಲ ಎಂದು ಕಾಣಿಸುತ್ತದೆ. ನಗರದ ಸೇತುವೆಗಳು ಬಹಳ ಅಗತ್ಯವಾಗಬೇಕು. ದಕ್ಷಿಣ ಕನ್ನಡ ಜಿಲ್ಲೆಗೆ ಶಿವಮೊಗ್ಗಾದಿಂದ ದೊಡ್ಡ ರಸ್ತೆಯಲ್ಲಿ ಇದು ಬರುವುದರಿಂದ ಆ ರಸ್ತೆಯನ್ನು ರಿಪೇರಿ ಮಾಡುವುದನ್ನು ಸರ್ಕಾರದವರು ತೀವ್ರವಾಗಿ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕೋಣಂದೂರಿನಿಂದ ಆರಗ, ಕೊಳವಳ್ಳಿ, ಮೂರು ಕೈಸುಂಕದ ಕಟ್ಟೆಗೆ ಸೇರಿರತಕ್ಕ ರಸ್ತೆ, ಏಡೂರು-ಹುಲಿಕಲ್ಲುರಸ್ತೆ, ಗೇಣಸಿನ ಕುಣಿ-ಕಣಿಕೆಬ್ಬೈಲು, ಈ ರಸ್ತೆ ಮುಳುಗಡೆಯಾಗುವ ಪ್ರದೇಶದಲ್ಲಿ, ಹಿಂದೆ ಒಂದು ಸಲ ನಾನು ಮುಖ್ಯ ಮಂತ್ರಿಗಳನ್ನು ಕೇಳಿದಾಗ ಅಲ್ಲಿ ಒಂದು ರಸ್ತೆ ಮಾಡಿಸುತ್ತೇವೆ ಎಂದರು ಹಿಂದೆ ಆ ಸಂದರ್ಭದಲ್ಲಿದ್ದ ಜಿಲ್ಲಾಧಿಕಾರಿಗಳು ಹೋಗಿ ಅಂದಾಜು ಮಾಡಿದರ . ಅದು ಮುಳುಗಿಹೋಗುವ ಪ್ರದೇಶವಾದರೂ ಅಲ್ಲಿ ಜನರಿದ್ದಾರೆ. ಕಂದಾಯ ಸ್ವಲ್ಪ ಬರುತ್ತದೆ. ಪೂರ್ತಿಯಾಗಿ ಹೊನ್ನೇಮರಡು ಆದಮೇಲೆ ಬಹುಭಾಗ ಮುಳುಗಿಹೋಗುತ್ತದೆ. ಆ ಪ್ರದೇಶದಿಂದ ಜನರನ್ನು ಕರೆದುಕೊಂಡು ಬೇರೆ ಕಡೆ ಅವರಿಗೆ ಪುನರ್ವ್ಯವಸ್ಥೆ ಮಾಡಿಲ್ಲ. ಅಲ್ಲಿ ಆಜೂಬಾಜು ಸುತ್ತು ನೀರುಬಿಟ್ಟು ರಸ್ತೆ ಇಲ್ಲದಹಾಗೆ ಮಾಡಿದ್ದಾರೆ. ಎರಡು-ಮೂರು ಲಕ್ಷ ರೂಪಾಯಿಗಳು ಖರ್ಚಾದರೂ ಕೂಡ ಪರವಾ ಇಲ್ಲ. ಹೊನ್ನೇಮರಡು ಪೂರ್ತಿಯಾಗುವ ಹೊತ್ತಿಗೆ ಎಂಟು-ಹತ್ತು ವರ್ಷಗಳಾಗುತ್ತವೆ. ಅಲ್ಲಿಯತನಕ ಜನಗಳಿಗೆ ಅನುಕೂಲ ಮಾಡಿಕೊಡಬೇಕು. ಇಲ್ಲಿರುವ ಹೆನ್ನಾರಪೇಟೆ ರಸ್ತೆ, ಭಟ್ಕಲ್ ರೋಡಿಗೆ ಸೇರಿರತಕ್ಕ ರಸ್ತೆ ಆಗಿದೆ. ಏನಾದರೂ ಮಾಡಿ, ನಾಗರೀಕ ಪ್ರಪಂಚದ ಜೊತೆಗೆ ಸಂಬಂಧ ಇಟ್ಟುಕೊಳ್ಳುವ ರೀತಿಯಲ್ಲಿ ಸರ್ಕಾರದವರು ಪ್ರಯತ್ನ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಸರ್ಕಾರದವರು ಮಾವಿನ ಹೊಳೆ ದೊಡ್ಡ ಸೇತುವೆಯನ್ನು ಕಟ್ಟಿಸುತ್ತಾರೆ ಎಂದು ಕೇಳಿದೆ. ಅದೂ ಕೂಡ ಕೆಲಸ ಪ್ರಾರಂಭವಾಗಿದೆಯೋ ಏನೋ ಗೊತ್ತಿಲ್ಲ. ಮಲೆನಾಡಿನಲ್ಲಿ ಹೊಸದಾಗಿ ಮಾಡಿದ ರಸ್ತೆಗಳಲ್ಲಿ ಮಳೆ ಬಂದರೆ ರಸ್ತೆ ಹಾಗೆಯೇ ಹಳ್ಳವಾಗುತ್ತದೆ. ಅಂತಹ ರಸ್ತೆಗಳಿಗೆ ಜಲ್ಲಿಯನ್ನು ಹಾಕಿಸಿ ಸ್ವಲ್ಪಮಟ್ಟಿಗೆ ಚೆನ್ನಾಗಿರುವ ಹಾಗೆ ಮಾಡಬೇಕು. ಆರಗ-ಶಂಕರವಳ್ಳಿ ರಸ್ತೆಗೆ ಜಲ್ಲಿ ಹಾಕಬೇಕು. ಅದನ್ನು ಇನ್ನೂ ಮಾಡಿಲ್ಲ. ರಸ್ತೆಗಳಿಗೆ ಎಷ್ಟು ಹಣ ಖರ್ಚುಮಾಡಿದರೂ ಅದರಿಂದ ಪೂರ್ತಿ ಉಪಯೋಗವಾಗುವುದಿಲ್ಲ. ಸರಿಯಾಗಿ ಜಲ್ಲಿಯನ್ನು ಹಾಕಿ maintenance ಮಾಡಿಕೊಂಡು ಹೋಗುವುದಕ್ಕೆ ವ್ಯವಸ್ಥೆ ಮಾಡದೆ ಹೋದರೆ ರಸ್ತೆಗಳು ಸರಿಹೋಗುವುದಿಲ್ಲ. ಈ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಮೊದಲನೆಯದಾಗಿ ಹಣ ಖರ್ಚಾಗುವ ವಿಷಯದಲ್ಲಿ ಸರ್ಕಾರದವರು ಒಂದು ಸರಿಯಾದ ನೀತಿಯನ್ನು ತಮ್ಮ ಹಿತದೃಷ್ಟಿಯಿಂದಲೂ ಮತ್ತು ದೇಶದ ಹಿತದೃಷ್ಟಿಯಿಂದಲೂ ಅನುಸರಿಸುವುದು ಬಹಳ ಸೂಕ್ತ. ಇಲ್ಲದಿದ್ದರೆ ಅದು ಮುಂದೆ ಅನರ್ಥಕ್ಕೆ ಎಡೆ ಕೊಡುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಬಿ. ಮಾಧವಾಚಾರ್ (ಭದ್ರಾವತಿ).—ಸಿವಿಲ್ ಕಾಮಗಾರಿ ಬೇಡಿಕೆಯನ್ನು ಸ್ವಾಗತಿಸುತ್ತಾ ನಾನು ಭಧ್ರಾವತಿಗೆ ಸಂಬಂಧಪಟ್ಟ ಕೆಲವು ಕುಂದುಕೊರತೆಗಳನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಭದ್ರಾವತಿ ಬರ್ಮಿಂಗ್‌ಹ್ಯಾಂ ಎನ್ನುವ ಪ್ರಸಿದ್ಧಿ ಪಡೆದಿದೆ. ಆದರೆ ಪ್ರತ್ಯಕ್ಷವಾಗಿ ತಾವು ಸಂಜೆ ಭದ್ರಾವತಿ ನಗರವನ್ನು ಹಾದುಹೋದರೆ ಆ ಊರಿಗೆ ಎಷ್ಟು ಸುಧಾರಣೆ ಇನ್ನೂ ಆಗಬೇಕಾಗಿದೆ, ಪ್ರಯಾಣ ಎಷ್ಟು ಕಷ್ಟವಾಗಿಡೆ ಎನ್ನುವುದು ತಮಗೆ ಅರ್ಥವಾಗುತ್ತದೆ. ಭದ್ರಾವತಿ 40 ಸಾವಿರ ಜನಸಂಖ್ಯೆಯಿಂದ ಕೂಡಿದ ಊರು. ಇಷ್ಟು ಜನಗಳಿಗೂ ಹಳೆ ಊರಿನಿಂದ ಹೊಸ ಊರಿಗೆ ತಿರುಗಾಡುವುದಕ್ಕೆ ಇರುವುದು ಒಂದೇ ರಸ್ತೆ. ಈ ರಸ್ತೆಯಲ್ಲೇ ಊರಿನ ಜನರೆಲ್ಲರೂ ಸಂಚಾರ ಮಾಡಬೇಕಾಗುವುದರಿಂದ ಬಹಳ ಜನಗಳ ಒತ್ತಡದಿಂದ ವಾಹನಗಳ ಸಂಚಾರವು ಕಷ್ಟವಾಗುತ್ತದೆ. ಅದಕ್ಕೋಸ್ಕರ ಭದ್ರಾನದಿ ದಾಟಿದ ಮೇಲೆ B. H. ರಸ್ತೆಗೆ Parallel ಆಗಿ ಪ್ರತಿಯಾಗಿ ಇನ್ನೊಂದು ರಸ್ತೆಯನ್ನು ರಚಿಸಬೇಕೆಂದು ಪೌರಸಭೆಯವರು 60 ಅಡಿ ಜಾಗವನ್ನು ಕುಲ್ಲಾಪಡಿಸಿ ಇಟ್ಟಿದ್ದಾರೆ. ರಸ್ತೆ ನಿರ್ಮಾಣ ಮಾಡುವ ಕೆಲಸ ಪೌರಸಭೆ ಮಾಡತಕ್ಕ ಕೆಲಸವಲ್ಲ. ಅದನ್ನು P.W.D. ಇಲಾಖೆಯವರು ಮಾಡಬೇಕಾಗಿದೆಯೇ ಅದು ಸ್ಥಳೀಯ ಸಂಸ್ಥೆಗಳಿಂದ ಸಾಧ್ಯವಾಗುವ ಕೆಲಸವಲ್ಲ. ವರ್ಷಕ್ಕೊಮ್ಮೆ 5-6 ಸಾರಿ ಅಪಘಾತಗಳು ಸಂಭವಿಸಿ, ಮಕ್ಕಳು, ದೊಡ್ಡವರು, ಅಶಕ್ತರು, ಮುದುಕರು ಪ್ರಾಣವನ್ನು ಕಳೆದುಕೊಳ್ಳುವ ಸಂದರ್ಭಗಳು ಬೇಕಾದಷ್ಟು ಇವೆ. ಆದ್ದರಿಂದ ಜನಗಳಿಗೆ ಅನುಕೂಲ ಮಾಡುವುದಕ್ಕೋಸ್ಕರ B. H. Roadಗೆ ಪ್ರತಿಯಾಗಿ ನೇರವಾಗಿ ಇನ್ನೊಂದು ರಸ್ತೆಯನ್ನು ಪ್ರಾರಂಭ ಮಾಡಬೇಕು. ಹಾಗೆಯೇ ಇನ್ನೊಂದು ಕಾಲು ಸೇತುವೆಯನ್ನು ಭದ್ರಾನದಿಗೆ ಹಳೆ ಊರಿಗೂ ಹೊಸ ಊರಿಗೂ ನಡುವೆ ನಿರ್ಮಾಣ ಮಾಡುವುದು ಅವಶ್ಯಕ, ಅದಲ್ಲದೆ ಭದ್ರಾವತಿಯ ಹಳೆ ಊರಿನಲ್ಲಿ ನೀರಿನ ಅಭಾವ ಜಾಸ್ತಿಯಾಗಿದೆ. ಸರ್ಕಾರದವರು ಈ ನಗರದಲ್ಲಿ ನೀರಿನ ಸರಬರಾಯಿಯನ್ನು

ಉತ್ತಮಪಡಿಸುವುದಕ್ಕೆ ಲಕ್ಷಾಂತರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಟೆಂಡರು ಕರೆದು $1\frac{1}{2}$ ವರ್ಷವಾದರೂ ಕೂಡ ಇವೊತ್ತಿನವರೆಗೂ ಟ್ಯಾಂಕ್ contract ತೆಗೆದು ಕೊಂಡಿರುವವರು ಕೆಲಸ ಪ್ರಾರಂಭ ಮಾಡಲಿಲ್ಲ. ಏತಕ್ಕೋಸ್ಕರ ನಿಧಾನವಾಗಿದೆಯೋ ಗೊತ್ತಿಲ್ಲ. ಆ ಕೆಲಸವನ್ನು ಕೂಡಲೆ ಪ್ರಾರಂಭ ಮಾಡಿ ಹಳೆಯ ನಗರದಲ್ಲಿ ನೀರಿನ ಅಭಾವ ಕಡಿಮೆಯಾಗುವಂತೆ ಕೆಲಸ ಮಾಡಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಇಲ್ಲಿರತಕ್ಕ ಪ್ರೈಮರಿ ಸ್ಕೂಲುಗಳಲ್ಲಿ, ನ್ಯೂ ಟೈಪ್ ಮಿಡ್ಲ್ ಸ್ಕೂಲುಗಳಲ್ಲಿ, 400–500 ವಿದ್ಯಾರ್ಥಿಗಳು ಇದ್ದು ಪಾಠ ಪ್ರವಚನ ನಡೆಸುವುದು ಕಷ್ಟವಾಗುತ್ತದೆ. ಆ ಕಟ್ಟಡಗಳನ್ನು ಸೂಕ್ತ ಬದಲಾವಣೆ ಮಾಡುವುದು ಅತ್ಯಗತ್ಯವಾಗಿದೆ. ತಾಲ್ಲೂಕ್ ಆಫೀಸು, ಹಿಂದೆ ಕಂಟ್ರೋಲ್ ಇದ್ದ ಕಾಲದಲ್ಲಿ, food godown ಆಗಿತ್ತು. ಆ ಕಟ್ಟಡದಲ್ಲಿ ತಾಲ್ಲೂಕ್ ಆಫೀಸನ್ನು ನಡೆಸಿಕೊಂಡು ಬರುತ್ತಿದ್ದಾರೆ. ಹೊಸ ತಾಲ್ಲೂಕ್ ಆಫೀಸನ್ನೂ ಮತ್ತು ಮುನ್‌ಸೀಫ್ ಕೋರ್ಟನ್ನೂ ಸರಕಾರದವರು ಮಂಜೂರು ಮಾಡಿದ್ದಾರೆಂದು ಕೇಳಿದ್ದೇನೆ. ಬಹಳ ಕಷ್ಟಪಟ್ಟು ಈ ಕಟ್ಟಡಕ್ಕೋಸ್ಕರ ಹಳೆ ಊರಿನಲ್ಲಿ ಕೆಲವು ಸೈಟುಗಳನ್ನು ಇಲಾಖೆಯುವರ ವಶಕ್ಕೆ ಬಿಡಿಸಿ ಕೊಟ್ಟಿದ್ದಾರೆ. ಕಟ್ಟಡದ ಕೆಲಸಕ್ಕಾಗಿ ಟೆಂಡರು ವಗೈರೆ ಕಾರ್ಯಕ್ರಮ ಏನೂ ನಡೆದಂತೆ ಇಲ್ಲ. ಅದನ್ನು ತ್ವರಿತಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ರಸ್ತೆಗಳ ವಿಚಾರದಲ್ಲಿ ಬಾಳೆಹೊನ್ನೂರು—ಅನವೇರಿ ರಸ್ತೆಯಲ್ಲಿ ಸಾವಿರ ಜನಸಂಖ್ಯೆ ಮೇಲೆ ಇರುವ ನೂರಾರು ಗ್ರಾಮಗಳಿಗೆ ಡಿಸ್ಟ್ರಿಕ್ಟ್ ಬೋರ್ಡಿನವರು ರಸ್ತೆ ಮಾಡಿಸಿದ್ದಾರೆ. ಅವುಗಳಿಗೆ ಕಾಮಗಾರಿ ಇಲ್ಲದಂತೆ ಆಗಿದೆ. ಆದ್ದರಿಂದ ಜಿಲ್ಲಾ ಕಾಮಗಾರಿ ಕೆಲಸವನ್ನು ಈ ಸಾಲಿನಲ್ಲಿ ಮಾಡಿಸಿಕೊಡಬೇಕು. ಎಂದು ಹೇಳುತ್ತೇನೆ. ಹಾಗೆಯೇ ಮಲೆನಾಡಿನಲ್ಲಿ ಅನೇಕ ರಸ್ತೆಗಳನ್ನು ಈ ಸಾರಿ ಬಡ್ಜೆಟ್ಟಿನಲ್ಲಿ ಸೇರಿಸುತ್ತಾರೆ ಎನ್ನುವ ನಿರೀಕ್ಷಣೆ ಇದೆ. ಅದನ್ನು ಏತಕ್ಕೆ ತೆಗೆದುಕೊಳ್ಳುವುದಿಲ್ಲವೋ ಗೊತ್ತಿಲ್ಲ. ಕಳೆದ ಸಾರಿ ಮಂತ್ರಿಗಳು ಪ್ರವಾಸ ಮಾಡಿದಾಗ ಶಿವಮೊಗ್ಗಾ ಬಾಳೆಬರೆ ಮಾರ್ಗದ inter-provincial ರಸ್ತೆಗೆ ತಕ್ಷಣ ಟಾರ್ ಮಾಡಿಸುತ್ತೇವೆ ಎಂದು ಹೇಳಿದರು.

1-30 P.M.

ಆ ರಸ್ತೆಯಲ್ಲಿ ಗಂಗೊಳ್ಳಿ ಬಂದರಿನಿಂದಲೂ ಇತರ ಕಡೆಗಳಿಂದಲೂ ಬರತಕ್ಕ ನೂರಾರು ಲಾರಿಗಳ ಸಂಚಾರವಿದೆ. ಅದಕ್ಕೆ ಟಾರು ಮಾಡಿದ್ದಾರೆ. ಆದರೆ ಶಿವಮೊಗ್ಗದಿಂದ ಬಾಳೆಬರೆಗೆ ಬರುವ ರಸ್ತೆಯನ್ನು ಸೇರಿಸಿಲ್ಲ. ಟಾರು ಹಾಕಿಸುವ ಕಾರ್ಯಕ್ರಮವನ್ನು ಕೈಗೊಂಡು ಮುಂದುವರಿಯುತ್ತಿದ್ದಾರೆ. ಶಿವಮೊಗ್ಗದಿಂದ ಹುಲಿಕಲ್ಲು, ಬಾಳಬರೆ ಮಾರ್ಗವಾಗಿ ದಕ್ಷಿಣ ಕನ್ನಡಕ್ಕೆ ಹೋಗುವ ರಸ್ತೆ ಬಾಳೆಬರೆ, ಆಗುಂಬೆ, ಚಾರ್ಮಾಡಿ, ಬಿಸಲೆ ಈ ನಾಲ್ಕು ರಸ್ತೆಗಳಿಗೂ ಟಾರು ಹಾಕುವುದಕ್ಕೆ ಮೈಸೂರು ಸರ್ಕಾರದವರು ಪ್ರಯತ್ನ ಮಾಡುತ್ತಿದ್ದಾರೆ. ಮದರಾಸು ಸರ್ಕಾರದವರೂ ಮೈಸೂರಿಗೆ ಸೇರುವ ಭಾಗದಲ್ಲಿ ಒಳ್ಳೆಯ ರಸ್ತೆಯಾಗಬೇಕೆಂದು ಅದಕ್ಕೆ ಟಾರ್ ಮಾಡಿಸಬೇಕೆಂದು ಹೇಳುತ್ತೇನೆ. ಇಷ್ಟು ಭದ್ರಾವತಿಗೆ ಸಂಬಂಧಪಟ್ಟಂತೆ ನಮೂದು ಮಾಡಿರುವ ರಸ್ತೆಗಳ ಕೆಲಸಗಳನ್ನು ಪೂರೈಸಿ ಕೊಡಬೇಕು.

ಭದ್ರಾವತಿಯಲ್ಲಿ ಕಾರ್ಖಾನೆಗಳ ನೀರನ್ನು ಬಿಟ್ಟು ನದಿ ನೀರು ಕೆಟ್ಟುಹೋಗಿ ಜನರು ಸ್ನಾನ ಮಾಡುವುದಕ್ಕೆ ಅನಾನುಕೂಲವಾಗಿರುವುದರಿಂದ ಅಲ್ಲಿ ಒಂದು (Swimming pool) ಈಜುವ ಕೊಳವನ್ನು ಮಾಡಿಸಿ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**Sri V. M. MASCARENHAS** (St. Jhon's Hill).—Mr. Speaker, my Hon'ble friend Sri Gopala Gowda has made a number of important observations on the Public Works Department, which I think require very careful consideration at the hands of the Government. This is one of the departments, Sir, which has been severely criticised in this House year after year by both the Opposition and the Treasury Benches. It is equally true to say that the Government has practically done nothing to meet these observations from both sides. I give you one single instance. Three years ago, there were breaches in Sangenahalli and Thuppadhalli tanks, bringing a total loss of nearly 37 lakhs of rupees to the State of Mysore. The uproar was so great that the Government immediately appointed a committee consisting of three persons to go into the matter. A report immediately was turned out by these three gentlemen who constituted the committee. Till today the Government has not told us what action has been taken on that report and I come to understand that the only action taken was that the Superintending Engineer was promoted as Chief Engineer.

**A MEMBER.**—Who was resposible.

**Sri V. M. MASCARENHAS.**—Yes. If this is the kind of action that the Government takes against those officers of the P.W.D., I would straight-away say that every officer of the P.W.D. will make a large number of mistakes, because that is the only way in which he gets salvation. How long shall this state of affairs continue? This is the largest spending department of the Government. If the activities of the department are not controlled in every sense by the Government, if a careful watch of the moneys which we borrow from the Government of India or from the public at fairly high rates of interest is not kept, what is the future for this State? I only hope that this interim minister—you should not misunderstand the words interim minister—is bent upon seeing that inefficiency everywhere and at every

(SRI V. M. MASCARENHAS.)

level is put down at any cost. I sincerely hope that he will take every possible step to see that these fossilised customs in this department are not only rooted out, but perhaps a few fossilised officers are also dispensed with thereby setting an example to the other members of the department that no more shall the Government tolerate inefficiency, sluggishness and corruption.

*ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ಈ ಇಲಾಖೆಯಿಂದ ವರ್ಷವರ್ಷವೂ ಸುಮಾರು ಹತ್ತುಹನ್ನೆರಡು ಕೋಟಿ ರೂಪಾಯಿ ಖರ್ಚಾಗುತ್ತಿದೆ. ಬಹುಶಃ ಈ ಸಾಲಿನಲ್ಲಿಯೂ ಕೂಡ ಸುಮಾರು ಹನ್ನೆರಡು ಕೋಟಿ ರೂಪಾಯಿಗಳನ್ನು ಈ ಮರಾಮತ್ತು ಇಲಾಖೆಯ ಮೂಲಕ ಖರ್ಚು ಮಾಡಬೇಕೆಂದು ಅಂದಾಜು ಮಾಡಲಾಗಿದೆ. ಮಾನ್ಯ ಸ್ನೇಹಿತರು ಶ್ರೀಮಾನ್ ಮ್ಯಾಸ್ಕರೆನ್‌ಹ್ಯಾಸ್‌ರವರು ಈ ಇಲಾಖೆಯ ವಿಚಾರವನ್ನು ಹೇಳಿದರು. ಅಲ್ಲದೆ ಈ ಇಲಾಖೆಯ ವಿಚಾರವಾಗಿ ಆಗಿಂದಾಗ್ಗೆ ಅನೇಕ ಟೀಕೆಗಳು ಬರುತ್ತಿವೆ; ಇದರ ಪರಿಣಾಮ ಇನ್ನೂ ಯಾವ ರೀತಿಯಲ್ಲೂ ಕಂಡುಬರುತ್ತಿಲ್ಲ. ಈ ಸಂದರ್ಭದಲ್ಲಿ ಸಭೆಯ ಗಮನವನ್ನು ಒಂದು ವಿಷಯಕ್ಕೆ ಸೆಳೆಯಬೇಕಾಗಿದೆ. ಈ ಸಭೆಯವರು ಒಂದು ಅಂದಾಜು ಸಮಿತಿ (Estimates Committee) ಮಾಡಿ, ಆ ಸಮಿತಿಯ ವರದಿ ಕೂಡ ಈ ಸಭೆಗೆ ಬಂದಿದೆ. ಆ ವರದಿಯಲ್ಲಿ ನಮೂದಾಗಿರುವ ಒಂದೆರಡು ವಿಷಯಗಳನ್ನು ಸಭೆಯ ಗಮನಕ್ಕೆ ತರಬೇಕೆಂದು ಇಷ್ಟಪಡುತ್ತೇನೆ. 1954 ನೆಯ ಇಸವಿಯ ವರದಿಯಲ್ಲಿ, ಅಂದಾಜು ಸಮಿತಿಯವರು ಈ ಮರಾಮತ್ ಇಲಾಖೆ ಒಂದನ್ನೇ ತೆಗೆದುಕೊಂಡು, ಇದರ ಕೆಲಸ ಕಾರ್ಯಗಳನ್ನು ಕೂಲಂಕಷವಾಗಿ ವಿಮರ್ಶೆ ಮಾಡಿ ಸಭೆಗೆ ಒಪ್ಪಿಸಿದರು. ಈ ವರದಿಯಲ್ಲಿ ಮಾನ್ಯ ಸ್ನೇಹಿತರಾದ ಶ್ರೀ ಗೋಪಾಲಗೌಡರು ಹೇಳಿದ ವಿಷಯ ಪ್ರಸ್ತಾಪವಾಗಿದೆ. ಈ ಕಂಟ್ರಾಕ್ಟರುಗಳು ಲೈಸೆನ್ಸ್ಡ್ ಕಂಟ್ರಾಕ್ಟರುಗಳಾಗಬೇಕೆಂದು ವರದಿಯಲ್ಲಿ ಶಿಫಾರಸು ಮಾಡಿದ್ದಾರೆ. ಕೆಲಸ ಕಾರ್ಯಗಳು ಬೇಗ ನಡೆಯಲು ಯಾವ ಯಾವ ರೀತಿ ನಡೆಯಬೇಕೆಂಬ ಬಗ್ಗೆ ವಿಮರ್ಶೆ ಮಾಡಿದ್ದಾರೆ. ಇದರ ಜೊತೆಗೆ ಮುಂದೆ ನಡೆಯತಕ್ಕ ರಸ್ತೆ ಕೆಲಸಗಳು, ಸೇತುವೆ ಕೆಲಸಗಳು, ಕಟ್ಟಡಗಳು, ಇವೆಲ್ಲದರಲ್ಲಿಯೂ ಈಗ ಹಾಲಿ ಇರತಕ್ಕ ಪದ್ಧತಿಯಲ್ಲಿ ಒಂದು ನ್ಯೂನತೆ ಕಂಡುಬರುತ್ತದೆ. ಆ ನ್ಯೂನತೆಯೇನೆಂದರೆ, ಯಾವುದಾದರೂ ಒಂದು ಡಿವಿಜನ್ ಅಥವಾ ಸಬ್‌ಡಿವಿಜನ್ನಿನಲ್ಲಿ ಆಗಲಿ ಒಂದು ಸೇತುವೆ ಕೆಲಸ ಅಥವಾ ಕಟ್ಟಡದ ಕೆಲಸ ನಡೆದರೆ, ಅದು ಪೂರೈಸಿದ ಮೇಲೆ ಆ ಕೆಲಸ ನಡೆಯುವುದಕ್ಕೆ ಸಂಬಂಧಪಟ್ಟ ಇಂಜಿನಿಯರು ಯಾರಾರಿದ್ದರು, ಅಸಿಸ್ಟೆಂಟ್ ಇಂಜಿನಿಯರು ಯಾರಾರಿದ್ದರು, ಎಗ್ಜಿಕ್ಯೂಟಿವ್ ಇಂಜಿನಿಯರಾರಾರಿದ್ದರು ಎಂಬುದಕ್ಕೆ ಒಂದು ರಿಜಿಸ್ಟರಿರಬೇಕು. ಕಟ್ಟಡವಾಗಲಿ ಸೇತುವೆಯಾಗಲಿ 'ಕ್ರ್ಯಾಕ್' ಬಂದು ಕೆಲಸ ಚೆನ್ನಾಗಿಲ್ಲವೆಂದು ಹೇಳುವುದಾದರೆ, ಇದಕ್ಕೆ ಯಾರು ಜವಾಬ್ದಾರರು ಎಂಬುದು ಗೊತ್ತಾಗುತ್ತದೆ. ಈ ರೀತಿ ಒಂದು ರಿಜಿಸ್ಟರು ಆಯಾ ಕಟ್ಟಡಕ್ಕೂ ಸೇತುವೆಗೂ ಸಂಬಂಧಪಟ್ಟಂತೆ ಇಡಬೇಕು. ಯಾರು ಯಾರು ಕೆಲಸ ಮಾಡಿದರು, ಎಗ್ಜಿಕ್ಯೂಟಿವ್ ಇಂಜಿನಿಯರು, ಅಸಿಸ್ಟೆಂಟ್ ಇಂಜಿನಿಯರು, ಓವರ್ಸಿಯರು, ಸಬ್ ಓವರ್ಸಿಯರುಗಳು, ಕೆಲಸ ಮಾಡಿಸಿದವರು ಯಾರು ಅಳತೆ ತೆಗೆದುಕೊಂಡವರು ಯಾರು, ಬಿಲ್‌ಪಾಸು ಮಾಡಿದವರು ಯಾರು ಎಂಬ ಚರಿತ್ರೆಯನ್ನು ಕೊಟ್ಟು ರಿಜಿಸ್ಟರನ್ನಿಡುವುದು ಸೂಕ್ತವೆಂದು ಸಮಿತಿಯವರು ಸಲಹೆ ಮಾಡಿದ್ದಾರೆ. ಈ ರೀತಿ ಮಾಡಿದರೆ, ಯಾವುದಾದರೂ ಕಟ್ಟಡಕಟ್ಟಿಸಿದ ಸ್ವಲ್ಪ ದಿವಸದಲ್ಲೇ ಅದಕ್ಕೆ ಅಪಾಯವುಂಟಾದರೆ, ಅಥವಾ ಆಮೇಲೆ ಅದನ್ನು ಪರೀಕ್ಷೆ ಮಾಡಿದಾಗ ಅದಕ್ಕೆ ಉಪಯೋಗಿಸಿರುವ ಪದಾರ್ಥಗಳು ಕೆಟ್ಟದ್ದೆಂದು ಕಂಡುಬಂದರೆ, ಈಗ ಕಂಟ್ರಾಕ್ಟರುಗಳ ಮೇಲೆ ದೂರು ಹಾಕುತ್ತಾರೆ, ಅಥವಾ ಸಬ್‌ಓವರ್ಸಿಯರ ಮೇಲೆ ಹಾಕುತ್ತಾರೆ. ಇದಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿ ಮಾಡಬೇಕಾದರೆ, ಸಂಬಂಧಪಟ್ಟ ಅಸಿಸ್ಟೆಂಟ್ ಇಂಜಿನಿಯರು, ಎಗ್ಜಿಕ್ಯೂಟಿವ್ ಇಂಜಿನಿಯರನ್ನು ಹಿಡಿದು ಅವರಿಗೆ ಶಿಕ್ಷೆ ಮಾಡಿದರೆ, ಈ ಕೆಲಸ ಕಾರ್ಯಗಳು ಬಹುಶಃ ದಕ್ಷತೆಯಿಂದ ನಡೆಯುತ್ತವೆ. ಇದೊಂದು ಸುಲಭ ಮಾರ್ಗ, ಈ ರೀತಿ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ನಮ್ಮ ಮುಂದಿರತಕ್ಕ ಬೇಡಿಕೆಗಳಲ್ಲಿ Communications, ರಸ್ತೆಗಳಿಗೆ ಮತ್ತು ಕಟ್ಟಡಗಳಿಗೆ ಈ ಸಾಲಿನಲ್ಲಿ ಯಥೇಚ್ಛವಾಗಿ ಹಣವನ್ನು ಒದಗಿಸಿಕೊಂಡಿದ್ದಾರೆ. ಅದರಲ್ಲಿಯೂ ರಸ್ತೆಗಳ ಕೆಲಸಕ್ಕೆ ಹೋದ ಸಾಲಿಗಿಂತಲೂ ಹೆಚ್ಚಾಗಿ ಒದಗಿಸಿಕೊಂಡಿದ್ದಾರೆ. ಈ ಸಾಲಿನಲ್ಲಿ "50-Civil Works"ನಲ್ಲಿ 1,11,95,000 ರೂಪಾಯಿಗಳನ್ನು ಆಯವ್ಯಯದ ಅಂದಾಜಿನಲ್ಲಿ ಒದಗಿಸಿದ್ದಾರೆ. ಹಿಂದಿನ ಸಾಲಿನಲ್ಲಿ ಆಯವ್ಯಯದ ಅಂದಾಜು ಪ್ರಕಾರ 61,48,000 ರೂಪಾಯಿಗಳು ಮಾತ್ರವಿತ್ತು. ಅದೇ ರೀತಿಯಾಗಿ Demand No. 41 'A'ನಲ್ಲಿ ಒಟ್ಟು 2,25,68,7,00 ರೂಪಾಯಿಗಳನ್ನು ಒದಗಿಸಿಕೊಂಡಿದ್ದಾರೆ. ಯಥೇಚ್ಛವಾಗಿ ಹಣವೇನೋ ರಸ್ತೆಗಳ ನಿರ್ಮಾಣಕ್ಕೆ, ಸೇತುವೆಗಳ ನಿರ್ಮಾಣಕ್ಕೆ, ಮತ್ತು ಕಟ್ಟಡಗಳಿಗೆ ಖರ್ಚಾಗುತ್ತಿದೆ. ಆದರೆ ಈ ಸಂದರ್ಭದಲ್ಲಿ ಸರ್ಕಾರದವರ ಗಮನಕ್ಕೆ ಒಂದು ವಿಷಯವನ್ನು ತರಬೇಕೆಂದು ಬಯಸುತ್ತೇನೆ. ಅದೇನೆಂದರೆ ಎಷ್ಟೋ ಹಣ, ಕೋಟಿಗಟ್ಟಲೆ ಹಣ, ಈ ರಸ್ತೆಗಳ ರಿಪೇರಿಗೆ, ನಿರ್ಮಾಣಕ್ಕೆ ಖರ್ಚಾಗುತ್ತಿದ್ದರೂ ಕೂಡ ಮಲೆನಾಡು ಪ್ರದೇಶಗಳಲ್ಲಿ ಸರ್ವೇಸಾಧಾರಣವಾಗಿ ಎಲ್ಲ ಭಾಗಗಳಲ್ಲಿಯೂ, ಹಳ್ಳಿಯಿಂದ ಹಳ್ಳಿಗೆ ತಿರುಗಾಡಬೇಕಾದ ರಸ್ತೆಗಳ ವಿಚಾರ ಬಹಳ ಶೋಚನೀಯವಾಗಿ ಉಳಿದಿದೆ. ಮತ್ತು ಅದಕ್ಕೆ ಸಾಕಷ್ಟು ಗಮನವನ್ನು ಸರ್ಕಾರದವರು ಕೊಡುತ್ತಿಲ್ಲವೆಂದರೆ ಅದು ತಪ್ಪಾಗಲಾರದು. ಈಗ ರಸ್ತೆ ರಿಪೇರಿಗೆ, ಹೊಸ ರಸ್ತೆಗಳ ನಿರ್ಮಾಣಕ್ಕೆ ಮತ್ತು ಸಿಮೆಂಟ್ ಕಾಂಕ್ರೀಟ್ ಮಾಡುವುದಕ್ಕೆ ಬಹುಭಾಗದ ಹಣ ಖರ್ಚಾಗುತ್ತಿದೆ. ಆ ಖರ್ಚಿನಲ್ಲಿಯೂ ಕೂಡ ರಿಪೇರಿಗಾಗಿ ವಿನಿಯೋಗಿಸುತ್ತಿರುವ ಹಣಕ್ಕೆ ಸಂಪೂರ್ಣ ಪ್ರತಿಫಲ ಬರುತ್ತಿಲ್ಲ. ಮತ್ತು ಸಿಮೆಂಟ್ ಕಾಂಕ್ರೀಟ್ ರಸ್ತೆಗಳ ನಿರ್ಮಾಣಕ್ಕೋಸ್ಕರವಾಗಿ ಲಕ್ಷಾಂತರ ರೂಪಾಯಿಗಳು ಈಗ ನಾಲ್ಕೈದು ವರ್ಷಗಳಿಂದ ಯಥೇಚ್ಛವಾಗಿ ಖರ್ಚು ಮಾಡಿಕೊಂಡು ಬಂದಿದ್ದಾರೆ. ಈ ಹಣವನ್ನೆಲ್ಲ ಹಳ್ಳಿಯಿಂದ ಹಳ್ಳಿಗೆ ತಿರುಗಾಡುವುದಕ್ಕೆ, inter—village communication roads ಎಂದು ಏನು ಹೇಳುತ್ತೇವೆಯೋ ಆ ರಸ್ತೆಗಳನ್ನು ನಿರ್ಮಾಣ ಮಾಡುವುದಕ್ಕೆ, ಅವುಗಳನ್ನು ರಿಪೇರಿ ಮಾಡುವುದಕ್ಕೆ ಅವುಗಳನ್ನು maintain ಮಾಡುವುದಕ್ಕೆ ಖರ್ಚು ಮಾಡಿಕೊಂಡು

ಬಂದಿದ್ದರೆ ಚೆನ್ನಾಗಿತ್ತು. State Fund Roads ಮಾತ್ರ ತೆಗೆದುಕೊಂಡು ಅವುಗಳ ಕೆಲಸ ಕಾರ್ಯಗಳನ್ನು ಸರ್ಕಾರದವರು ಮಾಡುತ್ತಿದ್ದಾರೆ; ಹಳ್ಳಿಯಿಂದ ಹಳ್ಳಿಗೆ ಹೋಗತಕ್ಕ ರಸ್ತೆಗಳ ನಿರ್ಮಾಣ, ರಿಪೇರಿ ಇತ್ಯಾದಿ ಎಲ್ಲವೂ Local Bodiesಗೆ ಸಂಬಂಧಪಟ್ಟದ್ದು, ಅವರೇ ಮಾಡಬೇಕು, ಆದುದರಿಂದ ಈ ರಸ್ತೆಗಳ ಜವಾಬ್ದಾರಿ ನಮ್ಮದಲ್ಲ ಎಂಬ ಒಂದು ದೃಷ್ಟಿಯಿಂದ ಮಾತನಾಡುತ್ತಾರೆ. ಸರ್ಕಾರದವರು ಅನೇಕ ಸಾರಿ ಈ ಜವಾಬು ಕೊಟ್ಟಿದ್ದಾರೆ. ನಮ್ಮ ದೇಶದಲ್ಲಿರತಕ್ಕ ಎಲ್ಲ ರಸ್ತೆಗಳನ್ನೂ ನೋಡಿಕೊಳ್ಳುವುದಕ್ಕೆ ಮೂರು ಏಜೆನ್ಸಿಗಳಿವೆ. ಒಂದು State Government. ಮತ್ತೊಂದು ಡಿಸ್ಟ್ರಿಕ್ಟ್ ಬೋರ್ಡ್ ಮತ್ತೊಂದು ವಿಲೇಜ್ ಪಂಚಾಯಿತಿ. ವಿಲೇಜ್ ಪಂಚಾಯಿತಿಗಳ ವಿಚಾರ ತೆಗೆದುಕೊಂಡರೆ, ಪಂಚಾಯಿತಿಗಳಲ್ಲಿ ಸಾಕಷ್ಟು ದುಡ್ಡಿಲ್ಲವೆನ್ನುವುದು ಸರ್ವವಿದಿತವಾದ ವಿಚಾರ. ಒಂದು ರಸ್ತೆಯನ್ನು ನಿರ್ಮಾಣ ಮಾಡುವುದಾಗಲಿ, ನಿರ್ಮಾಣ ಮಾಡಿದ ರಸ್ತೆಗಳನ್ನು ರಿಪೇರಿ ಮಾಡುವುದಾಗಲಿ ಪಂಚಾಯಿತಿಗಳಿಂದ ಸಾಧ್ಯವಾಗದ ಕೆಲಸ. ಜಿಲ್ಲಾಬೋರ್ಡು ವಿಷಯವನ್ನು ತೆಗೆದುಕೊಂಡರೆ ಜಿಲ್ಲಾ ಬೋರ್ಡಿಗೆ 1952 ನೆಯ ಇಸವಿ ಆಕ್ಟ್ ಪ್ರಕಾರ ಭೂಕಂದಾಯದಲ್ಲಿ ಶೇಕಡ $12\frac{1}{2}$ ಕೊಡಬೇಕೆಂದು ತೀರ್ಮಾನವಾದ ಮೇಲೆ, ಶೇಕಡ $12\frac{1}{2}$ ಹಣವನ್ನು, ಅಂದರೆ, ಸುಮಾರು $12\frac{1}{2}$ ಲಕ್ಷ ರೂಪಾಯಿಗಳನ್ನು ನಾವು ಜಿಲ್ಲಾಬೋರ್ಡುಗಳಿಗೆ ಕೊಡುತ್ತಿದ್ದೇವೆ. ಅದರ ಜೊತೆಗೆ ಈಗ ನೂರಾರು ಮೈಲಿಗಳ ರಸ್ತೆಯನ್ನು ಜಿಲ್ಲಾಬೋರ್ಡಿನಿಂದ ಸರ್ಕಾರದವರು ತಮ್ಮ State Fund Roads maintenanceಗೆ ಎಂದು ತೆಗೆದುಕೊಂಡಿದ್ದಾರೆ. ಆದ್ದರಿಂದ ಈ inter—Village Communication Roads ಎಲ್ಲವನ್ನೂ ಜಿಲ್ಲಾ ಬೋರ್ಡಿನವರೇ ನೋಡಿ ಕೊಳ್ಳಬೇಕು ಮುಂತಾಗಿ ಹೇಳುತ್ತಿದ್ದಾರೆ ಆದರೆ ಈಗ ಅಲ್ಲಿಯ ಪರಿಸ್ಥಿತಿ ಹೇಗಿದೆ ಎಂದರೆ ಜಿಲ್ಲಾ ಬೋರ್ಡುಗಳಲ್ಲಿ ಹಣವಿಲ್ಲದೆ, ಅವರು ಇದುವರೆಗೂ ಮಾಡಿಕೊಂಡು ಬಂದಿದ್ದ ರಸ್ತೆಗಳನ್ನು ರೀಪೇರಿ ಮಾಡುವುದಕ್ಕೆ ಕೂಡ ಸಾಧ್ಯವಿಲ್ಲದೆ ಆಗಿದೆ. ಇಂಥ ಪರಿಸ್ಥಿತಿಗೆ ಜಿಲ್ಲಾ ಬೋರ್ಡುಗಳು ಬಂದಿವೆ. ಸರ್ಕಾರದಿಂದ ಕೊಡತಕ್ಕ ಸುಮಾರು $12\frac{1}{2}$ ಲಕ್ಷ ರೂಪಾಯಿಗಳನ್ನು ಯಾವ ರೀತಿಯಾಗಿ ಕೊಡುತ್ತಿದ್ದಾರೆಂದರೆ ಇದರಲ್ಲಿ $6\frac{1}{4}$ ಲಕ್ಷ ರೂಪಾಯಿಗಳನ್ನು ಜಿಲ್ಲಾ ಬೋರ್ಡಿಗೆ ದಾಮಾಷಾ ಪ್ರಕಾರ ಹಂಚುತ್ತಿದ್ದಾರೆ. ಉಳಿದ $6\frac{1}{4}$ ಲಕ್ಷ ರೂಪಾಯಿಗಳನ್ನು ಗ್ರಾಂಟ್ ಕೊಟ್ಟ ಹಾಗೆ, ಎಂದರೆ, ಎಲ್ಲಾ ಜಿಲ್ಲಾ ಬೋರ್ಡುಗಳಿಗೂ ಒಂದೇ ಸಮವಾಗಿ ಹಂಚದೆ, ಯಾವ ಯಾವ ಜಿಲ್ಲಾ ಬೋರ್ಡುಗಳಿಗೆ ಎಕ್ಸೈಜ್ ಬಾಬಿನಿಂದ ಬರತಕ್ಕ ಆದಾಯವು ನಿಂತುಹೋಗಿದೆಯೋ ಅಂಥ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಕೆಲವು ಸಂದರ್ಭಗಳಲ್ಲಿ ಹೆಚ್ಚು ಕೊಡುವುದು, ಇನ್ನು ಕೆಲವು ಸಂದರ್ಭಗಳಲ್ಲಿ ಕಡಮೆ ಕೊಡುವುದು ಹೀಗೆ ಆಯಾ ಜಿಲ್ಲಾ ಬೋರ್ಡಿನ ಸ್ಥಿತಿಗತಿಗಳನ್ನನುಸರಿಸಿ ಹಂಚಿಕೆ ಮಾಡಿಕೊಂಡು ಬರುತ್ತಿದ್ದಾರೆ. ಹೀಗಿರುವಾಗ ಅನೇಕ ಜಿಲ್ಲಾ ಬೋರ್ಡುಗಳಲ್ಲಿ ಶೇಕಡ $12\frac{1}{2}$ ಪ್ರಕಾರ ಹಣವನ್ನು ಒಂದೇ ಸಮನೆ ಕೊಡುತ್ತ ಬರದೆ ಇರುವ ಕಾರಣ ಅವರು ರಸ್ತೆ ಕೆಲಸಗಳನ್ನು ಮಾಡಿಸದೆ ಸಂಪೂರ್ಣವಾಗಿ ನಿಂತುಹೋಗಿದೆ. ಹೊಸ ರಸ್ತೆಗಳನ್ನು ನಿರ್ಮಾಣ ಮಾಡದೆ ಇದ್ದರೆ ಹೋಗಲಿ, ಈಗಾಗಲೆ ನಿರ್ಮಾಣ ಮಾಡಿರತಕ್ಕ ರಸ್ತೆಗಳನ್ನು ರಿಪೇರಿ ಮಾಡುವುದಕ್ಕೆ ಕೂಡ ಸಾಧ್ಯವಿವಾಗುತ್ತಿಲ್ಲ.

ಮೈಸೂರು ಜಿಲ್ಲೆಯಲ್ಲಿ ನನಗೆ ತಿಳಿದಿರುವ ಮಟ್ಟಿಗೆ ಕೆಲವು ಮೈಲಿಗಳ ರಸ್ತೆ ನಿರ್ಮಾಣವಾಗಿತ್ತು. ಅದನ್ನು ನೋಡುವವರೇ ಇಲ್ಲದೆ ಅಕ್ಕಪಕ್ಕದ ಜಮೀನ್ದಾರರು ರಸ್ತೆಯನ್ನು ಉತ್ತು ರಸ್ತೆಯೇ ಇಲ್ಲದಂತೆ ಮಾಡಿದ್ದಾರೆ. ಮಾನ್ಯ ಮಂತ್ರಿಗಳು ಮೈಸೂರು ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿದ್ದಾಗ ಈ ರಸ್ತೆಯನ್ನು ನಿರ್ಮಾಣ ಮಾಡಿಸಿದ್ದರು. ಮೈಲಿ ಮತ್ತು ಫರ್ಲಾಂಗ್ ಕಲ್ಲುಗಳನ್ನು ಸಹ ಗುರಿತಿಗಾಗಿ ನಡೆಸಿದರು. ಈಗ ಹಾಲಿ ಮೈಲಿ ಕಲ್ಲು ಮತ್ತು ಫರ್ಲಾಂಗು ಕಲ್ಲುಗಳು ಇನ್ನೂ ಉಳಿದಿವೆ. ಇವುಗಳಿಂದ ಇಂಥಕಡೆ ಜಿಲ್ಲಾ ಬೋರ್ಡು ರಸ್ತೆ ಇತ್ತೆಂದು ಭಾಸವಾಗುತ್ತದೆ. ಜಿಲ್ಲಾ ಬೋರ್ಡುಗಳಲ್ಲಿ ದುಡ್ಡಿಲ್ಲದೆ ಈ ರಸ್ತೆಗಳೆಲ್ಲ ಹಾಳು ಬಿದ್ದಿವೆ. ಜೊತೆಗೆ ಅಲ್ಪ ಸ್ವಲ್ಪ ಹಣ ಒದಗಿಸುವುದನ್ನೂ ಯಾವ ರೀತಿ ಖರ್ಚು ಮಾಡುತ್ತಾರೆಂದರೆ ಅದು ಮತ್ತೂ ವಿಚಿತ್ರವಾದ ಸಂಗತಿ. ಹಣವನ್ನು 500 ರೂಪಾಯಿ, ಒಂದು ಸಾವಿರ ರೂಪಾಯಿ ಪ್ರಕಾರ ಒಂದೊಂದು ರಸ್ತೆಗೂ ಹಂಚುತ್ತಾರೆ. 5 ಮೈಲಿ ಇರುವ ರಸ್ತೆಯಲ್ಲಿ ಯಾರೂ ಹೋಗಿ ನೋಡುವುದಕ್ಕೆ ಸಾಧ್ಯವಿಲ್ಲದೆ ಇರುವ ಕಡೆಗಳಲ್ಲಿ District Board overseer ಮತ್ತು contractor ಸೇರಿಕೊಂಡು, ಕೆಲಸ ಮಾಡಿದ್ದೇವೆಂದು ಹೇಳಿ ಹಣವನ್ನೆಲ್ಲಾ ಖರ್ಚುಮಾಡಿ, ಆ ವರ್ಷದ ಕೆಲಸ ಪೂರೈಸಿತೆಂದು ಮುಗಿಸುತ್ತಾರೆ. ಇದರಿಂದ ಏನಾಗುತ್ತದೆಂದರೆ ಒಂದು ಕಡೆ ಅಲ್ಪಸ್ವಲ್ಪ ಹಣವನ್ನು ಒದಗಿಸುತ್ತಿರುವುದರ ಪ್ರತಿಫಲ ಸರಿಯಾಗಿ ದೊರೆಯುತ್ತಿಲ್ಲ; ಮತ್ತೊಂದು ಕಡೆ ಹಣವನ್ನು ಪೋಲು ಮಾಡಿಕೊಂಡು ತಿನ್ನುವವರಿಗೆ ಅವಕಾಶವಾಗಿರುವುದಲ್ಲದೆ ಸಂಪೂರ್ಣವಾಗಿ ಕೆಲಸ ಮಾಡದೆ ಅಲ್ಪ ಸ್ವಲ್ಪ ಮಣ್ಣು ಹಾಕಿ ಬಿಟ್ಟುಬಿಡುತ್ತಾರೆ. ಆದರೆ ಮಳೆಗಾಲ ಬಂದಾಗ ಮಾಡಿರುವ ಮಣ್ಣು ಕೆಲಸವೂ ಪೂರ್ತಿಯಾಗಿ ಕೊಚ್ಚಿ ಹೋಗುತ್ತದೆ. ಹೀಗೆ ಅಲ್ಪಸ್ವಲ್ಪ ಹಣ ಖರ್ಚು ಮಾಡುವುದರಿಂದ ಪ್ರತಿಫಲ ಎಳ್ಳಷ್ಟೂ ದೊರೆಯುತ್ತಿಲ್ಲ. ವರ್ಷೇ ವರ್ಷೇ ಹಣ ಪೋಲಾಗಿ ಜನತೆಗೆ ಏನೂ ಪ್ರಯೋಜನವಾಗುತ್ತಿಲ್ಲ.

ಸರ್ಕಾರದವರು ಇತ್ತೀಚೆಗೆ ಜಿಲ್ಲಾ ಬೋರ್ಡುಗಳಿಂದ ಸುಮಾರು 700 ಮೈಲಿಗಳ ರಸ್ತೆಯನ್ನು ಇಡೀ ಸಂಸ್ಥಾನದಲ್ಲಿ State Fund Road ಆಗಿ ತೆಗೆದುಕೊಂಡರು. ಆದರೆ State Fund Road ಎಂದು ಹೊಸದಾಗಿ ತೆಗೆದುಕೊಂಡಿರತಕ್ಕ ರಸ್ತೆಗಳ ಸ್ಥಿತಿಗತಿಗಳು ಕೂಡ ಸ್ವಲ್ಪ ಹೆಚ್ಚು ಕಡಿಮೆ ಜಿಲ್ಲಾ ಬೋರ್ಡು ರಸ್ತೆ ಸ್ಥಿತಿಗತಿಗಳು ಹೇಗಿದೆಯೋ ಹಾಗೆಯೇ ಇದೆ. ಸರ್ಕಾರದವರು ಹಿಂದಿನಿಂದಲೂ ಇದ್ದ ಭಾಟಾ ಮಾರ್ಗಗಳು ಅಂದರೆ State Fund Roads Grade No. I ರಸ್ತೆಗಳಿಗೆ asphalting, cement concreting ಮಾಡಿಸುವುದಕ್ಕೆ ಹಣವನ್ನು ಖರ್ಚು ಮಾಡುತ್ತಿರುವ ಕಾಲದಲ್ಲಿ ಜಿಲ್ಲಾ ಬೋರ್ಡಿನಿಂದ ತೆಗೆದುಕೊಂಡಿರುವ ರಸ್ತೆಗಳನ್ನು ಸಮರ್ಪಕವಾದ ರೀತಿಯಲ್ಲಿ maintain ಮಾಡುತ್ತಿಲ್ಲ. ಹೀಗಿರುವುದರಿಂದ ಹಳ್ಳಿಯಿಂದ ಹಳ್ಳಿಗೆ ರಸ್ತೆಗಳಾಗಬೇಕಾದರೆ—ಯಾವ ಏಜೆನ್ಸಿಯಿಂದಲಾದರೂ ಮಾಡಿಸಿ, ಅದು ಮುಖ್ಯವಲ್ಲ—ಒಂದುವೇಳೆ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಹೆಚ್ಚಾಗಿ ಹಣ ಕೊಡಿ, ಅವರೇ ಬೇಕಾದರೂ ಮಾಡಿಸಲಿ, ಪಂಚಾಯಿತಿಗೆ ಹೆಚ್ಚಾಗಿ ಹಣಕೊಟ್ಟು ಅವರಿಂದ ಬೇಕಾದರೂ ಮಾಡಿಸಿ, ಹಾಗಿಲ್ಲದಿದ್ದರೆ ಸರ್ಕಾರದವರೇ ನೇರವಾಗಿ ಇನ್ನೂ ಹೆಚ್ಚು ರಸ್ತೆಗಳನ್ನು ಸ್ಟೇಟ್ ಫಂಡ್ ರಸ್ತೆಗಳೆಂದು ಮಾಡಿ ತಾವೇ ಹೊಸ ರಸ್ತೆ ನಿರ್ಮಾಣಮಾಡುವುದನ್ನು ಮತ್ತು ಮೇಂಟೈನ

(ಶ್ರೀ ಡಿ. ದೇವರಾಜ ಅರಸ್).

ಮಾಡುವ ಕೆಲಸವನ್ನು ವಹಿಸಿಕೊಳ್ಳಬೇಕು ಎಂದು ಸಲಹೆ ಮಾಡುತ್ತೇನೆ. ಇದಕ್ಕೆ ನಮ್ಮಲ್ಲಿ ಹಣವಿಲ್ಲವೆಂದು ಹೇಳುತ್ತಾರೆ. ನಾನು ಸರ್ಕಾರವನ್ನು ಒಂದು ವಿಷಯದಲ್ಲಿ ಪ್ರಶ್ನೆ ಮಾಡಬೇಕಾಗಿದೆ. 1952ರಿಂದ ಈಚೆಗೆ ಸಿಮೆಂಟ್ ಕಾಂಕ್ರೀಟ್ ಮಾಡುವುದಕ್ಕೆ ಎಷ್ಟು ಲಕ್ಷ ರೂಪಾಯಿಗಳು ಖರ್ಚಾಗಿವೆ? ಒಂದು ಮೈಲಿಗೆ ಸುಮಾರು 75-80 ಸಾವಿರ ರೂಪಾಯಿಗಳು ಖರ್ಚಾಗುತ್ತಿವೆಯೆಂದು ಕೇಳುತ್ತೇನೆ. ಕಾಂಕ್ರೀಟ್ ಮಾಡುವುದಕ್ಕೆ ಬದಲಾಗಿ ಆಸ್ಫಾಲ್ಟಿಂಗ್ ಮಾಡಿದ್ದರೆ ಮೈಲಿಗೆ ಸುಮಾರು 18 ಸಾವಿರ ಅಥವಾ 20 ಸಾವಿರ ರೂಪಾಯಿ ಖರ್ಚಾಗುತ್ತದೆ. ಸಿಮೆಂಟ್ ಕಾಂಕ್ರೀಟ್ ಮಾಡಿರತಕ್ಕ ಒಂದು ಮೈಲಿ ರಸ್ತೆಯ ಆಯುಷ್-ಪ್ರಮಾಣ ಎಷ್ಟಿದೆಯೆಂದರೆ ಸುಮಾರು 30 ವರ್ಷವೆಂದು ಹೇಳುತ್ತಾರೆ. ಇದರ ಲೆಕ್ಕ ತೆಗೆದುಕೊಳ್ಳೋಣ. ಒಂದು ಕಡೆ ಸಿಮೆಂಟ್ ಕಾಂಕ್ರೀಟ್ ರಸ್ತೆ, ಇನ್ನೊಂದು ಕಡೆ ಅಸ್ಫಾಲ್ಟಿಂಗ್ ಮಾಡಿರುವ ರಸ್ತೆ ಇದೆ. ಆಸ್ಫಾಲ್ಟ್ ಮಾಡುವುದಕ್ಕೆ ಕ್ಯಾಪಿಟಲ್ ಇನ್ವೆಸ್ಟ್‌ಮೆಂಟ್ ಒಂದು ಮೈಲಿಗೆ 20 ಸಾವಿರ ರೂಪಾಯಿ, ಸಿಮೆಂಟ್ ಕಾಂಕ್ರೀಟ್ ಮಾಡುವುದಕ್ಕೆ ಒಂದು ಮೈಲಿಗೆ 65 ಅಥವಾ 70 ಸಾವಿರ ರೂಪಾಯಿ ಇಟ್ಟುಕೊಳ್ಳಬೇಕಾಗುತ್ತದೆ. 70 ಸಾವಿರ ರೂಪಾಯಿ ಖರ್ಚುಮಾಡಿರುವುದಕ್ಕೆ 30 ವರ್ಷ ಆಯುಸ್ಸು, ಆಸ್ಫಾಲ್ಟ್ ಮಾಡಿರುವ ಒಂದು ಮೈಲಿ ರಸ್ತೆಗೆ 10 ವರ್ಷ ಆಯುಸ್ಸು. ಇದು ಲೆಕ್ಕ ಹಾಕಿದರೆ 30 ವರ್ಷ ಆಯುಸ್ಸು ಆಸ್ಫಾಲ್ಟ್ ರಸ್ತೆಗೆ ಬರಬೇಕಾದರೆ ಒಂದು ಸಲಕ್ಕೆ 30 ಸಾವಿರ ರೂಪಾಯಿನಂತೆ 3 ಸಾರಿ ಖರ್ಚು ಮಾಡಬೇಕಾಗುತ್ತದೆ; ಸಿಮೆಂಟ್ ಕಾಂಕ್ರೀಟ್ ಮಾಡುವುದಕ್ಕೆಷ್ಟು ಖರ್ಚಾಗುತ್ತದೆಯೋ ಅಷ್ಟು ಹಣ ಮೂರು ಅವಧಿಗಳಲ್ಲಿ ಖರ್ಚುಮಾಡಿದರೆ 30 ವರ್ಷ ಬಾಳಿಕೆ ಬರುವಹಾಗೆ ಒಂದು ಮೈಲಿ ಆಸ್ಫಾಲ್ಟ್ ರಸ್ತೆ ಕೂಡ ಮಾಡಬಹುದು. ಹಾಗೆಂದಮೇಲೆ ಕ್ಯಾಪಿಟಲ್ ಇನ್ವೆಸ್ಟ್‌ಮೆಂಟ್ ಏಕದಂ ಒಂದು ಮೈಲಿಗೆ 70 ಸಾವಿರ ರೂಪಾಯಿ ಖರ್ಚುಮಾಡುವುದಕ್ಕೂ 10-10 ವರ್ಷಗಳ ಅವಧಿಯಲ್ಲಿ 20 ಸಾವಿರ ರೂಪಾಯಿ ಖರ್ಚು ಮಾಡುವುದಕ್ಕೂ ವ್ಯತ್ಯಾಸವಿದೆಯೆಂದು ತಾವು ಒಪ್ಪೇ ಒಪ್ಪುತ್ತೀರಿ.

ಅಧ್ಯಕ್ಷರು.—ಈಗ ಸಿಮೆಂಟ್ ಕಾಂಕ್ರೀಟ್ ಮಾಡುವುದನ್ನು ನಿಲ್ಲಿಸಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ನಿಲ್ಲಿಸಿದ್ದರೆ ಸಂತೋಷ, ನಿಲ್ಲಿಸಿ ಎಂದೇ ನಾನು ಹೇಳುತ್ತಿರುವುದು. ಈ ಹಣವನ್ನು ಹಳ್ಳಿಗಳ ಕಡೆ ರಸ್ತೆ ಮಾಡುವುದಕ್ಕೇಕೆ ಉಪಯೋಗಿಸಬಾರದು? ಈಗ ರೂರಲ್ ಡೆವಲಪ್‌ಮೆಂಟ್ ಹೆಡ್‌ನಲ್ಲಿ ರಸ್ತೆಗಳಿಗೆ ಮೂರು ಕಾಸೂ ಇಲ್ಲ, ನೀರು ಸರಬರಾಯಿಗೆ ಮಾತ್ರ ಇದೆ. ಇಂಟರ್ ವಿಲೇಜ್ ಕಮ್ಯೂನಿಕೇಷನ್ ಫಂಡಿಗೆ 50 ಸಾವಿರ ರೂಪಾಯಿಗಳವರೆಗೆ ಒದಗಿಸಿ 20-25 ಸಾವಿರ ರೂಪಾಯಿಗಳು ಖರ್ಚಾಗುತ್ತಿತ್ತು. ಡಿಸ್ಟ್ರಿಕ್ಟ್ ಬೋರ್ಡುಗಳು ಹಣ ಖರ್ಚುಮಾಡಿ ರಸ್ತೆ ಮಾಡುತ್ತವೆಯೇ ಎಂದರೆ ಈಗ ಡಿಸ್ಟ್ರಿಕ್ಟ್ ಬೋರ್ಡುಗಳಲ್ಲಿ ಹಣದ ಅಭಾವ ವಿಪರೀತವಾಗಿದೆ, ಗ್ರಾಮಪಂಚಾಯಿತಿಗೂ ಕೂಡ ಮಾಡುವುದಕ್ಕೆ ಸಾಧ್ಯವಿಲ್ಲ. ಹೀಗಿರುವಾಗ ಹಳ್ಳಿಯಿಂದ ಹಳ್ಳಿಗೆ ಹೋಗುವ ರಸ್ತೆ ಮಾಡಬೇಕಾದರೆ ಏನು ಮಾಡಬೇಕೆಂದು ಸರ್ಕಾರದವರು ತೀವ್ರವಾಗಿ ಯೋಚನೆಮಾಡ ಬೇಕು; ಹಣವಿಲ್ಲವೆಂದು ಹೇಳಿದರೆ ಸಾಲದು, ಹಣ ಒದಗಿಸುವುದಕ್ಕೆ ಈಗ ನಮ್ಮ ಮುಂದಿರುವ ಬಡ್ಜೆಟ್ಟಿನಲ್ಲಿ ಸಾಧ್ಯವಿದೆ, ಸಿಮೆಂಟ್ ಕಾಂಕ್ರೀಟ್ ಮಾಡುವುದಕ್ಕೆ ಬದಲಾಗಿ ಆಸ್ಫಾಲ್ಟ್ ಬೇಕಾದರೆ ಮಾಡಿ, ಅದರಿಂದ ಉಳಿಯುವ ಹಣವನ್ನು ಹಳ್ಳಿಗಳಲ್ಲಿ ರಸ್ತೆ ನಿರ್ಮಾಣಮಾಡುವುದಕ್ಕೆ ಮತ್ತು ಈಗ ಸಾಮಾನ್ಯವಾಗಿ ಹೇಳುತ್ತಿರುವ ರಸ್ತೆ ರಿಪೇರಿಗೆ ಖರ್ಚು ಮಾಡಿ ಎಂದು ಮನವಿ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ ಕಟ್ಟಡಗಳ ವಿಚಾರದಲ್ಲಿ ಅನುಸರಿಸುತ್ತಿರುವ ನೀತಿಯ ಬಗ್ಗೆ ಒಂದೆರಡು ಮಾತನ್ನಾಡಬೇಕಾಗಿದೆ. ಮೊದಲನೆಯದಾಗಿ ಪ್ರೈಮರಿ ಸ್ಕೂಲು ಕಟ್ಟಡಗಳ ವಿಚಾರ ನೋಡೋಣ. ನಾನು ಈಗಾಗಲೆ ಎರಡು ಸಂದರ್ಭಗಳಲ್ಲಿ ಪ್ರೈಮರಿ ಸ್ಕೂಲು ಕಟ್ಟಡಗಳನ್ನು ಮಾಡಬೇಕಾದರೆ ಸರ್ಕಾರದವರು ಈಗ ಹೊಸದಾಗಿ ಮಾಡಿರತಕ್ಕ ಒಂದು ಆಜ್ಞೆಯ ವಿಚಾರದಲ್ಲಿ ಪ್ರಸ್ತಾಪಮಾಡಿದ್ದೇನೆ. ಅದನ್ನೇ ಮತ್ತೆ ಸರ್ಕಾರದಲ್ಲಿ ಒತ್ತಿ ಹೇಳಬೇಕೆಂದು ಅಪೇಕ್ಷೆಪಡುತ್ತೇನೆ. ಅದೇನೆಂದರೆ ದೇಶಾದ್ಯಂತ ಕಂಪಲ್ಸರಿ ಎಜುಕೇಷನ್ ಕೊಡಬೇಕೆಂಬುದು ಸರ್ಕಾರದ ಜವಾಬ್ದಾರಿಯೆಂಬುದನ್ನು ರಾಜ್ಯಾಂಗದಲ್ಲಿ ಒಪ್ಪಿಕೊಂಡಿದ್ದೇವೆ. ಈಗ ಮುಂದುವರಿಯುತ್ತಿರುವ ಮಾರ್ಗದ ಪ್ರಕಾರ, ನೀತಿಯ ಪ್ರಕಾರ 30 ವರ್ಷಗಳಾದರೂ ಕಾನ್ಸ್ಟಿಟ್ಯೂಷನ್ ಅಬ್ಲಿಗೇಷನ್ ಪೂರೈಸುವುದಕ್ಕಾಗುವುದಿಲ್ಲ. ಏಕೆಂದರೆ ಒಂದು ಊರಿನಲ್ಲಿ ಒಂದು ಸ್ಕೂಲು ಕಟ್ಟಬೇಕಾದರೆ 15 ಅಡಿ 20 ಅಡಿ ಇರುವ ಕಟ್ಟಡಕ್ಕೆ 2½ ಸಾವಿರ ರೂಪಾಯಿಗಳ ಖರ್ಚಿದೆ. ಈಗ ಹೊಸ ಮಾದರಿಯಲ್ಲಿ ಕಡಮೆ ಖರ್ಚಿನಿಂದ ಕಟ್ಟಬಹುದು ಎಂದು 1,500 ರೂಪಾಯಿಗಳ ಸ್ಕೀಂ ಇದೆ. 1,500 ಅಥವಾ 2½ ಸಾವಿರ ರೂಪಾಯಿಗಳಲ್ಲಿ ಒಂದು ಊರಿನಲ್ಲಿ ಇಂಥ ಸ್ಕೂಲು ಕಟ್ಟಿದರೆ ಇನ್ನು ಐದು ವರ್ಷಗಳಲ್ಲಿ ಇನ್ನೊಂದು ಕಟ್ಟಡ ಕಟ್ಟಬೇಕಾಗುತ್ತದೆ; ಜನಸಂಖ್ಯೆ ಹೆಚ್ಚಿ 25 ಹುಡುಗರಿರುವ ಕಡೆ 50 ಹುಡುಗರಾದಾಗ ಸ್ಥಳ ಸಾಕಾಗುವುದಿಲ್ಲ. ಈಗ ಒಂದೊಂದು ರೂಮಿರುವುದನ್ನು ದ್ವಿಗುಣ ಮಾಡಬೇಕಾದ ಸಂದರ್ಭ ಬಂದಿದೆ. ಇದಕ್ಕೆ ಹಣ ಬೇಕಲ್ಲವೆ? ಆದ್ದರಿಂದ ಹೊಸದಾಗಿ ಮಾಡುವುದಕ್ಕೆ ಹಣ ಕೊಡುತ್ತೀರಾ? ಈ ರೀತಿಯಾಗಿ ಗೊಂದಲವಾಗಿರುವಾಗ ಎಲ್ಲ ಹಳ್ಳಿಗಳಲ್ಲೂ ಒಂದು ಪ್ರೈಮರಿ ಸ್ಕೂಲಿನ ಅವಶ್ಯಕತೆ ಪೂರೈಸುವುದಕ್ಕೆ ಈಗ ಸರ್ಕಾರದವರು ಹಾಕಿಕೊಂಡು ಹೋಗುತ್ತಿರುವ ಮಾರ್ಗದಲ್ಲಿ ಖಂಡಿತ ಸಾಧ್ಯವಿಲ್ಲ. ಇದಕ್ಕೆ ಸಲಹೆ ಇಷ್ಟೆ. ಸರ್ಕಾರದವರು ಪ್ರೈಮರಿ ಸ್ಕೂಲು ಕಟ್ಟಡಗಳಿಗೆ ಹಿಂದೆ ಒದಗಿಸುತ್ತಿದ್ದ ಹಾಗೆ ಒಂದು ಸಾವಿರ-ಎರಡು ಸಾವಿರ ರೂಪಾಯಿಗಳನ್ನೊದಗಿಸಿ ಸದ್ಯದಲ್ಲಿ 500 ರೂಪಾಯಿಗಳನ್ನು ಮಾತ್ರ ಕೊಡುತ್ತೇವೆ, ಬಾಕಿ ಒಂದು ಸಾವಿರ ರೂಪಾಯಿಗಳಿಗೆ ನೀವು 9 ಅಂಗುಲದ ಗೋಡೆ ಹಾಕಿ ಆಸ್‌ಬೆಸ್ಟಾಸ್ ಮೇಲ್ಛಾವಣಿ ಹಾಕಿ ನಾವು ಹೇಳಿದ ದಾವಾಪಾಷಾ ಪ್ರಕಾರ ಸಿಮೆಂಟ್ ಉಪಯೋಗಿಸಿ ಕಟ್ಟಡ ಕಟ್ಟಿ, 500 ರೂಪಾಯಿಗಳಮೇಲೆ ಕೊಡುವುದಕ್ಕೆ ಸಾಧ್ಯವಿಲ್ಲ, ಸುಲಭದಲ್ಲಿ ನಾವು ಹೇಳಿದಂತೆ ಮಾಡಿದರೆ ಆಗುತ್ತದೆ ಎಂದು ಹೊಸದಾಗಿ ಕಾನೂನು ಮಾಡಿ. ಈಗ ಅನೇಕ ಸ್ಥಳಗಳಲ್ಲಿ ಹೊಸದಾಗಿ ಸರ್ಕಾರದವರು ಮಾಡಿರುವ ಆಜ್ಞೆಯ ಪ್ರಕಾರ ಸ್ಕೂಲು ಕಟ್ಟುವುದಕ್ಕೆ ಅನೇಕರು ಒಪ್ಪುತ್ತಿಲ್ಲ. ಏಕೆಂದರೆ ಈರೀತಿಯಾದ ಕಟ್ಟಡ ಕಟ್ಟಿದರೆ ಬಹುದಿವಸ ನಿಲ್ಲುವುದಿಲ್ಲವೆಂಬುದು ಅವರಿಗೆ ಗೊತ್ತಿದೆ. ಹಲವರಿಗೆ ಹಾರ್ಸ್ ಸೆನ್ಸ್ ಇದೆ. ಇಂಜನಿಯರಷ್ಟು ವಿದ್ಯೆ ಕಲಿತಿಲ್ಲದಿದ್ದರೂ ಈ ರೀತಿ ಮನೆ ಕಟ್ಟಿದರೆ 10 ವರ್ಷ ಕೂಡ ಬಾಳಿಕೆ ಬರುವುದಿಲ್ಲವೆಂಬುದು ಅವರಿಗೆ ಚೆನ್ನಾಗಿ ಗೊತ್ತು, ಅದಕ್ಕೇ ಅವರು ನೀವು ಮೊದಲಿದ್ದಹಾಗೆ ಕಟ್ಟಿಸಿ, ಹೊಸಮಾದರಿ ಬೇಡ ಎಂದು ಹೇಳುತ್ತಿರುವುದು.

ಸ್ಕೂಲಿಲ್ಲದಿದ್ದರೂ ಪರವಾಗಿಲ್ಲ, ಹೊಸ ಮಾದರಿ ಬೇಡ ಎಂದು ಹೇಳುವ ಉದಾಹರಣೆಗಳು ಅನೇಕವಾಗಿವೆ. ಮಾನ್ಯ ಮಂತ್ರಿಗಳಿಗೂ ಅನೇಕರು ದೂರು ಕೊಟ್ಟಿರುವುದು ನನಗೆ ಗೊತ್ತಿದೆ.

2 P.M.

ಆದುದರಿಂದ ಈ ಆರ್ಡರನ್ನು ಬದಲಾವಣೆ ಮಾಡಬೇಕೆಂದು ಹೇಳುತ್ತೇನೆ. ಆದರೆ ಹೀಗೆ ಮಾಡುವುದಕ್ಕೆ ಬದಲಾಗಿ ಇನ್ನೊಂದು ರೀತಿ ಮಾಡಬಹುದು. ಈ ದಿವಸ ಸರ್ಕಾರದವರು ಒಂದು ಪಾಠಶಾಲೆಯ ಕಟ್ಟಡಕ್ಕೆ ಎರಡೂವರೆ ಸಾವಿರ ರೂಪಾಯಿಗಳನ್ನು ಒದಗಿಸುವುದಕ್ಕೆ ಬದಲಾಗಿ ಸರ್ಕಾರದವರು 500 ರೂಪಾಯಿಗಳನ್ನು ಕೊಟ್ಟರೆ ಸಾಕು. ಆ ಮೊಬಲಗಿನಲ್ಲೇ ಒಂದು ಪಾಠಶಾಲೆಯ ಕಟ್ಟಡವನ್ನು ಕಟ್ಟಿಸುವುದಕ್ಕೆ ಸಾಧ್ಯವಿದೆ ಎಂದು ಅಲ್ಲಿಯ ಜನರು ಹೇಳುತ್ತಿದ್ದಾರೆ. ಅದು ಹೇಗೆ ಸಾಧ್ಯವಾಗುತ್ತದೆಂದು ತಾವು ಕೇಳಬಹುದು. ಆ ಜನರೇ ಒಂದು ರೀತಿಯ ಸ್ಪೆಸಿಫಿಕೇಷನ್ ಇಟ್ಟುಕೊಂಡಿದ್ದಾರೆ. ತಾವು ಹೇಳುವ ರೀತಿ ಒಂಬತ್ತು ಇಂಚಿನ ಗೋಡೆಗಳನ್ನು ಹಾಕುವುದಕ್ಕೆ ಬದಲಾಗಿ, ಈ ದಿವಸ ಸರ್ಕಾರದವರು ಖರ್ಚುಮಾಡತಕ್ಕ ಮೊಬಲಗಿಗಿಂತ ಕಡಮೆ ಖರ್ಚಿನಲ್ಲಿ ಆಯಾ ಹಳ್ಳಿಗಳಲ್ಲೇ ಒದಗಬಹುದಾದಂಥ ಮರದ ಸಾಮಾನುಗಳನ್ನು ಅವರೇ ಜೋಡಿಸಿಕೊಂಡು, ಸರ್ಕಾರದವರು ಎರಡು ಸಾವಿರ ರೂಪಾಯಿಗಳಲ್ಲಿ ಕಟ್ಟಿಸತಕ್ಕಂಥ ಒಂದು ರೂಮಿಗೆ ಬದಲಾಗಿ ಎರಡು ರೂಮುಗಳಿರತಕ್ಕಂಥ ಕಟ್ಟಡವನ್ನು ಕೇವಲ ಒಂದೇ ಸಾವಿರದಲ್ಲಿ ಕಟ್ಟಿಸಲು ಸಾಧ್ಯವಿದೆಯೆಂದು ಹೇಳುತ್ತಿದ್ದಾರೆ. ಈ ದಿವಸ ಆ ಹಳ್ಳಿಗಳ ಕಡೆ ಬಹಳ ಬಾಳಿಕೆ ಬರತಕ್ಕಂಥ ಹಲಸು, ಬೇವು, ನೇರಳೆ ಇತ್ಯಾದಿ ಮರಗಳು ಇವೆ. ಈ ಮರಗಳಿಂದ ಆ ಕಟ್ಟಡಕ್ಕೆ ಬೇಕಾಗುವಂಥಾ ಮರದ ಸಾಮಾನುಗಳನ್ನು, ಎಂದರೆ, ಕಿಟಕಿ, ಬಾಗಿಲು ವಗೈರೆ ಸಾಮಾನುಗಳನ್ನು ನಾವೇ ಒದಗಿಸಿಕೊಳ್ಳುತ್ತೇವೆ, ಒಂದು ರೂಮಿಗೆ ಬದಲಾಗಿ ಎರಡು ರೂಮುಗಳಷ್ಟು ಹೆಚ್ಚು ವಿಸ್ತೀರ್ಣವಿರುವಂಥ ಕಟ್ಟಡವನ್ನು ಆ ಹಳ್ಳಿ ಜನರ ಸ್ಪೆಸಿಫಿಕೇಷನ್ ಪ್ರಕಾರ ನಾವೇ ಕಟ್ಟಿಸಿಕೊಳ್ಳುತ್ತೇವೆ, ಆದರೆ ಈ ಕಟ್ಟಡಗಳ ಮೇಲ್ಛಾವಣಿಗೆ ಅಗತ್ಯವಾಗಿ ಬೇಕಾದಂಥ ಖರ್ಚಿಗಾಗಿ ಸರ್ಕಾರದವರು 500 ರೂಪಾಯಿಗಳನ್ನು ಕೊಟ್ಟರೆ ಸಾಕು, ಆ ಕಟ್ಟಡವನ್ನು ನಾವೇ ಕಟ್ಟಿಸಿಕೊಳ್ಳುತ್ತೇವೆಂದು ಅಲ್ಲಿಯ ಜನರು ಕೇಳುತ್ತಿದ್ದಾರೆ. ಈ ರೀತಿ ಸರ್ಕಾರದವರು ಮಾಡಲು ಒಪ್ಪಿಕೊಂಡ ಪಕ್ಷದಲ್ಲಿ ಇನ್ನು ಮೂರು-ನಾಲ್ಕು ವರ್ಷಗಳಲ್ಲೇ ನಮ್ಮ ಸಂಸ್ಥಾನಾವಳಿ ಆಗ ಬೇಕಾಗಿರುವಂಥಾ ಎಲ್ಲಾ ಪ್ರೈಮರಿ ಸ್ಕೂಲು ಕಟ್ಟಡಗಳನ್ನೂ ಕಟ್ಟಿಸಿಕೊಡಲು ಸಾಧ್ಯವಾಗುತ್ತದೆಯೆಂದು ನಾನು ತಿಳಿಸಲಿಚ್ಛಿಸುತ್ತೇನೆ.

ಇನ್ನು ಹೈಸ್ಕೂಲು ಕಟ್ಟಡಗಳ ವಿಚಾರ ತೆಗೆದುಕೊಂಡರೆ ಆಯಾ ಸ್ಥಳದ ಜನರು ಒಂದು ಕಟ್ಟಡಕ್ಕೆ ಅಂದಾಜು 60 ಸಾವಿರ ರೂಪಾಯಿಗಳು ಬೇಕಾಗುತ್ತದೆಂದು ಕಂಡುಬಂದರೆ ಆ ಸ್ಥಳದ ಜನರು ಆ ಕಟ್ಟಡದ ಬಗ್ಗೆ 20 ಸಾವಿರವೋ ಅಥವಾ 25 ಸಾವಿರವೋ ಅಥವಾ 30 ಸಾವಿರವೋ,—ಅದು ನನಗೆ ಖಚಿತವಾಗಿ ಇಷ್ಟೇ ಎಂಬುದು ಗೊತ್ತಿಲ್ಲ,—ಅಷ್ಟು ಮೊಬಲಗನ್ನು ಆ ಸಂಬಂಧಪಟ್ಟ ಜನರು ವಸೂಲುಮಾಡಿ ಸರ್ಕಾರದಲ್ಲಿ ಠೇವಣಿಯಾಗಿ ಇಡಬೇಕೆಂದು ಹೇಳುತ್ತಿದ್ದಾರೆ. ಆ ಕಟ್ಟಡದ ಬಗ್ಗೆ ಇನ್ನುಳಿದ ಖರ್ಚನ್ನು ಸರ್ಕಾರದವರು ವಹಿಸಿಕೊಳ್ಳುತ್ತಾರೆಂಬುದಾಗಿ ಗೊತ್ತಾಗಿದೆ. ಈಗ ಇಂಥ ಒಂದು ಪಾಲಿಸಿ ಇದ್ದ ಹಾಗೆ ಕಾಣುತ್ತಿದೆ. ಆದರೆ ಈ ಕಟ್ಟಡದ ಸಂಬಂಧದಲ್ಲಿ ಆ ಜನರು ಏನಾದರೂ ಅಷ್ಟಿಷ್ಟು ಮೊಬಲಗನ್ನು ಸರ್ಕಾರದಲ್ಲಿ ಡೆಪಾಜಿಟ್ ಮಾಡಿ ನೀವು ಕಾರ್ಯವನ್ನು ಕೈಗೊಳ್ಳಿ ಎಂದು ಹೇಳಿದರೆ ಆ ಹಳ್ಳಿಯ ಜನರು ತಮ್ಮ ಭಾಗದ ಸಂಪೂರ್ಣ ಹಣವನ್ನು ಮುಂಗಡವಾಗಿ ಕೊಡದೆ ಹೋದ ಪಕ್ಷದಲ್ಲಿ ಸರ್ಕಾರದವರು ಆ ಸ್ಕೂಲಿನ ವಿಚಾರಕ್ಕೇ ಕೈಹಾಕುವುದಿಲ್ಲ. ''ನೀವು ನಿಮ್ಮ ಭಾಗದ ದುಡ್ಡನ್ನು ಕೊಟ್ಟಿಲ್ಲ. ಅದಕ್ಕೋಸ್ಕರವಾಗಿ ನಾವು ಆ ಕಟ್ಟಡದ ಕೆಲಸಕ್ಕೆ ಕೈ ಹಾಕಲು ಸಾಧ್ಯವಿಲ್ಲ'' ಎಂಬುದಾಗಿ ಹೇಳುತ್ತಿದ್ದಾರೆ. ಹೀಗಾಗಿ ಈ ದಿವಸ ಅನೇಕ ಕಡೆಗಳಲ್ಲಿ ಅರ್ಧಂಬರ್ಧ ಕೆಲಸನಡೆದಿರತಕ್ಕ ಕಟ್ಟಡಗಳು ಕೂಡಹಾಗೆಯೇ ನಿಂತು ಹೋಗಿರುತ್ತವೆಂದು ನಾನು ಹೇಳುತ್ತಿದ್ದೇನೆ. ಹೀಗೆ ಹತ್ತು ವರ್ಷಗಳಾದರೂ ಒಂದು ಕಟ್ಟಡವನ್ನು ಪೂರ್ತಿ ಮಾಡುವುದಕ್ಕೆ ಆಗದೆ ಇರುವಾಗ, ಹಳ್ಳಿ ಜನರಿಗೆ ಕಡ್ಡಾಯವಾಗಿ ನೀವು 25 ಸಾವಿರ ರೂಪಾಯಿಗಳನ್ನು ಕೊಡಲೇಬೇಕೆಂದು ಒತ್ತಾಯ ಮಾಡುವುದಕ್ಕೆ ಬದಲಾಗಿ ಅವರಿಗೆ ಸಾಧ್ಯವಿದ್ದಷ್ಟು, 10 ಸಾವಿರ ರೂಪಾಯಿಗಳನ್ನು ಕೊಟ್ಟರೂಸಾಕು, ನೀವು ಅಷ್ಟರಲ್ಲೇ ಆ ಮೊಬಲಗಿಗೆ ನಿಮ್ಮ ಕೋಟಾ ಹಾಕಿ ಆ 40 ಸಾವಿರ ರೂಪಾಯಿಗಳಲ್ಲೇ ಎಷ್ಟು ಕಟ್ಟಡ ಕಟ್ಟಿಸಲು ಸಾಧ್ಯವಾಗುತ್ತದೆಯೋ ಅಷ್ಟನ್ನೇ ಆದರೂ ಕಟ್ಟಿಸಿ ಕೊಡಬೇಕೆಂದು ಹೇಳುತ್ತೇನೆ. ತಾವು ದೊಡ್ಡ ಸ್ಕೀಮು ಹಾಕಿಕೊಂಡು 10 ರೂಮುಗಳನ್ನು ಕಟ್ಟುವ ಕಡೆ ನಾಲ್ಕು ರೂಮುಗಳನ್ನೇ ಕಟ್ಟಿಸಿದರೂ ಸಾಕು. ತಾವು ಈ ರೂಲ್ಸುಗಳನ್ನೇ ಅನುಸರಿಸುತ್ತಾ ಹೋದರೆ ನೂರು ವರ್ಷಗಳಾದರೂ ಈ ಕಟ್ಟಡಗಳು ಒಂದೂ ಆಗುವುದಿಲ್ಲ. ಅವರಿಗೆ ನೀವು ಕೇಳುವಷ್ಟು ದುಡ್ಡನ್ನು ಕೊಡುವುದಕ್ಕೂ ಆಗುವುದಿಲ್ಲ. ಆದಕಾರಣ ತಾವು ಈ ಒಂದು ಹೊಸ ಪದ್ಧತಿಯನ್ನು ಅನುಸರಿಸಿದರೆ ತಾವು ಎಲ್ಲ ಕಡೆಗೂ ಈ ಸ್ಕೂಲುಗಳನ್ನು ಒದಗಿಸಲು ಸಾಧ್ಯವಾಗುತ್ತದೆಂದು ನಾನು ಸಲಹೆಮಾಡುತ್ತೇನೆ.

ಶ್ರೀ ಆರ್. ಮುನಿಸ್ವಾಮಯ್ಯ (ಬೆಂಗಳೂರು ಉತ್ತರ—ಅನುಸೂಚಿತ ಜಾತಿಗಳು).—ಸ್ವಾಮಿ, ಬೆಂಗಳೂರು ಉತ್ತರ ತಾಲ್ಲೂಕು ಯಲಹಂಕದಲ್ಲಿ ಕುಡಿಯುವ ನೀರಿನ ಏರ್ಪಾಡನ್ನು ಮಾಡುವುದಕ್ಕಾಗಿ ಕೆಲವು ವರ್ಷಗಳ ಹಿಂದೆ ಅಂದಾಜು ತಯಾರಾಗಿ ಅನಂತರ ಅಲ್ಲಿ ಬೋರ್‌ವೆಲ್‌ಕೂಡ ಆಗಿ ಈಗ ಮುಂದಿನ ಕೆಲಸಗಳು ನಡೆಯದೆ ಆ ಬಾವಿ ಹಾಗೆಯೇ ಉಪಯೋಗಕ್ಕೆ ಬಾರದಂತೆ ಬಿದ್ದಿದೆ. ಆ ಬಾವಿಗೆ ಪೈಪು ಇತ್ಯಾದಿಗಳನ್ನು ಹಾಕತಕ್ಕ ಕಾರ್ಯವನ್ನು ಬಹಳ ದಿವಸಗಳಿಂದಲೂ ಕೈಗೊಂಡಿಲ್ಲ. ಅಲ್ಲಿಯ ಜನರೂ ಮತ್ತು ನಾನೂ ಸಹ ಎಷ್ಟೋ ಸಲ ಆ ಸಂಬಂಧಪಟ್ಟ ಅಧಿಕಾರಿಗಳ ಬಳಿ ಹೋಗಿ ಹೇಳಿಕೊಂಡಿದ್ದಾಯಿತು. ಆದರೆ ಅವರು ಒಂದು ಸಲ ಆ ಕೆಲಸಕ್ಕೆ ಫಂಡ್ಸ್ ಇಲ್ಲ ಎಂದು ಹೇಳುತ್ತಾರೆ, ಮತ್ತೊಂದು ಸಲ ಸಿಬ್ಬಂದಿ ಇಲ್ಲವೆಂದೂ, ಇನ್ನೊಂದುಸಲ ಪೈಪುಗಳಿನ್ನೂ ಬಂದಿಲ್ಲವೆಂದೂ ಹೇಳುತ್ತಿದ್ದಾರೆ. ಆದಕಾರಣ ಈಗಲಾದರೂ ಸರ್ಕಾರದವರು ಈ ವಿಚಾರಕ್ಕೆ ಗಮನಕೊಟ್ಟು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ತಿಳುವಳಿಕೆ ಕೊಟ್ಟು, ಹಾಗೆ ಕೆಲಸ ನಿಧಾನವಾಗುವುದಕ್ಕೆ ಕಾರಣವೇನೆಂಬುದನ್ನು ತನಿಖೆಮಾಡಿ, ಹಾಗೆ ಕೆಲಸವನ್ನು ನಿಧಾನ ಮಾಡಿದವರ ವಿಚಾರದಲ್ಲಿ ಸೂಕ್ತಕ್ರಮ ಕೈಗೊಂಡು ಆ ಕಾರ್ಯವನ್ನು ಬೇಗ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಯಲಹಂಕ ಮಿಡ್ಲ್ ಸ್ಕೂಲಿನ ವಿಚಾರ. ಅಲ್ಲಿ ಆ ಮಿಡ್ಲ್ ಸ್ಕೂಲಿಗಾಗಿ ಒಂದು ಕಟ್ಟಡವನ್ನು

(ಶ್ರೀ ಆರ್. ಮುನಿಸ್ವಾಮಯ್ಯ.)

ಕಟ್ಟಿಸಿಕೊಡಬೇಕೆಂಬುದಾಗಿ ಅಲ್ಲಿನ ಜನಗಳು ಸುಮಾರು 12 ವರ್ಷಗಳಿಂದಲೂ ಒಂದೇ ಸಮವಾಗಿ ಅರಿಕೆ ಮಾಡಿಕೊಳ್ಳುತ್ತಿದ್ದಾರೆ. ಈಗ ಹಾಲಿ ಅಲ್ಲಿ ನಡೆಯುತ್ತಿರುವ ಮಿಡ್ಲ್ ಸ್ಕೂಲು ಅಲ್ಲಿರತಕ್ಕ ಮುಸಾಫರ್ ಖಾನೆಯಲ್ಲಿ ನಡೆಯುತ್ತಿದೆ. ಅದರಲ್ಲಿ ಕೇವಲ ಎರಡು ರೂಮುಗಳು ಮಾತ್ರ ಇವೆ. 600 ಜನ ಹುಡುಗರು ಓದುತ್ತಿದ್ದಾರೆ. ಅಲ್ಲಿ ಹುಡುಗರಿಗೆ ಕುಳಿತುಕೊಳ್ಳುವುದಕ್ಕೂ ಕೂಡ ಸ್ಥಳವಿಲ್ಲ. ಈಗಾಗಲೇ ಅಲ್ಲಿ ಸ್ಕೂಲನ್ನು ಸ್ಥಾಪನೆ ಮಾಡತಕ್ಕ ಸಂಬಂಧದಲ್ಲಿ ಒಂದು ಅಂದಾಜು ಕೂಡ ತಯಾರಾಗಿ ಅಲ್ಲಿಯ ಮುನಿಸಿಪಾಲಿಟಿಯವರು ಸುಮಾರು 4½ ಎಕರೆಯಷ್ಟು ಜಮೀನನ್ನು ಕೂಡ ಈ ಕಟ್ಟಡಕ್ಕಾಗಿ ದಾನ ಮಾಡಿದ್ದಾರೆ. ಆ ಜಮೀನನ್ನು ಸರ್ಕಾರದವರು ತಮ್ಮ ವಶಕ್ಕೆ ತೆಗೆದುಕೊಂಡು ಆ ಬಗ್ಗೆ ಟೆಂಡರನ್ನು ಕರೆದು ಕೆಲಸವನ್ನು ಕೂಡ ಪ್ರಾರಂಭಿಸಿದ್ದರು. ಆದರೆ ಅದನ್ನು ಏಕೋ ಏನೋ ಹಠಾತ್ತಾಗಿ ನಿಲ್ಲಿಸಿಬಿಟ್ಟರು. ಪುನಃ ಇನ್ನೊಂದು ಸಲ ಟೆಂಡರನ್ನು ಕರೆದಿದ್ದರು. ಆದರೆ ಆ ಕೆಲಸ ಮಾತ್ರ ಮುಂದುವರಿಯದೆ ಇನ್ನೂ ಹಾಗೆಯೇ ನಿಂತಿರುತ್ತದೆ. ಆದುದರಿಂದ ಸರ್ಕಾರದವರು ಈ ವಿಚಾರಕ್ಕೆ ಕೂಡಲೆ ನಿಗಾಕೊಡಬೇಕೆಂದು ಅರಿಕೆಮಾಡಿಕೊಳ್ಳುತ್ತೇನೆ. ಮತ್ತು ಈ ಕೆಲಸಕ್ಕೆ ಸಂಬಂಧಪಟ್ಟವರಿಗೆ ಸೂಕ್ತ ತಿಳಿವಳಿಕೆ ಕೊಡಬೇಕೆಂದು ಹೇಳುತ್ತೇನೆ. ಇನ್ನೊಂದು ಸ್ಕೂಲಿನ ವಿಚಾರ ಇದೇ ರೀತಿಯಾಗಿ ಆಗಿದೆ. ಅದು ಬೆಂಗಳೂರು-ತುಮಕೂರು ರೋಡಿನಲ್ಲಿ ಐದು ಮೈಲಿ ದೂರದಲ್ಲಿದೆ. ಆ ಗ್ರಾಮಕ್ಕೆ ಮೈಸೂರ್ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್. ಚನ್ನಯ್ಯನವರು ಬಂದು ಆ ಕಟ್ಟಡದ ಶಂಕುಸ್ಥಾಪನೆ ಮಾಡಿ ಬಂದಿದ್ದಾರೆ. ಆ ಬಗ್ಗೆ 9 ಸಾವಿರ ರೂಪಾಯಿಗಳಲ್ಲಿ ಒಂದು ಕಟ್ಟಡ ಕಟ್ಟಿಸಲು ಪ್ರಾರಂಭಮಾಡಿ ಈಗಾಗಲೇ ಆ ಕೆಲಸ ಬೇಸ್‌ಮೆಂಟ್ ತನಕ ಬಂದು ಅಲ್ಲಿಯವರೆಗೆ ಕಲ್ಲುಕಟ್ಟಡ ಕಟ್ಟಿದ್ದಾರೆ. ಈ ಕಟ್ಟಡದ ವೆಚ್ಚದ ಬಗ್ಗೆ ಜನರು ಒಂದು ಭಾಗವನ್ನೂ ಸರ್ಕಾರದವರು ಮೂರು ಭಾಗವನ್ನೂ ಹಾಕಬೇಕೆಂಬುದಾಗಿತ್ತು. ಈಗ ಆ ಜನರು ಸರ್ಕಾರದವರು ಕೊಡಬೇಕಾದ ¾ ಭಾಗದ ಹಣವನ್ನು ಕೊಡಿ ಎಂದು ಕೇಳಿದರೆ ಸರ್ಕಾರದವರು ನೀವು ಕೊಡಬೇಕಾದ ಹಣವನ್ನು ಡಿಪಾಜಿಟ್‌ಮಾಡಿ, ನೀವು ಅಲ್ಲ ಆ ರೀತಿ ಯಾವ ಕಟ್ಟಡವನ್ನೂ ಕಟ್ಟಬೇಕಾದ್ದಿಲ್ಲ ಎಂದು ಹೇಳುತ್ತಿದ್ದಾರೆ. ಆದರೆ ಇವರು ಹಾಗೆ ಹೇಳುತ್ತಿರುವುದು ನ್ಯಾಯವಲ್ಲವೆಂದು ಕಾಣುತ್ತದೆ. ಇವರು ಕೊಡತಕ್ಕ ಹಣವನ್ನು ಕೊಟ್ಟರೆ ಸಾಕು. ಅಲ್ಲಿ ಈಗಾಗಲೇ ಆ ಜನರು ಮೂರು ನಾಲ್ಕು ರಸ್ತೆ ಕೆಲಸಗಳನ್ನೂ ಕೂಡ ಮಾಡಿಸಿರುತ್ತಾರೆ. ಆದಕಾರಣ ಆ ಕಟ್ಟಡವನ್ನು ಅಲ್ಲಿಯ ರೈತರೇ ಕಟ್ಟಿಸಿಕೊಳ್ಳುವಹಾಗೆ ಮಾಡಿದರೆ ಅನುಕೂಲವಾಗುತ್ತದೆ. ಈಗಾಗಲೇ ಶ್ರೀಮಾನ್ ದೇವರಾಜಅರಸ್ ಅವರು ಹೇಳಿದ ಹಾಗೆ, ಸರ್ಕಾರದವರು ತಾವು ಮಾಡತಕ್ಕ ರೂಲ್ಸು-ಕಾನೂನು, ನಿಬಂಧನೆಗಳನ್ನು ಯಾವತ್ತೂ ಜನರಿಗೆ ಅನುಕೂಲವಾಗತಕ್ಕ ರೀತಿಯಲ್ಲಿ ರಚಿಸಬೇಕು. ಆದರೆ ಈಗ ಹಾಗೆ ಅನುಕೂಲವಿಲ್ಲದೆ ಇರತಕ್ಕಂಥ ರೂಲ್ಸುಗಳನ್ನು ಸ್ವಲ್ಪಮಟ್ಟಿಗೆ ಬದಲಾವಣೆ ಮಾಡತಕ್ಕದ್ದು ಅಗತ್ಯ. ಹೀಗೆ ಮಾಡದೆಹೋದರೆ ಸಾರ್ವಜನಿಕರಿಗೆ ದೊರೆಯತಕ್ಕ ಅನುಕೂಲತೆಗಳು ತಪ್ಪಿಹೋಗಿ, ಈ ಬಾಬಿನಲ್ಲಿ ತೆಗೆದಿಟ್ಟಿರತಕ್ಕ ಹಣ ಲ್ಯಾಪ್ಸಾಗಿ ಹೋಗುತ್ತದೆ. ಆದುದರಿಂದ ಸರ್ಕಾರದವರು ಈ ವಿಚಾರಕ್ಕೆ ಗಮನವನ್ನು ಕೂಡಲೆ ಕೊಡಬೇಕೆಂದು ಅರಿಕೆಮಾಡಿಕೊಳ್ಳುತ್ತೇನೆ.

ಇನ್ನು ದೇವನಹಳ್ಳಿ ಟೌನಿನಲ್ಲಿ ಒಂದು ಪ್ರವಾಸಿ ಮಂದಿರವಿದೆ. ಇದು ಬೆಂಗಳೂರಿಂದ-ನಂದಿ ಬೆಟ್ಟಕ್ಕೆ ಹೋಗತಕ್ಕ ರಸ್ತೆಯಲ್ಲಿ ಮಧ್ಯದಾರಿಯಲ್ಲಿದೆ. ನಂದಿಗೆ ಹೋಗತಕ್ಕ ಮತ್ತು ನಂದಿಕಡೆಯಿಂದ ಬರತಕ್ಕ ಪ್ರಯಾಣಿಕರು ಈ ಪ್ರವಾಸಿ ಮಂದಿರದಲ್ಲಿ ಸ್ವಲ್ಪ ಹೊತ್ತು ತಂಗಿದ್ದು ವಿಶ್ರಾಂತಿಪಡೆದು ಅನಂತರ ಮುಂದಕ್ಕೆ ಪ್ರಯಾಣ ಮಾಡುತ್ತಾರೆ. ಈ ಪ್ರವಾಸಿ ಮಂದಿರಕ್ಕೆ ಈ ದಿವಸ ಸಾಕಷ್ಟು ಕುರ್ಚಿಗಳಿಲ್ಲ. ಇಲ್ಲಿ ಸ್ಥಳವಸತಿಕೂಡ ಸಾಲದು. ಆದುದರಿಂದ ಈ ಪ್ರವಾಸಿ ಮಂದಿರದ ಕಟ್ಟಡಕ್ಕೆ ಮತ್ತೆರಡು ರೂಮುಗಳನ್ನು ಕಟ್ಟಿಸಬೇಕೆಂದೂ, ಈ ಮಂದಿರಕ್ಕೆ ಇನ್ನೂ ಒಂದು ದರ್ಜೆ ಬೆತ್ತದ ಕುರ್ಚಿಗಳನ್ನು ಸರಬರಾಯಿ ಮಾಡತಕ್ಕದ್ದು ಅತ್ಯವಶ್ಯಕವೆಂದೂ ತಿಳಿಸುತ್ತೇನೆ.

ಇನ್ನು ಇದೇ ರೀತಿ ಬೆಂಗಳೂರು ಉತ್ತರ ತಾಲ್ಲೂಕು ಹೆಸರಘಟ್ಟದಲ್ಲಿರತಕ್ಕ ಪ್ರವಾಸಿ ಮಂದಿರಕ್ಕೆ ಕೇವಲ ಎರಡು ರೂಮುಗಳು ಮಾತ್ರ ಇವೆ. ಇಲ್ಲಿಗೆ ಬಂದುಹೋಗತಕ್ಕ ಜನ ಸಂಚಾರಣೆ ವಿಪರೀತ ಜಾಸ್ತಿಯಾಗಿದೆ. ಆದುದರಿಂದ ಈ ಪ್ರವಾಸಿ ಮಂದಿರಕ್ಕೂ ಕೂಡ ಇನ್ನೆರಡು ರೂಮುಗಳನ್ನಾದರೂ ಸೇರಿಸಿ ಇದನ್ನು ವಿಸ್ತರಿಸಿಕೊಡಬೇಕು.

ಈಗ ದೇವನಹಳ್ಳಿ ತಾಲ್ಲೂಕಿಗೂ ಮತ್ತು ಹೊಸಕೋಟೆ ತಾಲ್ಲೂಕಿಗೂ ಮಧ್ಯೆ ಬಾಲೇಪುರದ ಬಳಿ ದಕ್ಷಿಣ ಪಿನಾಕಿನಿ ನದಿಗೆ ಅಡ್ಡವಾಗಿ ಒಂದು ಸೇತುವೆ ಕಟ್ಟಿಸಿಕೊಡಿ ಎಂದು ಅಲ್ಲಿಯ ಜನರು ಬಹಳ ವರ್ಷಗಳಿಂದಲೂ ಕೇಳಿಕೊಳ್ಳುತ್ತಿದ್ದಾರೆ. ಬೆಂಗಳೂರು ಎಗ್ಸಿಕ್ಯುಟಿವ್ ಇಂಜಿನಿಯರೂ ಸಹ ಆ ಸ್ಥಳಕ್ಕೆಹೋಗಿ ಆ ಸ್ಥಳ ಪರೀಕ್ಷೆಯನ್ನೂ ಮಾಡಿಕೊಂಡು ಬಂದಿರುತ್ತಾರೆ. ಬೆಂಗಳೂರಿನ ನಂ. 1 ಸಬ್-ಡಿವಿಜನ್ ಇಂಜಿನಿಯರೂ ಮತ್ತು ದೊಡ್ಡಬಳ್ಳಾಪುರದ ಸಬ್-ಡಿವಿಜನ್ ಇಂಜಿನಿಯರವರೂ ಆ ಸ್ಥಳ ಪರೀಕ್ಷೆ ಮಾಡಿಕೊಂಡು ಬಂದಿರುತ್ತಾರೆ. ಈ ಬಗ್ಗೆ ಒಂದು ಎಸ್ಟಿಮೇಟನ್ನು ಕೂಡ ತಯಾರು ಮಾಡಲಾಗಿತ್ತು. ಟೆಂಡರ್ ಸಹ ಕರೆದಿದ್ದರು. ಪುನಃ ಅದೇನು ಕಾರಣದಿಂದಲೋ ಮತ್ತೊಂದು ಸಾರ್ತಿ ಟೆಂಡರ್ ಕರೆದಿದ್ದಾರೆ. ಆದರೂ ಆ ಕೆಲಸವನ್ನು ಮಾತ್ರ ಇನ್ನೂ ಪ್ರಾರಂಭಿಸಿರುವುದಿಲ್ಲ. ಹಾಗೆ ನಿಲ್ಲಿಸಿಬಿಟ್ಟಿದ್ದಾರೆ. ಆ ನದಿಯಲ್ಲಿ ನೀರಿನ ಶೆಳತ ಹೆಚ್ಚಾಗಿರುತ್ತದೆ. ಆದರೆ ಈಗ ಅಲ್ಲಿ ಒಂದು ಜಿಲ್ಲಾ ಬೋರ್ಡು ರಸ್ತೆಯಿರುತ್ತದೆ. ಜನ ಸಂಚಾರಕ್ಕೆ ತುಂಬಾ ತೊಂದರೆಯಿದೆ. ಆದಕಾರಣ ಸರ್ಕಾರದವರು ಈ ಕೆಲಸಕ್ಕೆ ಕೂಡಲೆ ಗಮನಕೊಡಬೇಕು. ಈಗ ಕರೆದಿರುವ ಟೆಂಡರನ್ನೇ ಅಂಗೀಕಾರವಮಾಡಿ, ಇಲ್ಲವೇ ಜಾಗ್ರತೆ ಬೇರೆ ಒಂದು ಟೆಂಡರನ್ನಾದರೂ ಕರೆದು ಮಳೆಗಾಲ ಪ್ರಾರಂಭವಾಗುವುದಕ್ಕೆ ಮುಂಚಿತವಾಗಿಯೇ ಆ ಸೇತುವೆ ಕಟ್ಟಿಸಿಕೊಡಬೇಕೆಂದು ಕೋರುತ್ತೇನೆ.

ಸ್ವಾಮಿ, ಮಿಂಟೋ ಆಸ್ಪತ್ರೆಯಲ್ಲಿ ಬಹಳ ಜನ ರೋಗಿಗಳು ಟ್ರೀಟ್‌ಮೆಂಟ್ ತೆಗೆದುಕೊಳ್ಳುತ್ತಾ ಇದ್ದಾರೆ. ಮೊದಲು ಹತ್ತಾರುಜನರು ಮಾತ್ರ ಹೋಗುತ್ತಿದ್ದರು. ಈಗ ಸಾವಿರಾರು ಜನ ಕಣ್ಣಾಸ್ಪತ್ರೆಗೆ ಬರುತ್ತಾರೆ ಎಂದು ಕೇಳಿದ್ದೇನೆ. ಈಗಿರತಕ್ಕ ಡಾ|| ನಂಜಪ್ಪನವರು ಅಲ್ಲಿಗೆ ವರ್ಗವಾಗಿ ಬಂದ ಮೇಲೆ ಬಹಳ ಜನ ರೋಗಿಗಳು ಬಂದು ಔಷಧೋಪಚಾರ ಪಡೆಯುತ್ತಿದ್ದಾರೆ. ಆದರೆ ಇನ್‌ಪೇಷಂಟಾಗಿರುವುದಕ್ಕೆ ಸ್ಥಳವಿಲ್ಲ. ಔಟ್‌ಪೇಷಂಟ್ ವಾರ್ಡ್ ಇರುವುದೂ ಕೂಡ ಸಾಲದು. ಆದ್ದರಿಂದ ಒಂದು ಔಟ್‌ಪೇಷಂಟ್ ವಾರ್ಡನ್ನು ಕೂಡಲೆ ಕಟ್ಟಬೇಕೆಂದು ಹೇಳುತ್ತೇನೆ ಮತ್ತು ಈಗಿರತಕ್ಕ ಹಗ್ಗದಿಂದ ಎಳೆಯುತಕ್ಕ

ಲಿಫ್ಟ್ ಏನಿದೆ ಅದನ್ನು ಎಲೆಕ್ಟ್ರಿಕ್ ಲಿಫ್ಟ್ ಆಗಿ ಮಾಡಿಸಿಕೊಡಬೇಕೆಂದು ಹೇಳುತ್ತೇನೆ.

ಬೆಂಗಳೂರು ಉತ್ತರ ತಾಲ್ಲೂಕು ದೇವರಜೀವನಹಳ್ಳಿಯಲ್ಲಿ ಜನ ಸಂಖ್ಯೆಯು ಒತ್ತಡ ಬಹಳ ಜಾಸ್ತಿಯಾಗಿದೆ. ಅಲ್ಲಿರತಕ್ಕ ಸ್ಕೂಲಿನ ಕಟ್ಟಡ ಬಹಳ ಚಿಕ್ಕದು, ಸಾವಿರಾರುಜನ ಹುಡುಗರಿದ್ದರೂ ಆ ಸ್ಕೂಲಿನಲ್ಲಿ ಮಾತ್ರ 60 ಜನ ಹುಡುಗರು ಇದ್ದಾರೆ. ಆದ್ದರಿಂದ 300 ಜನ ಹುಡುಗರು ಓದುವುದಕ್ಕೆ ಅವಕಾಶವಾಗುವಂತೆ ಒಂದು ಸ್ಕೂಲ್ ಕಟ್ಟಡ ಕಟ್ಟಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

*ಶ್ರೀ ಟಿ. ಜಿ. ತಿಮ್ಮೇಗೌಡ (ತಿಪಟೂರು).—ಸ್ವಾಮಿ, ತಿಪಟೂರು ವ್ಯಾಪಾರಕೇಂದ್ರ ಮತ್ತು ಮುನ್ಸೀಫ್ ಮ್ಯಾಜಿಸ್ಟ್ರೇಟ್ ಕೋರ್ಟ್ ಇರುವ ಸ್ಥಳವಾಗಿದ್ದು ಪ್ರತಿದಿನಸವೂ ನಮ್ಮ ರೈತ ಬಾಂಧವರು ತಿಪಟೂರಿಗೆ ಬರಬೇಕಾಗಿದೆ. ಆದ್ದರಿಂದ ಹಳ್ಳಿಗಾಡುಗಳಿಂದ ಈ ಟೌನ್‌ಗೆ ಬರತಕ್ಕ ಪಂಚಾಯಿತ್ ರಸ್ತೆ, ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆ ಇವುಗಳನ್ನೆಲ್ಲಾ ಪಬ್ಲಿಕ್‌ವರ್ಕ್ಸ್ ಇಲಾಖೆಯವರಿಗೇ ಸೇರಿಸಿ ರಸ್ತೆ ಕಾಂಗಾರಿ ಕೆಲಸವನ್ನು ಕಾರ್ಯಗತ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಏಕೆಂದರೆ ಈ ರಸ್ತೆಗಳ ರಿಪೇರಿ ಅನೇಕ ವರ್ಷಗಳಿಂದ ಆಗಿಲ್ಲ.

ಮೊದಲು ತಿಪಟೂರು ಮುನ್ಸೀಫ್-ಮ್ಯಾಜಿಸ್ಟ್ರೇಟ್ ಕೋರ್ಟೂ ಮತ್ತು ಮೊದಲನೆ ಮ್ಯಾಜಿಸ್ಟ್ರೇಟ್ ಕೋರ್ಟೂ ಬೇರೆ ಬೇರೆಯಾಗಿದ್ದವು. ಈಗ ಸುಮಾರು 12-15 ವರ್ಷಗಳಿಂದಲೂ ಒಂದೇ ಆಗಿ ಈ ಮುನ್ಸೀಫ್ ಮ್ಯಾಜಿಸ್ಟ್ರೇಟ್ ಕೋರ್ಟಿಗೆ 25 ಸಾವಿರ ರೂಪಾಯಿಗಳವರೆಗೂ ಬಾಡಿಗೆಯನ್ನು ಕೊಟ್ಟಿರುತ್ತಾರೆ. ಅದಕ್ಕೆ ಈ ಸಭೆಯಲ್ಲಿ ಮನವಿಮಾಡಿಕೊಳ್ಳುವುದೇನೆಂದರೆ ಸುಮಾರು 25 ಸಾವಿರ ರೂಪಾಯಿಗಳ ಬಾಡಿಗೆ ಕೊಡುವುದಕ್ಕೆ ಬದಲಾಗಿ ಮೊದಲೇ ಕಟ್ಟಡ ಕಟ್ಟಿಸಿದ್ದರೆ ಆ ದುಡ್ಡು ಉಳಿಯುತ್ತಾ ಇತ್ತು. ಆದ್ದರಿಂದ ಈಗಲಾದರೂ ತಿಪಟೂರು ಮುನ್ಸೀಫ್-ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಕೂಡಲೇ ಕಟ್ಟಡ ಕಟ್ಟಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಈಗಿರತಕ್ಕ ಕಟ್ಟಡದಲ್ಲಿ ಸ್ಥಳವಸತಿ ಬಹಳ ಕಡಿಮೆ. ರೈತಬಾಂಧವರು ಕೋರ್ಟಿಗೆ ಬರತಕ್ಕವರಿಗೆ ಕುಳಿತುಕೊಳ್ಳುವುದಕ್ಕೆ ನಿಂತುಕೊಳ್ಳಲಿಕ್ಕೆ ಸ್ಥಳ ಇರುವುದಿಲ್ಲ. ಈ ಕಾರಣಗಳಿಂದ ಕೂಡಲೇ ಕಟ್ಟಡ ಕಟ್ಟಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದಕ್ಕೆ ತಿಪಟೂರು ಟೌನ್ ಮುನಿಸಿಪಾಲಿಟಿಯವರು ಸುಮಾರು 20-30 ಎಕರೆಯಷ್ಟು ಜಮೀನನ್ನು ಅಕ್ವೈರ್ ಮಾಡಿಕೊಂಡು ರಿಸರ್ವ್ ಆಗಿಟ್ಟಿದ್ದಾರೆ.

ತಿಪಟೂರು ತಾಲ್ಲೂಕು ನೊಣವಿನಕೆರೆ ಏರಿಯನ್ನು ವಿಸ್ತರಿಸಬೇಕೆಂದು ಅನೇಕ ಸಾರಿ ಈ ಮಾನ್ಯ ಸಭೆಯಲ್ಲಿ ಕೇಳಿದ್ದೇನೆ. ಅಲ್ಲಿ ರಸ್ತೆ ಬಹಳ ಚಿಕ್ಕದಾಗಿದ್ದು ಅನೇಕ ಬಸ್ಸುಗಳು ಮತ್ತು ಗಾಡಿಗಳು ತಿರುಗಾಡುವಾಗ ಸ್ಥಳವಿಲ್ಲದೆ ಅಪಾಯಕರವಾದ ಘಟನೆಗಳು ಸಂಭವಿಸಿ, ಗಾಡಿಗಳು, ಮೋಟಾರುಗಳು ಕೆರೆಯಲ್ಲಿ ಬಿದ್ದಿರುವ ಅನೇಕ ಸಂದರ್ಭಗಳು ಇವೆ. ಆದ್ದರಿಂದ ಈ ಕೆರೆ ಏರಿಯನ್ನು ಮೊದಲು ವಿಸ್ತರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಆ ರೀತಿ ವಿಸ್ತರಿಸಿ ಅದರ ಪಕ್ಕದಲ್ಲಿ ಕಬ್ಬಿಣದ ಕಂಬಿಗಳನ್ನು ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ತಿಪಟೂರು ತಾಲ್ಲೂಕಿನ ಹೊನ್ನವಳ್ಳಿ ಗ್ರಾಮದ ಹೊಸ ಪಟ್ಟಣದ ಹತ್ತಿರ ಊರಿನ ಮುಂಭಾಗದಲ್ಲಿ ಒಂದು ಹಳ್ಳ ಇದೆ. ಆ ಹಳ್ಳಕ್ಕೆ ಸೇತುವೆ ಕಟ್ಟಿಸಬೇಕೆಂದು ಅನೇಕಸಾರಿ ರೈತ ಬಾಂಧವರು ಡಿಸ್ಟ್ರಿಕ್ಟ್ ಬೋರ್ಡಿನವರನ್ನು ಸಹ ಕೇಳಿಕೊಂಡರು. ಈಗಾಗಲೇ ಸುಮಾರು ಹತ್ತು ವರ್ಷ ಆಗಿದೆ, ಆದರೂ ಕೂಡ ಇನ್ನೂ ಕಾರ್ಯಗತವಾಗಿಲ್ಲ. ಆದ್ದರಿಂದ ಆ ಸೇತುವೆಯನ್ನು ಕಟ್ಟಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ತಿಪಟೂರು ತಾಲ್ಲೂಕು ಬೊಮ್ಮಲಾಪುರದ ಕಡೆಗೆ ಹೋಗುವ ಪಂಚಾಯಿತಿ ರಸ್ತೆಯನ್ನು ಸೇರುವ ಬೊಮ್ಮಲಾಪುರ ಕೆರೆಯ ಅಂಗಳದಲ್ಲಿ ಒಂದು ಸೇತುವೆ ಅವಶ್ಯಕವಾಗಿ ಆಗಬೇಕಾಗಿದೆ. ಈ ಸೇತುವೆಯನ್ನು ಕೂಡಲೇ ಕಟ್ಟಿಸಬೇಕಾಗಿ ಕೇಳಿಕೊಳ್ಳುತ್ತೇನೆ. ಕೊನೆಯದಾಗಿ ತಿಪಟೂರು ಟೌನಿನ ರಸ್ತೆಗಳನ್ನು ಪಬ್ಲಿಕ್ ವರ್ಕ್ಸ್ ಇಲಾಖೆಯವರೇ ಸೇರಿಸಿಕೊಂಡು ಕಾರ್ಯಗತಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು-ಮೂಡಿಗೆರೆ—ಅನುಸೂಚಿತ ಜಾತಿಗಳು).—ಸ್ವಾಮಿ, ಮಾನ್ಯ ಅಧ್ಯಕ್ಷರೆ, ಈಗ ನಮ್ಮ ಮುಂದೆ ಇರುವ ಈ ಖೋತಾ ನಿರ್ಣಯವನ್ನು ಅನುಮೋದಿಸುತ್ತೇನೆ. ಚಿಕ್ಕಮಗಳೂರು ರಸ್ತೆಯಲ್ಲಿ ಸಿಮೆಂಟ್ ರಸ್ತೆ ಆಗುತ್ತಾ ಇದೆ. ಐದು ಮೈಲಿಗಳನ್ನು ಒಂದು ಕಡೆಯಿಂದಲೂ, ಇನ್ನೊಂದು 5 ಮೈಲಿಗಳನ್ನು ಇನ್ನೊಂದು ಕಡೆಯಿಂದಲೂ ಪ್ರಾರಂಭ ಮಾಡಿದ್ದಾರೆ. ಈ ಸಿಮೆಂಟ್ ರಸ್ತೆಗಳು ಈಗ ಆಗುತ್ತಿರುವ ಸ್ಥಿತಿಯನ್ನು ನೋಡಿದರೆ ಎಷ್ಟು ವರ್ಷ ಅವು ಬಾಳಿಕೆ ಬರುತ್ತವೆ ಎಂಬ ನಿರೀಕ್ಷೆ ಇದೆಯೋ ಅಷ್ಟು ವರ್ಷ ಬರುವುದಿಲ್ಲವೋ ಏನೋ ಎಂದು ನನಗೆ ಶಂಕೆಯಾಗಿದೆ. ಏಕೆಂದರೆ ಎಷ್ಟು ಮುತುವರ್ಜಿಯಿಂದ, ಶ್ರದ್ಧೆಯಿಂದ ಮಾಡಬೇಕೋ, ಎಷ್ಟು ಪ್ರಮಾಣದಲ್ಲಿ ಸಿಮೆಂಟು ಮುಂತಾದ ಸಾಮಾನುಗಳನ್ನು ಉಪಯೋಗಿಸಬೇಕೋ ಅಷ್ಟು ಪ್ರಮಾಣದಲ್ಲಿ ಸಾಮಾನುಗಳನ್ನು ಉಪಯೋಗಿಸುತ್ತಾ ಇಲ್ಲ ಎಂಬುದು ನಮ್ಮ ಗಮನಕ್ಕೆ ಬಂದಿದೆ. ಸಿಮೆಂಟ್ ರಸ್ತೆಯನ್ನು ಮಾಡುವಾಗಲೇ ಅದರ ಪಕ್ಕದಲ್ಲಿ ಮಾಡಬೇಕಾದ ರಸ್ತೆ ಕಾಂಗಾರಿಯನ್ನು ಕೂಡ ಮಾಡಿದ್ದರೆ ಅನುಕೂಲವಾಗಿತ್ತು. ಸಿಮೆಂಟ್ ರಸ್ತೆ ಕೇವಲ 12 ಅಡಿ ಇರುವುದರಿಂದ ಅಲ್ಲಿ ಒಂದು ಬಸ್ಸು ಹೋದರೆ ಇನ್ನೊಂದು ಬಸ್ಸು ಬರುವುದಕ್ಕೆ ಕಷ್ಟವಾಗುತ್ತದೆ. ಅಲ್ಲದೆ ಜನರ ಸಂಚಾರಕ್ಕೂ ಕೂಡ ಬಹಳ ಅಡಚಣೆಯಾಗುತ್ತದೆ. ಆದ್ದರಿಂದ ಸಿಮೆಂಟ್ ರಸ್ತೆ ಮಾಡುವ ಕಾಲದಲ್ಲೇ ಸಿಮೆಂಟ್ ರಸ್ತೆಯ ಅಕ್ಕ ಪಕ್ಕದಲ್ಲಿ ರಸ್ತೆಯನ್ನು ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಈಗ ಸಿಮೆಂಟ್ ರಸ್ತೆಗಳನ್ನು ಮಾಡುತ್ತಿರುವ ವೇಗದಲ್ಲಿ ವರ್ಷಕ್ಕೆ 10 ಮೈಲಿಯಂತೆ ಮಾಡಿದರೆ 70-80 ಮೈಲಿ ಇರತಕ್ಕ ರಸ್ತೆಗಳನ್ನು ಪೂರ್ತಿ ಸಿಮೆಂಟ್ ರಸ್ತೆಗಳನ್ನಾಗಿ ಮಾಡಬೇಕಾದರೆ 7-8 ವರ್ಷಗಳಾದರೂ ಬೇಕಾಗಬಹುದು. ಅಷ್ಟೇ ಅಲ್ಲದೆ ಈ ರಸ್ತೆಗಳನ್ನು ಸಿಮೆಂಟ್ ರಸ್ತೆಗಳನ್ನಾಗಿಯೋ ಟಾರು ರಸ್ತೆಗಳನ್ನಾಗಿಯೋ ಮಾಡಲಾಗುತ್ತದೆ ಎಂಬ ನಿರೀಕ್ಷಣೆಯಿಂದ annual ರಿಪೇರಿ ಸಹ ತೃಪ್ತಿಕರವಾಗಿ ಮಾಡದೇ ಇದ್ದಾರೆ ಎಂದು ಹೇಳದೇ ವಿಧಿಯಿಲ್ಲ. Annual Grant ಮಲೆನಾಡಿಗೆ ಹೆಚ್ಚಾಗಿ ಕೊಡುವುದಕ್ಕೆ ಏರ್ಪಾಡು ಮಾಡುವುದಲ್ಲದೇ ಈಗ ದುರಸ್ತಾಗದೇ ಇರುವ ರಸ್ತೆಗಳನ್ನು ಟಾರ್ ರಸ್ತೆಗಳನ್ನಾಗಿ ಯಾರಾದರೂ ಮಾಡಿದರೆ ಪ್ರಯಾಣಕ್ಕೆ ಅನುಕೂಲವಾಗುತ್ತದೆ. ಚಿಕ್ಕಮಗಳೂರು ಮಾರ್ಗವಾಗಿ ಅನೇಕ ಕಡೆಗಳಿಂದ ಧರ್ಮಸ್ಥಳಕ್ಕೆ ಹೋಗುವ ಪ್ರಯಾಣಿಕರು ಬಹಳವಾಗಿ ಇರುತ್ತಾರೆ. ಕಡೂರು-ಮಂಗಳೂರು ರಸ್ತೆಯಲ್ಲಿ 8-10 ಬಸ್ಸುಗಳು ಓಡಾಡುತ್ತಾ ಇದ್ದರೂ ಕೂಡ ಅನೇಕ ವೇಳೆ ಬಸ್ಸಿನಲ್ಲಿ ಸ್ಥಳ ಸಿಕ್ಕದೇ ಇರುವ ಸಂದರ್ಭಗಳೂ ಉಂಟು. ಆದ್ದರಿಂದ ಈ ರಸ್ತೆಗಳ ಸ್ಥಿತಿ ಪ್ರಯಾಣಕ್ಕೆ

(ಶ್ರೀ ಜಿ. ಪುಟ್ಟಸ್ವಾಮಿ.)

ಬಹಳ ಅನಾನುಕೂಲವಾಗಿರುವುದರಿಂದ ಗರ್ಭಿಣಿ ಹೆಂಗಸರು ಬಸ್ಸಿನಲ್ಲಿ ಪ್ರಯಾಣ ಮಾಡಿದರೆ ಎಲ್ಲಿ ಗರ್ಭಪಾತವಾಗುತ್ತದೋ ಎಂಬ ಹೆದರಿಕೆಯಿಂದ ಗರ್ಭಿಣಿಯರು ಪ್ರಯಾಣ ಮಾಡುವುದು ಕಡಿಮೆಯಾಗಿದೆ. ಇಂಥ ರಸ್ತೆಗಳನ್ನು ಸರಿಯಾದ ಸ್ಥಿತಿಯಲ್ಲಿಡುವುದು ಸರ್ಕಾರದವರ ಪ್ರಥಮ ಕರ್ತವ್ಯ. ಆದಕಾರಣ ಈ ಇಲಾಖೆಗೆ ಹೆಚ್ಚು ಹಣ ಕೊಡಬೇಕಾದದ್ದು, ಅದರಲ್ಲೂ ಮಲೆನಾಡಿಗೆ ಹೆಚ್ಚಿಗೆ ವಿನಿಯೋಗಿಸಬೇಕಾದದ್ದು, ಅವಶ್ಯಕ. ಜೊತೆಗೆ ಮಂತ್ರಿಗಳು Chief Engineer ರವರು ಹೋಗಿ ಆಗಾಗ್ಗೆ ಈ ರಸ್ತೆಗಳನ್ನು ಅಜಮಾಯಿಷಿ ಮಾಡಬೇಕೆಂದು ಹೇಳುತ್ತೇನೆ. ಆಗ ರಸ್ತೆಯಲ್ಲಿ ಎಷ್ಟು ಕೊರಕಲುಗಳು ಬಿದ್ದಿರುತ್ತವೆಂಬುದು ಅವರಿಗೇ ಮನವರಿಕೆಯಾಗುತ್ತದೆ. ರಸ್ತೆಗಳಲ್ಲಿ ಯಾವಾಗ ನೋಡಿದರೂ ಜಲ್ಲಿ ಮಾತ್ರ ಬಿದ್ದಿರುತ್ತದೆ. ಯಾವಾಗ ರಸ್ತೆಗಳಿಗೆ ರಿಪೇರಿಯಾಯಿತು, ಅಥವಾ ಯಾವಾಗ ಆಗುತ್ತದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಆದಕಾರಣ ಸರ್ಕಾರದವರು ಹೆಚ್ಚಿಗೆ ಗ್ರಾಂಟ್ ಕೊಡುವುದರ ಜೊತೆಗೆ ವಿಶೇಷ ನಿಗಾ ಕೊಟ್ಟು ಇವುಗಳನ್ನು ರಿಪೇರಿ ಮಾಡಿಸುವುದಕ್ಕೆ ಮೊದಲು ಪ್ರಯತ್ನಿಸಬೇಕು. ಜಿಲ್ಲಾ ಬೋರ್ಡ್ ರಸ್ತೆಗಳನ್ನು ಪಿ.ಡಬ್ಲ್ಯು.ಡಿ. ಇಲಾಖೆಯವರು ಈಚೆಗೆ ವಹಿಸಿಕೊಂಡಿದ್ದಾರೆಂದು ಕೇಳಿದ್ದೇನೆ. ಅವರು ವಹಿಸಿಕೊಂಡ ಮೇಲಂತೂ ಈ ರಸ್ತೆಗಳು ಇನ್ನೂ ಕೆಟ್ಟುಹೋಗಿವೆ. ಯಾವಾಗ ಕೇಳಿದರೂ ಗ್ರಾಂಟಿಲ್ಲವೆಂದು ಹೇಳುತ್ತಾರೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಂದು ಸೇತುವೆ ಕಟ್ಟಲಿಕ್ಕೆ ಈಗ ಸುಮಾರು 10 ವರುಷಗಳ ಹಿಂದೆಯೇ ಎಸ್ಟಿಮೇಟ್ ಆಯಿತು. ಇನ್ನೂ ಅದನ್ನು ಮಾಡಿಸಿ ಎಂದರೆ ಗ್ರಾಂಟ್ ಇಲ್ಲವೆನ್ನುತ್ತಾರೆ. ಇದಕ್ಕೆ ಆಡಳಿತದಲ್ಲಿ ದಕ್ಷತೆಯಿಲ್ಲವೆಂದು ಹೇಳಬೇಕೇ ? ಆದ್ದರಿಂದ ತಾವು ಏಕೆ ಹೀಗೆ ನಿಧಾನವಾಗುತ್ತದೆಂದು ನೋಡಬೇಕು. ಮಾನ್ಯ ಮಂತ್ರಿಗಳೇನೋ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಆದರೂ ನಾವು ನಿರೀಕ್ಷಣೆ ಮಾಡಿದಷ್ಟು ಮಾಡಿಲ್ಲ.

ಇನ್ನು ಕಟ್ಟಡಗಳ ವಿಚಾರದಲ್ಲಿ ಒಂದು ಮಾತು ಹೇಳುತ್ತೇನೆ. ಮಲೆನಾಡಿನ ಕಡೆಯಿರುವ ಅನೇಕ ಬಿಲ್ಡಿಂಗ್‌ಗಳನ್ನು ನೋಡಿದರೆ ಜೋರಾಗಿ ಒಮ್ಮೆ ಮಳೆ ಬಂದರೆ ಬಿದ್ದು ಹೋಗುವಂತಿವೆ. 20-30 ವರ್ಷಗಳ ಹಳೆಯ ಕಟ್ಟಡಗಳಾಗಿರುತ್ತವೆ. ಇಲಾಖೆಯವರು ಮಾತ್ರ ಬಂದೋಬಸ್ತಾಗಿವೆಯೆಂದು certificate ಕೊಟ್ಟಿರುತ್ತಾರೆ. ಅಂಥವು ಎಷ್ಟೋ ಮಳೆ ಬಂದಾಗ ಅರ್ಧಕ್ಕರ್ಧಕ್ಕೆ ಬಿದ್ದು ಹೋಗಿವೆ. ಇಂಥವುಗಳನ್ನು ಇಲಾಖೆಯವರು ಸರಿಯಾಗಿ ನೋಡಿಕೊಳ್ಳಬೇಕು. ಈಗ ಎರಡು ವರ್ಷಗಳ ಹಿಂದೆ ಮಳೆ ಬಹಳ ಬಂದಾಗ ಅನೇಕ ಸ್ಕೂಲು ಕಟ್ಟಡಗಳು ಬಿರುಕು ಬಿಟ್ಟಿದ್ದುವು. ಯಾವಾಗ ಕಟ್ಟಡ ಬೀಳುತ್ತವೆಯೋ ಎಂಬ ಭಯದಿಂದ ವಿದ್ಯಾರ್ಥಿ ಜನಗಳೂ ಹೆದರಿ ಎಷ್ಟೋ ಕಟ್ಟಡಗಳನ್ನು ಖಾಲಿ ಮಾಡಿದ್ದರು. ಇಂಥ ಬಿಲ್ಡಿಂಗುಗಳ ವಿಚಾರದಲ್ಲಿ ನಿಗಾತೆಗೆದುಕೊಂಡು ಸರಿಯಾದ ಬಂದೋಬಸ್ತು ಮಾಡುವುದು ಅವಶ್ಯಕವೆಂದು ಹೇಳುತ್ತೇನೆ.

ಆಮೇಲೆ, ಬಿಲ್ಡಿಂಗುಗಳನ್ನು ರಿಪೇರಿ ಮಾಡುವುದಕ್ಕೆ ಕೊಡುವುದರಲ್ಲಿ ಸಾಮಾನ್ಯವಾಗಿ ಯಾರು ಬಿಲ್ಡಿಂಗ್ ಕಟ್ಟಿರುತ್ತಾರೋ ಅವರಿಗೇ annual ರಿಪೇರಿಗೆ ಕೊಡುವ ಪದ್ಧತಿಯಿದೆ. ಈ ರೀತಿ ಕೊಡುವುದರಿಂದ ಅವರು ಸರಿಯಾಗಿ ಮಾಡುತ್ತಾರೋ ಇಲ್ಲವೋ ಎಂಬ ಅನುಮಾನವಿದೆ. ಏಕೆಂದರೆ, ರಿಪೇರಿ ಮಾಡಿದೆಯೆಂದು ಅವರು ಹೇಳುತ್ತಾರೆ, ಕಟ್ಟಡಗಳನ್ನು ನೋಡಿದರೆ ಮಾತ್ರ ಮೊದಲಿದ್ದಂತೆಯೇ ಇರುತ್ತವೆ. ಆದ್ದರಿಂದ ಬಿಲ್ಡಿಂಗುಗಳನ್ನು ರಿಪೇರಿಗೆ ಕೊಡುವ ಪದ್ಧತಿಯನ್ನು ಬದಲಾವಣೆ ಮಾಡಬೇಕು. ಕೆಲವು ಈ ಸಭೆಯ ಮಾನ್ಯ ಸದಸ್ಯರು ಕಂಟ್ರಾಕ್ಟರುಗಳನ್ನು ರಿಜಿಸ್ಟರ್ ಮಾಡಿಸಿ, ರಿಜಿಸ್ಟರ್ ಆಗಿರುವ ಕಂಟ್ರಾಕ್ಟರುಗಳಿಗೇ ಕೊಡಬೇಕೆಂದು ಹೇಳಿದರು. ಹೀಗೆ ಮಾಡಿದರೆ ಸಣ್ಣಪುಟ್ಟ ಕಂಟ್ರಾಕ್ಟರುಗಳು ಎಲ್ಲಿ ಬಿಟ್ಟು ಹೋಗುತ್ತಾರೋ ಎಂಬ ಹೆದರಿಕೆಯಿದೆ. ಬಡವರಿಗೆ ಬಲ್ಲಿದರಿಗೆ ಎಲ್ಲರಿಗೂ ಅವಕಾಶ ಸಿಕ್ಕುವಂತಿರಬೇಕು. ಯಾರು ಯಾರು ಕಂಟ್ರಾಕ್ಟ್ ಮಾಡುವುದಕ್ಕೆ ಮುಂದೆ ಬರುತ್ತಾರೋ ಅವರಿಗೆಲ್ಲರಿಗೂ ಕೊಡಬೇಕಾದದ್ದು ನ್ಯಾಯ. ಇದರಲ್ಲಿ ಕೋಮುವಾರು ಭಾವನೆಗೆ ಅವಕಾಶವಿರಕೂಡದು. ಆದರೆ ಸಮಾನಾವಕಾಶವಿರಬೇಕು. ಆದ್ದರಿಂದ ಸರ್ಕಾರದವರು ತನಿಖೆ ಮಾಡಿ ಯಾರುಯಾರು ಕಾಂಟ್ರಾಕ್ಟ್ ಕೇಳುತ್ತಾರೋ ಅವರೆಲ್ಲರಿಗೂ ಸಿಕ್ಕುತ್ತಿದೆಯೇ ಎಲ್ಲ ಕೋಮಿನವರಿಗೂ ಸಮಾನಾವಕಾಶ ದೊರೆತಿದೆಯೇ ಎಂಬುದನ್ನು ನೋಡಬೇಕು.

ಸಣ್ಣ ಪುಟ್ಟ ಸೇತುವೆಗಳ ವಿಚಾರದಲ್ಲಿ ಹೆಚ್ಚು ನಿಗಾ ಕೊಡುತ್ತಿಲ್ಲ. ಮಲೆನಾಡುಗಳಲ್ಲಿ ಸಣ್ಣಪುಟ್ಟ ಸೇತುವೆಗಳು ನೂರಾರು ಆಗಬೇಕಾಗಿವೆ. ಸರಿಯಾದ ಸೇತುವೆಗಳಿಲ್ಲದೆ ಮಲೆನಾಡಿನಲ್ಲಿ ಬಹಳ ಕಷ್ಟವಾಗಿರುತ್ತದೆ. ಅನೇಕ ವೇಳೆ ಪ್ರಯಾಣವೇ ನಿಂತು ಹೋಗುತ್ತದೆ. ಆದ್ದರಿಂದ ಇಂಥ ಸೇತುವೆಗಳಿಗಾಗಿ ಹೆಚ್ಚಿನ ಗ್ರಾಂಟ್ ಕೊಡಬೇಕೆಂದು ಹೇಳುತ್ತೇನೆ. ಚಿಕ್ಕಮಗಳೂರು ಟೌನಿನ ಪಕ್ಕದಲ್ಲೇ ಯಗಚಿಹಳ್ಳ ಹರಿಯುತ್ತದೆ. ಆ ಹೊಳೆಯಲ್ಲಿ ನೀರು ಹೆಚ್ಚಾಗಿ ಬಂದಾಗ ಉಪ್ಪಳ್ಳಿ, ನಲ್ಲೂರು ಮೊದಲಾದ ಹಳ್ಳಿಗಳಿಗೆ ಹೋಗುವುದೇ ಬಹಳ ದುಸ್ತರವಾಗುತ್ತದೆ. ಇಂಥ ಸೇತುವೆಗಳನ್ನು ಮಾಡಿಸಿ ಕೊಡುವುದು ಬಹಳ ಅವಶ್ಯಕ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಸ್ವಾಮಿ, ಪಿ.ಡಬ್ಲ್ಯು. ಇಲಾಖೆಯವರು ವಿದ್ಯಾಭ್ಯಾಸ ಇಲಾಖೆಯ ಮತ್ತು ಪಶುವೈದ್ಯ ಇಲಾಖೆಯ ಕಟ್ಟಡಗಳನ್ನು ಕಟ್ಟಿಸುತ್ತಾರೆ. ಆದರೆ ಈ ಕಟ್ಟಡಗಳಿಗೆ ಹಣ ತೆಗೆದುಕೊಳ್ಳುವುದರಲ್ಲಿ ಅಂದಾಜು ಹಣದ ಮೇಲೆ ಶೇಕಡ 10 ರಷ್ಟು ಹಾಕಿ ವಸೂಲು ಮಾಡುತ್ತಾರೆ. ಈ ವರ್ಷದ ಬಡ್ಜೆಟ್ಟಿನಲ್ಲಿ 118 ನೆಯ ಪುಟದಲ್ಲಿ ನೋಡುವುದಾದರೆ 112 ಲಕ್ಷ ರೂಪಾಯಿಗಳನ್ನು ಈ ರೀತಿ ಇತರ ಡಿಪಾರ್ಟ್‌ಮೆಂಟುಗಳ ಕಟ್ಟಡಗಳಿಗೆ ಖರ್ಚು ಮಾಡುವುದಾಗಿ ಹೇಳಿದ್ದಾರೆ. ಆಯಾ ಇಲಾಖೆಯವರ ಹಣದಲ್ಲಿ P.W. ಇಲಾಖೆಯವರು ಕಟ್ಟಡಗಳನ್ನು ಕಟ್ಟಿಸಿದರೂ ಸೂಪರ್‌ವಿಷನ್ ಛಾರ್ಜ್ ಎಂದು ಶೇಕಡ 10 ಸೇರಿಸಿ ತೆಗೆದುಕೊಳ್ಳುತ್ತಾರೆ. ಪಿ.ಡಬ್ಲ್ಯು. ಇಲಾಖೆಯವರಿಗೂ ಸರ್ಕಾರದವರೇ ಬಡ್ಜೆಟ್ಟಿನಲ್ಲಿ ಹಣ ಒದಗಿಸಿ ಸಂಬಳ ಸಾರಿಗೆಗಳನ್ನು ಕೊಡುತ್ತಿದ್ದರೂ ಈ ಪ್ರಕಾರ ಶೇಕಡ 10ನ್ನು ಸೇರಿಸಿ ಖರ್ಚು ಮಾಡುವುದು ಸರಿಯಲ್ಲ. ಇತ್ತ ಇದು P.W. ಇಲಾಖೆಯಲ್ಲೂ savings ಆಗಿರುವುದಿಲ್ಲ. ಇದಕ್ಕಾಗಿಯೇ ಬೇರೆ ಸಿಬ್ಬಂದಿಯನ್ನು ನೇಮಿಸಿರುವುದಾಗಿ ಹೇಳಿದ್ದಾರೆ. ಸೂಪರ್‌ವಿಷನ್ ಛಾರ್ಜ್ ಹಾಕದೆ ಈ ಕಟ್ಟಡಗಳನ್ನು ಕಟ್ಟಿಸುವುದಕ್ಕಾಗುವುದಿಲ್ಲವೇ ? ಏನೇ ಆಗಲಿ ಸರ್ಕಾರಿ ಕಟ್ಟಡಗಳನ್ನು ಕಟ್ಟಿಸುವುದಕ್ಕೇ ಸೂಪರ್‌ವಿಷನ್ ಛಾರ್ಜಸ್‌ಗಳನ್ನು ತೆಗೆದುಕೊಳ್ಳುವುದು ಸರಿಯಲ್ಲವೆಂದು ಹೇಳುತ್ತೇನೆ.

Concrcte worksನ್ನು ತೆಗೆದುಕೊಳ್ಳುವುದರಲ್ಲಿ ಹೋದ ವರ್ಷ ಒಂದು ಪ್ರಶ್ನೆ ಹಾಕಿ ಎಲ್ಲಾ ಸಂದರ್ಭಗಳಲ್ಲಿಯೂ ಎಸ್ಟಿಮೇಟು ಮತ್ತು final estimate ಗಳನ್ನು ತಿಳಿಸಬೇಕೆಂದು ಕೇಳಿದ್ದಕ್ಕೆ ಉತ್ತರ

ಕೊಡುತ್ತಾ ಒಂದೊಂದು ಕಡೆಯಲ್ಲಿ ಚದರಡಿಗೆ 2-8-0 ರೂಪಾಯಿ ಎಸ್ಟಿಮೇಟ್ ಮಾಡಿ ಕೊನೆಗೆ 1-14-0ಗೆ ಕೆಲಸ ಮಾಡಿಸಿದ್ದಾರೆ; ನಂಜನಗೂಡ್ ಸಬ್-ಡಿವಿಜನ್‌ನಲ್ಲಿ 2 ರೂಪಾಯಿ 7 ಆಣೆ 3 ಕಾಸಿಗೆ ಎಸ್ಟಿಮೇಟ್ ಕೊಟ್ಟು ಕೊನೆಗೆ 1 ರೂಪಾಯಿ 12 ಆಣೆಗೆ 9 ಕಾಸಿಗೆ ಕೆಲಸ ಮಾಡಿಸಿದ್ದಾರೆ. ಹೀಗೆ ಈ ಇಲಾಖೆಯವರು ಬೇಕೆಂತಲೇ ತಾವೇ ಹೆಚ್ಚಿಗೆ ಎಸ್ಟಿಮೇಟ್ ಕೊಟ್ಟು, ಕಂಟ್ರಾಕ್ಟರುಗಳಿಗೆ ಕೆಲಸ ಕೊಡುವುದಕ್ಕೆ ಬದಲು ತಾವೇ ಅಮಾನಿ ಮಾಡಿಸಿದ್ದರಿಂದ ಉಳಿತಾಯ ಮಾಡಿರುವುದಾಗಿ ತೋರಿಸುತ್ತಾರೆ. ಹೀಗೆ ಹೆಚ್ಚಿಗೆ ಎಸ್ಟಿಮೇಟ್ ಮಾಡಿ ಟೆಂಡರ್ ಕರೆಯುವುದು, ಕೊನೆಗೆ ತಾವೇ ಮಾಡಿಸಿ ಚದರಡಿಗೆ 10 ಆಣೆ-12 ಆಣೆ ಉಳಿತಾಯ ಮಾಡಿದ್ದೇವೆನ್ನುವುದು ಈ ಇಲಾಖೆಯಲ್ಲಿ ಸ್ವಾಭಾವಿಕವಾಗಿರುತ್ತದೆ. ಸಿಮೆಂಟಿನ ಬೆಲೆ, ಲೇಬರ್ ಬೆಲೆ ಮುಂತಾದುವೆಲ್ಲವೂ ಇವರು ಎಸ್ಟಿಮೇಟ್ ಮಾಡುವ ಕಾಲದಲ್ಲಿಯೂ, ಕೆಲಸ ಮಾಡಿಸುವ ಕಾಲದಲ್ಲಿಯೂ ಒಂದೇ ಇರುತ್ತವೆ ಹೀಗಿದ್ದರೂ ಮುಂಚಿನ ಎಸ್ಟಿಮೇಟು ಏತಕ್ಕೆ ಹೆಚ್ಚಿಗೆ ತೋರಿಸಿರುತ್ತಾರೋ ಗೊತ್ತಿಲ್ಲ. ಮೊದಲೇ ಸರಿಯಾದ ಎಸ್ಟಿಮೇಟ್ ಮಾಡಿಸಿ, ಅದರ ಮೇಲೆ ತಮ್ಮ water carrier ಮುಂತಾದ ಯಂತ್ರ ಸಾಮಗ್ರಿಗಳನ್ನಿಟ್ಟು ಕೊಂಡು ಉಳಿತಾಯ ಮಾಡುವುದಕ್ಕೆ ಬದಲು, ಇವರು ಈ ರೀತಿ ಮಾಡುತ್ತಿರುವುದನ್ನು ನೋಡಿದರೆ ಏನೋ ಇವರ ಕಾರ್ಯಕ್ರಮದಲ್ಲಿ ಲೋಪವಿದೆಯೆಂದು ತೋರುತ್ತದೆ.

2-30 P.M.

ಕಟ್ಟಡಗಳಿಗೆ ಸುಣ್ಣ ಹೊಡೆಯುವ ಪದ್ಧತಿ ಎಲ್ಲ ಕಡೆಯೂ ಇದೆ. ಕಂಟ್ರಾಕ್ಟುದಾರರು ವರ್ಷಕ್ಕೆ ಒಂದು ಸಲ ಸುಣ್ಣ ಹೊಡೆಯದೆ ಮನೆಯಲ್ಲಿ ಕುಳಿತು ಕೊಂಡು ಬಿಲ್ ಮಾಡಿ ಹಣ ತೆಗೆದುಕೊಳ್ಳುವ ಪದ್ಧತಿ ಇದೆ. ಎಷ್ಟೋ ಕಟ್ಟಡಗಳಿಗೆ ಸುಣ್ಣ ಹೊಡೆದಿರುವ ಹಾಗೆ ಕಾಣುವುದಿಲ್ಲ. ಯಾರಾದರೂ ಮಂತ್ರಿಗಳು ಬರುತ್ತಾರೆ ಎಂದರೆ ಒಂದು ತಿಂಗಳ ಹಿಂದೆ ಸುಣ್ಣ ಹೊಡೆಯುವ ಪದ್ಧತಿಯನ್ನು ಇಟ್ಟುಕೊಂಡಿದ್ದಾರೆ. ಯಾವಾಗ ಸರ್ಕಾರೀ ಅಧಿಕಾರಿಗಳು ಬರುವುದಿಲ್ಲವೋ, ಅಲ್ಲಿನ ಗೋಡೆಗಳು ಸುಣ್ಣ ಕಾಣುವುದಿಲ್ಲ. ಹಣ ಎಲ್ಲಿಗೆ ಹೋಗುತ್ತದೆ ಎಂಬುದು ಗೊತ್ತಾಗುವುದಿಲ್ಲ. ರಸ್ತೆಗಳಲ್ಲಿ culvert ಗಳಿಗೆ ಇಟ್ಟಿಗೆ ಗೋಡೆಗಳನ್ನು ಕಟ್ಟುತ್ತಾರೆ. ಅವು ಮೂರು ತಿಂಗಳು ಕೂಡ ಇರುವುದಿಲ್ಲ. ಪ್ರತಿವರ್ಷವೂ culvertಗಳಿಗೆ ರಿಪೇರಿ ಇದ್ದೇ ಇರುತ್ತದೆ. ಹಿಂದಿನ ಕಾಲದಲ್ಲಿ ಸಣ್ಣ ಸಣ್ಣ ಸೇತುವೆಗಳನ್ನು ಕಟ್ಟಿದರೆ 50 ವರ್ಷಗಳವರೆಗೂ ರಿಪೇರಿ ಕಂಡುಬರುವುದಿಲ್ಲ. ಈ ಸಿಮೆಂಟಿನ ಕಾಲದಲ್ಲಿ, concreteನ ಕಾಲದಲ್ಲಿ ಕಟ್ಟುತಕ್ಕ ಸೇತುವೆಗಳು 3-6 ತಿಂಗಳುಗಳಲ್ಲಿಯೇ ಕೆಟ್ಟು ಹೋಗುತ್ತವೆ. ಇದು ಬಹಳ ಶೋಚನೀಯ ಎಂದು ಹೇಳುತ್ತೇನೆ. ಶಿವಮೊಗ್ಗಾದಲ್ಲಿ drainage water works ಗೋಸ್ಕರ ಸುಮಾರು ಐದು ಲಕ್ಷ ರೂಪಾಯಿಗಳ ಒಂದು ಅಂದಾಜು ತಯಾರು ಮಾಡಿದರು. ಏಳುವರ್ಷಗಳ ಕೆಳಗೆ ಐದು ಲಕ್ಷ 40 ಸಾವಿರಕ್ಕೆ ಅಂದಾಜು ಆಗಿ, drainge works ಪ್ರಾರಂಭಮಾಡಿದರು. ಒಂದೆರಡು ವರ್ಷ ಆಗುವುದರೊಳಗೆ 11 ಲಕ್ಷ 49 ಸಾವಿರ ರೂಪಾಯಿಗೆ revised estimate ಆಯಿತು. ಮೊದಲು ಅಂದಾಜನ್ನು ತಯಾರು ಮಾಡಿದವರು ಅವರಿಗೆ ಸರಿಯಾದ ಜ್ಞಾನವಿರಲಿಲ್ಲವೇ? ಹಣವನ್ನು ಮುನಿಸಿಪಾಲಿಟಿಯವರು ಹೇಗೆ ಕೊಡಬೇಕು ಎಂಬುದನ್ನು ಪರಿಶೀಲನೆ ಮಾಡಿದ್ದಾರೆಯೇ? ಅಂದಾಜು ಮಂಜೂರು ಆಗಬೇಕು ಎಂಬ ಉದ್ದೇಶದಿಂದ ಕಮ್ಮಿ ಅಂದಾಜು ಮಾಡಿ, ಪೌರಸಭೆಯಲ್ಲಿ ಹಣ ಇರುತ್ತದೋ ಇಲ್ಲವೋ ನೋಡದೆ ಮಾರನೆಯ ವರ್ಷವೇ ಒಂದಕ್ಕೆರಡರಷ್ಟು revised estimate ಮಾಡಿ ಕೆಲಸವಾಗದ ಹಾಗೆ ಮಾಡುತ್ತಾರೆ. ಈಗ ಏಳು ವರ್ಷಗಳಾದುವು. ಒಂದು ಕಡೆ ದೊಡ್ಡ ಪೈಪ್‌ಲೈನ್ ಹಾಕಿದ್ದಾರೆ. ಈಗ ಆಗಿರತಕ್ಕ ಕೆಲಸ ಇಷ್ಟೇ. ಆರು ಲಕ್ಷ ರೂಪಾಯಿಗಳ ಹಣ ಖರ್ಚಾಗಿದೆ ಎಂದು ಹೇಳುತ್ತಾರೆ. Main lineಗೆ ಸಣ್ಣ ಸಣ್ಣ sub-lineಗಳನ್ನು ಕೊಟ್ಟಿದ್ದಾರೆ. Septic tank ಮಾಡಿಲ್ಲ. Pump-house ಮಾಡಿಲ್ಲ. House connection ಕೊಟ್ಟಿಲ್ಲ. Main line ಒಂದು ವಿನಾ ಇನ್ನಾವ ಕೆಲಸವೂ ಆಗಿಲ್ಲ. ಏಳು ವರ್ಷಗಳಿಂದ ಹಾಗೆಯೇ ಇಟ್ಟಿದ್ದಾರೆ. ಮಾನ್ಯ ಮಂತ್ರಿಗಳು septic tank ಆಗಿದೆ, ಜಮೀನು acquire ಆಗಿದೆ ಎಂದು ಹೇಳಿದರು. ಜಮೀನು ಅಕ್ವೈರು ಆಗಿಲ್ಲ ಕಂಟ್ರಾಕ್ಟುದಾರರಿಗೆ ಕಂಟ್ರಾಕ್ಟು ಕೊಟ್ಟಿಲ್ಲ. ಪೈಪ್‌ಲೈನ್ ಇಲ್ಲ. ಇಲ್ಲಿ ಆಗಿರುವ ಕೆಲಸ ನೋಡಿದರೆ, ರಸ್ತೆಗಳಲ್ಲಿ ಅನೇಕ ತೊಂದರೆಗಳು ಆಗಿವೆ. ಬಹು ಹಣವನ್ನು ರಸ್ತೆಗಾಗಿ ಖರ್ಚುಮಾಡಿದ್ದಾರೆ. ಇನ್ನೂ underground drainage works ಮುಗಿಸಲು 10-20 ವರ್ಷಗಳಾಗುತ್ತವೆಯೋ ಎಂದು ಕನಸು ಕಾಣುವ ಪರಿಸ್ಥಿತಿ ಇದೆ. ಸರಕಾರದವರು ಈ ಯೋಜನೆಯನ್ನು ಖಂಡಿತವಾಗಿ ಎರಡು ವರ್ಷಗಳಲ್ಲಾದರೂ ಕಾರ್ಯಗತ ಮಾಡಬೇಕೆಂದು ಹೇಳುತ್ತೇನೆ. Water works ಏರ್ಪಾಡಿಗೆ ಎಂಟು ಲಕ್ಷ ರೂಪಾಯಿಗಳನ್ನು ಅಂದಾಜು ಮಾಡಿದ್ದಾರೆ. ಎರಡು ಮೂರು ವರ್ಷಗಳಲ್ಲಿ revised estimate 15 ಲಕ್ಷ ರೂಪಾಯಿಗಳಿಗೆ ಆಗಿದೆ. P.W. ಇಲಾಖೆಯವರೂ ಈ ರೀತಿಯಾಗಿಯೇ revised estimate ಮಾಡುತ್ತಾರೆ. ಇದಕ್ಕೆ ಬಡ್ಡಿ ಹಣ ಕೊಡುವುದೇ ಆಗಿದೆ. ಆರು ವರ್ಷಗಳಿಂದ ಕೆಲಸ ನಡೆಯುತ್ತಿದೆ ಎಂದು ಹೇಳುತ್ತಾರೆ. ಎಷ್ಟು ವರ್ಷಗಳಿಗೆ water supply scheme ಮುಗಿಯುತ್ತದೋ ಗೊತ್ತಿಲ್ಲ. ಹಿಂದಿನ ಸರ್ಕಾರದವರು ಇದಕ್ಕಾಗಿ ಮೂರು ಲಕ್ಷ ರೂಪಾಯಿಗಳನ್ನು ಗ್ರಾಂಟು ರೂಪವಾಗಿ ಕೊಟ್ಟರು. ಈ ಸರ್ಕಾರ ಗ್ರಾಂಟ್ ಕೊಡುವುದಿಲ್ಲವೆಂದು ರದ್ದುಪಡಿಸಿ, ಸಾಲ ಮಂಜೂರು ಮಾಡಿತು. ಆದರೂ ಕೆಲಸ ಆಗದೇ ಇರುವುದರಿಂದ ಸಾಲದ ಹೊರೆ ಮಾತ್ರ ಹಾಕಿದ ಹಾಗೆ ಆಯಿತು. ಕುಂಸಿಯಲ್ಲಿ ನಾಲ್ಕು ವರ್ಷಗಳ ಕೆಳಗೆ drainage ಮತ್ತು water worksಗೆ ಅಂದಾಜು ಮಂಜೂರು ಆಗಿ ಕೆಲಸವೇ ನಡೆಯಲಿಲ್ಲ P.W. ಇಲಾಖೆಯವರು ಕಾರ್ಯಕ್ರಮ ಕೈಗೊಂಡಿಲ್ಲ. ಆ ಪಟ್ಟಣದವರು ಅನೇಕ ತೊಂದರೆಗಳಿಗೆ ಈಡಾಗಿದ್ದಾರೆ. ಈ ವರ್ಷದಲ್ಲಿ ಕೆಲಸ ತೆಗೆದು ಕೊಳ್ಳಬೇಕೆಂದು ಹೇಳುತ್ತೇನೆ. ರಸ್ತೆಗಳ ವಿಚಾರದಲ್ಲಿ ಹೇಳುವುದಾದರೆ ಆಗುಂಬೆ-ಹರಿಹರ ಮಾಲೂರು ಮಾರ್ಗ ಹೊಸದಾಗಿ ಒಂದು ರಸ್ತೆ ಮಾಡಿದ್ದಾರೆ. ಆಗುಂಬೆ-ಹರಿಹರಕ್ಕೆ ಈ ರಸ್ತೆಯಲ್ಲಿ 10 ಮೈಲಿ ದೂರ ಕಡಿಮೆಯಾಗುತ್ತದೆ. ಕೆಲವು ರಸ್ತೆಗಳಲ್ಲಿ ಜಲ್ಲಿ ಹಾಕಿಲ್ಲ. ಸಣ್ಣ ಸಣ್ಣ culvertಗಳನ್ನು ಇನ್ನೂ ಮಾಡಬೇಕು. ರಸ್ತೆಗಳಿಗೆ ಜಲ್ಲಿ ಹಾಕುವುದರಿಂದ ಹಿಂದೆ ಬಿದ್ದಿರುವ ಪ್ರದೇಶ ಮುಂದೆ ಬರುತ್ತದೆ. 4-5 ಸಾವಿರ ಎಕರೆ ಜಮೀನು ಸಾಗುವಳಿಗೆ ಬರುತ್ತದೆ. ಶಿವಮೊಗ್ಗಾ-ಆಗುಂಬೆ ರಸ್ತೆಯಲ್ಲಿ ಮೂರು ಸೇತುವೆಗಳನ್ನು ಕಟ್ಟುವುದಕ್ಕೋಸ್ಕರ ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಿದ್ದಾರೆ. ಶಿಕಾರಿಪುರ-ಶಿವಮೊಗ್ಗಾಕ್ಕೆ

(ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.)

ಹೊಸ ಘಾಟಾ ಮಾರ್ಗ ಆಗುವುದು ಏಳು ಮೈಲಿ ಉದ್ದ ಕಮ್ಮಿಯಾಗುತ್ತದೆ. ಶಿವಮೊಗ್ಗಾ ಜಿಲ್ಲಾಧಿಕಾರಿಗಳ ಡಿಸ್ಟ್ರಿಕ್ಟು ಆಫೀಸಿಗೆ 105 ವರ್ಷಗಳ ವಯಸ್ಸಾಗಿದೆ. ಬೊಂಬಾಯಿಯಲ್ಲಿ ಕಟ್ಟಡಕ್ಕೆ 100 ವರ್ಷ ವಯಸ್ಸು ಆದರೆ ಆ ಕಟ್ಟಡವನ್ನು demolish ಮಾಡುತ್ತಾರೆ. ಇಲ್ಲಿ ಡಿಸ್ಟ್ರಿಕ್ಟ್ ಆಫೀಸಿನಲ್ಲಿ clerks ಪ್ರಾಣವನ್ನು ಕೈಯ್ಯಲ್ಲಿ ಹಿಡಿದುಕೊಂಡು ಕೆಲಸ ಮಾಡುತ್ತಾ ಇರುತ್ತಾರೆ. ಮೇಲೆ ನೋಡಿದರೆ rafters ಅಲ್ಲಾಡುತ್ತವೆ. ಮೇಲೆ ಕೂತಿರುವವರೂ ಹೆದರುತ್ತಾರೆ. ಕೆಳಗೆ ಕೂತಿರುವವರೂ ಹೆದರುತ್ತಾರೆ. ಈ ವಿಷಯ ಅಧ್ಯಕ್ಷರಿಗೂ ಗೊತ್ತಿದೆ. ಮೇಲ್ಛಾವಣಿ ಹಾಕಿ ಸುಮಾರು 105 ವರ್ಷಗಳಾಗಿದೆ ಕಟ್ಟಡ ನೋಡಿದರೆ ಗೊತ್ತಾಗುತ್ತದೆ. ಅದ್ದರಿಂದ ಈ ಕಟ್ಟಡವನ್ನು ಆದಷ್ಟು ಬೇಗನೆ ಹೊಸದಾಗಿ ಕಟ್ಟಿಸಬೇಕು. ಮತ್ತು ಅಲ್ಲಿಯವರೆಗೆ ಈ ಕಟ್ಟಡಕ್ಕೆ ಸರಿಯಾದ iron girders ಹಾಕಿ ಸರಿಪಡಿಸಬೇಕೆಂದು ಹೇಳುತ್ತೇನೆ.

ಶ್ರೀ ಡಿ. ಎಂ. ಗೋವಿಂದರಾಜು (ನೆಲಮಂಗಲ).— ಮಾನ್ಯ ಅಧ್ಯಕ್ಷರೆ, ನೆಲಮಂಗಲ ತಾಲ್ಲೂಕು ಸೊಂಡೆಕೊಪ್ಪದ ಬಳಿಯಲ್ಲಿ ಅರ್ಕಾವತಿ ನದಿಗೆ ಒಂದು ಸೇತುವೆ ಕಟ್ಟಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಎರಡು ಮೂರು ವರ್ಷಗಳಿಂದ ಇನ್ನೂ ಈ ಕೆಲಸಕ್ಕೆ ಅಂದಾಜು ಮಂಜೂರಾಗಿದೆಯೋ ಇಲ್ಲವೋ ಗೊತ್ತಿಲ್ಲ. ಅದು ಮುಖ್ಯವಾದ ರಸ್ತೆ. ಸುಮಾರು ಎರಡು ಮೂರು ಬಸ್ಸುಗಳು ಓಡಾಡುತ್ತವೆ. ಆದ್ದರಿಂದ ಆದಷ್ಟು ಜಾಗ್ರತೆ ಆ ಸೇತುವೆಯನ್ನು ಕಟ್ಟಬೇಕು. ಇನ್ನೊಂದು ನಮ್ಮ ತಾಲ್ಲೂಕಿನಲ್ಲಿ ಮಡಲಕೋಟೆಯ ಬಳಿ ಕುಮುದ್ವತೀ ನದಿಗೆ ಸೇತುವೆಯನ್ನು ಕಟ್ಟಿಸಬೇಕು. ಮಳೆಗಾಲದಲ್ಲಿ ಮೂರು ನಾಲ್ಕು ತಿಂಗಳು ನೀರು ನಿಂತುಹೋಗಿ ಜನರು ಓಡಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಕುಮುದ್ವತೀ ನದಿಗೆ ಸೇತುವೆ ಕಟ್ಟಬೇಕಾದುದು ಬಹಳ ಪ್ರಾಮುಖ್ಯ. ಅದೂ ಅಲ್ಲದೆ ಈಗ ನಮ್ಮ ತಾಲ್ಲೂಕಿನಲ್ಲಿ ಶಿವಗಂಗೆ ಗ್ರಾಮವಿದೆ. ಅದು ಬಹಳ ಪವಿತ್ರವಾದ ಕ್ಷೇತ್ರ. ಆ ಕ್ಷೇತ್ರ ಗುಡೇಮಾರನಹಳ್ಳಿಗೆ ಹತ್ತು ಮೈಲಿಯಾಗುತ್ತದೆ. ಎರಡು ಮೂರು ಬಸ್ಸುಗಳು ಓಡಾಡುತ್ತವೆ. ಅದು ಬಹಳಜನ ತಿರುಗಾಡುವಸ್ಥಳ. ನೂರಾರು ಗ್ರಾಮದ ನಿವಾಸಿಗಳು ಅದೇ ರಸ್ತೆಯಲ್ಲಿ ಓಡಾಡಬೇಕಾಗಿದೆ. ಈಗ ಅದು ಡಿಸ್ಟ್ರಿಕ್ಟು ಬೋರ್ಡ್ ರಸ್ತೆಯಾಗಿದೆ. P.W.D. ರಸ್ತೆಯನ್ನಾಗಿ ಸೇರಿಸಿಕೊಳ್ಳಬೇಕು ಎಂದು ಎರಡು ಮೂರು ವರ್ಷಗಳಿಂದ ಕೇಳಿದ ಮೇಲೆ ಹೋದ ವರ್ಷವೇ ಇದನ್ನು P.W.D. ರಸ್ತೆಯನ್ನಾಗಿ ಮಾಡುತ್ತೇವೆ ಎಂಬುದಾಗಿ ಭರವಸೆಕೊಟ್ಟರು. ಆದರೂ ಇನ್ನೂ ಅದು P.W.D. ರಸ್ತೆಯಾಗಲಿಲ್ಲ. ಆದ್ದರಿಂದ ಆದಷ್ಟು ಜಾಗ್ರತೆಯಾಗಿ ಶಿವಗಂಗೆ—ಗುಡೇಮಾರನಹಳ್ಳಿ ರಸ್ತೆಯನ್ನು P.W.D. ರಸ್ತೆಯನ್ನಾಗಿ convert ಮಾಡಬೇಕು. ಬಸ್ಸು ನೆಲಮಂಗಲದಿಂದ ಬೆಂಗಳೂರಿಗೆ direct ಆಗಿ ಬರುವುದಿಲ್ಲ. ಪ್ರತಿಯೊಂದು ಬಸ್ಸೂ ಸೊಂಡೇಕೊಪ್ಪ—ತಾವರೇಕೆರೆ ಮಾರ್ಗವಾಗಿ ಬೆಂಗಳೂರಿಗೆ ಬರುವ ಅವಕಾಶವಿದೆ. ಈ ರಸ್ತೆಯನ್ನು P. W. D. ಗೆ ಸೇರಿಸಿಕೊಳ್ಳಬೇಕು ಎಂದು ಒತ್ತಾಯಮಾಡಿದ್ದಾರೆ. ಏಳು ಎಂಟು ಬಸ್ಸುಗಳು ಇರುವುದರಿಂದ P.W.D.ಗೆ ಸೇರಿಸಿಕೊಳ್ಳುತ್ತೇವೆ ಎಂದು ಭರವಸೆ ಕೊಟ್ಟಿದ್ದಾರೆ. ಇದುವರೆಗೂ ಯಾವ ಕಾರ್ಯಕ್ರಮಗಳನ್ನೂ ತೆಗೆದುಕೊಂಡಿಲ್ಲ. ಆದಷ್ಟು ಜಾಗ್ರತೆ ನೆಲಮಂಗಲ—ಸೊಂಡೇಕೊಪ್ಪ—ತಾವರೇಕೆರೆ ರಸ್ತೆಯನ್ನು P.W.D. ಯವರು ತೆಗೆದುಕೊಳ್ಳಬೇಕಾದುದು ಅಗತ್ಯ. ಈ ತಾಲ್ಲೂಕಿನಲ್ಲಿ famine relief works ನಲ್ಲಿ ಅನೇಕ ರಸ್ತೆಗಳನ್ನು ಮಾಡಿದ್ದಾರೆ. ಸುಮಾರು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ, ಮಾಡಿರುವ ರಸ್ತೆಗಳನ್ನು ನೋಡಿದರೆ, ಅಷ್ಟು ದುಡ್ಡು ಖರ್ಚುಮಾಡಿರುವುದು ಖಂಡಿತವಾಗಿ ನೀರಿನ ಪಾಲು ಆಯಿತು ಎಂದು ಹೇಳಿದರೆ ಅದು ಅಷ್ಟು ಅತಿಶಯೋಕ್ತಿಯಲ್ಲ. ಆ ರಸ್ತೆಗಳನ್ನು P. W. D. ಅಥವಾ ಡಿಸ್ಟ್ರಿಕ್ಟ್ ಬೋರ್ಡು ವಹಿಸಿಕೊಂಡು maintain ಮಾಡಬೇಕಾದುದು ಬಹಳ ಮುಖ್ಯ. ಮಣ್ಣೆ ಬರಗೂರು ರೋಡ್, ಮಾಕನಕುಪ್ಪೆ ಲಕ್ಷ್ಮಣಪುರ ರೋಡ್, ಕುಂಟಬೊಮ್ಮನಹಳ್ಳಿ—ಮರಳಕುಂಟೆ ಬೆಣಚನಹಳ್ಳಿ ರೋಡ್, ಹೊನ್ನೇನಹಳ್ಳಿ,—ಶ್ರೀಪತಿಹಳ್ಳಿ, ವೀರಾಸಾಗರ ರೋಡ್, ಮತ್ತು ದಾಬಸ್‌ಪೇಟೆ—ಅಗಲಕುಪ್ಪೆ—ನಿಜಗಲ್ ರೋಡ್—ಹೀಗೆ ಅನೇಕ ರಸ್ತೆಗಳು ರಿಲೀಫ್ ವರ್ಕ್ಸ್‌ನಿಂದ ಆಗಿವೆ. Relief worksನಲ್ಲಿ ಯಾವ ಯಾವ ರಸ್ತೆಗಳು ಇವೆಯೋ, ಆ ರಸ್ತೆಗಳೆಲ್ಲವನ್ನೂ ಕೂಡ ಸರ್ಕಾರದವರು maintain ಮಾಡಿದರೆ ಖಂಡಿತ ಬಹಳ ಅನುಕೂಲ. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ.

ಮುಖ್ಯವಾಗಿ ಈಗ ಸಿಮೆಂಟ್ ರಸ್ತೆಗಳಿಗೆ ವಿಪರೀತ ಹಣವನ್ನು ಖರ್ಚು ಮಾಡಲಾಗುತ್ತಿದೆ. ಇದನ್ನು ಆದಷ್ಟು ಕಡಮೆ ಮಾಡಿ, ಗ್ರಾಮಾಂತರ ರಸ್ತೆಗಳು ಹೆಚ್ಚು ಅವಶ್ಯಕವಾಗಿರುವುದರಿಂದ ಹಳ್ಳಿಗಳ ರಸ್ತೆಗಳ ಕಡೆ ಗಮನ ಕೊಡಬೇಕು. ಇದಕ್ಕೆ ಹೆಚ್ಚು ಹಣ ಕೊಟ್ಟು ಇವುಗಳನ್ನು ಮಾಡಿಸಬೇಕಾದುದು ಅಗತ್ಯವೆಂದು ಒತ್ತಿ ಹೇಳುತ್ತೇನೆ.

ನಮ್ಮ ತಾಲ್ಲೂಕಿನಲ್ಲಿ ಅನೇಕ ಸ್ಕೂಲುಗಳಿಗೆ ಕಟ್ಟಡಗಳಿಲ್ಲ. ಡೊನೇಷನ್ ಕೊಟ್ಟರೂ ಕಟ್ಟಿಲ್ಲ. ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿಯೂ ಇದೇ ಪರಿಸ್ಥಿತಿ ಇದೆ. ಎಲ್ಲೆಲ್ಲಿ ಡೊನೇಷನ್ ಕೊಟ್ಟಿದ್ದಾರೋ ಅಂಥಾ ಕಡೆಗಳಲ್ಲಾದರೂ ಆದಷ್ಟು ಜಾಗ್ರತೆ ಸ್ಕೂಲು ಕಟ್ಟಡಗಳನ್ನು ಕಟ್ಟಿಸಿಕೊಡಬೇಕು. ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಕಾಡತಿಮಾರು ಗ್ರಾಮಮದ ಎಲ್. ಟಿ. ಎಂ. ಸ್ಕೂಲದೆ. ಅಲ್ಲಿಯ ಜನರು ಉದಾರವಾಗಿ ಸಾವಿರಾರು ರೂಪಾಯಿ ಡೊನೇಷನ್ ಕೊಟ್ಟು ಹತ್ತು ಹನ್ನೆರಡು ವರ್ಷಗಳಾದರೂ ಅದಕ್ಕೆ ಕಟ್ಟಡವಿಲ್ಲ. ಇದನ್ನು ಕಟ್ಟಿಸುವುದು ಅವಶ್ಯಕ.

ಇನ್ನೊಂದು ವಿಷಯ. ತ್ಯಾಮಗೊಂಡ್ಲು ತುಮಕೂರು—ಬೆಂಗಳೂರು ರಸ್ತೆಯು ಡೀವಿಯೇಷನ್ ರಸ್ತೆಯ ಮಧ್ಯದಲ್ಲಿದೆ. ಅಲ್ಲಿ ಏಳೆಂಟು ಸಾವಿರ ಪ್ರಜಾಸಂಖ್ಯೆಯಿದೆ, ದೊಡ್ಡ ಗ್ರಾಮ, ವ್ಯಾಪಾರಸ್ಥಳ ಮತ್ತು ಅನೇಕ ಅಧಿಕಾರಿಗಳು ಆಗಾಗ ಅಲ್ಲಿಗೆ ಬರುತ್ತಿರುತ್ತಾರೆ. ಅವರಿಗೆ ಇಳಿದುಕೊಳ್ಳಲು ಸ್ಥಳವಿಲ್ಲದೆ ಬಹಳ ಕಷ್ಟವಾಗಿದೆ. ಆದಕಾರಣ ಅಲ್ಲಿ ಒಂದು ಟಿ. ಬಿ. ಅಥವಾ 'ರೆಸ್ಟ್ ಹೌಸ್' ಕಟ್ಟಿಸಿಕೊಡಬೇಕೆಂದು ಅನೇಕ ಸಲ ಪ್ರಾರ್ಥನೆ ಮಾಡಿಕೊಂಡಿದ್ದೇವೆ. ಮುಖ್ಯ ಮಂತ್ರಿಗಳು ಅಲ್ಲಿಗೆ ಬಂದಿದ್ದಾಗ, ಅಲ್ಲಿಗೆ ಟಿ. ಬಿ. ಅವಶ್ಯಕತೆಯಿದೆ, ಜಾಗ್ರತೆ ಮಾಡಿಸಿ ಕೊಡುತ್ತೇವೆಂದು ಭರವಸೆ ಕೊಟ್ಟಿದ್ದರು. ಆದರೆ ಇದುವರೆಗೆ ಯಾವುದೂ ಆಗಿಲ್ಲ. ಯಾರಾದರೂ ಅಲ್ಲಿಗೆ ಬಂದರೆ ಇಳಿದುಕೊಳ್ಳಲು ಸ್ಥಳವಿಲ್ಲ. ಜಾಗ್ರತೆ ಟಿ.ಬಿ. ಕಟ್ಟಿಸಿಕೊಟ್ಟರೆ ಅನುಕೂಲವಾಗುತ್ತದೆ. ಕಡ್ಡಾಯವಾಗಿ ಇದನ್ನು ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ನಮ್ಮ ತಾಲ್ಲೂಕಿನಲ್ಲಿ ಮಣ್ಣೇಕೆರೆ ಎಂಬ ಮೇಜರ್ ಕೆರೆ ಇದೆ. ಅದರ ಕೆಳಗೆ ನಾನೂರು ಐನೂರು ಎಕರೆ ಅಚ್ಚುಕಟ್ಟಿದೆ. ಆ ಕೆರೆಯ ಏರಿಯ ಮೇಲೆ ರಸ್ತೆ ಹೋಗಬೇಕು. ಸುಮಾರು ಒಂದು ಕಡೆಯಿಂದ

ಒಂದು ಗಾಡಿ ಬರುತ್ತಿದ್ದರೆ ಇನ್ನೊಂದು ಕಡೆ ಬರುವ ಗಾಡಿ ಅದು ಈ ಕಡೆ ಬರುವವರೆಗೂ ನಿಂತಿರಬೇಕು, ಇಲ್ಲದಿದ್ದರೆ ಹಿಂದಕ್ಕೆ ಹೋಗಬೇಕು. ಏಕೆಂದರೆ ಏರಿಯ ಅಗಲ ಬಹಳ ಚಿಕ್ಕದು. ಆದಕಾರಣ ಈ ಏರಿಯನ್ನು ಅಗಲ ಮಾಡಬೇಕು. ಇದನ್ನು ಮಾಡಬೇಕೆಂದು ಹಿಂದೆಯೇ ಸರ್ಕಾರವನ್ನು ಪ್ರಾರ್ಥಿಸಿದ್ದೇವೆ. ಇದಕ್ಕೆ ಅಂದಾಜು ಕೂಡ ಆಗಿತ್ತು; ಆದರೆ ಏನು ಕಾರ್ಯ ಕ್ರಮವನ್ನೂ ತೆಗೆದುಕೊಂಡಿಲ್ಲ. ಇದನ್ನು ತಕ್ಷಣ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನಪ್ಪಗೌಡ (ಸೊರಬ—ಷಿಕಾರಿಪುರ).—ಸ್ವಾಮಿ, ಈ ಡಿಮ್ಯಾಂಡ್ ಮನವಿಯನ್ನನು ಮೋದಿಸುತ್ತಾ ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬಿಚ್ಛಿಸುತ್ತೇನೆ. ಶಿವಮೊಗ್ಗ-ಹುಬ್ಬಳ್ಳಿ ರಸ್ತೆಯಲ್ಲಿ ಗೊಂದಿವಾವಿನ ಹೊಳೆಗೆ ಒಂದು ಸೇತುವೆ ಆಗಬೇಕೆಂದು ಮೈಸೂರಿನಲ್ಲಿ ಪ್ರಜಾಪ್ರತಿನಿಧಿ ಸಭೆ ಹುಟ್ಟಿದಾಗಿನಿಂದಲೂ ಪ್ರತಿವರ್ಷವೂ ಕೇಳುತ್ತಿದ್ದಾರೆ. ನಡೆವಳಿಕೆಗಳ ವರದಿಯನ್ನು ನೋಡಿದರೆ ಗೊತ್ತಾಗುತ್ತದೆ. ಈ ಸೇತುವೆ ಕಟ್ಟುವುದಕ್ಕೆ ಸೈಟಿನ ವಿಷಯದಲ್ಲಿ ಭಿನ್ನಾಭಿಪ್ರಾಯವಿದೆ. ಇದನ್ನು ನೋಡಿ ತೀರ್ಮಾನಿಸಿ ಈ ಸೇತುವೆ ಕಟ್ಟಿಸಿ ಅಲ್ಲಿನ ಜನರಿಗೆ ಅನುಕೂಲ ಮಾಡಿ ಕೊಡಬೇಕು. ಹುಬಳ್ಳಿಗೆ ಇದೇ ಬಹಳ ಹತ್ತಿರದ ಮಾರ್ಗ; ಶಿವಮೊಗ್ಗದಿಂದ 120 ಮೈಲಿಯಾಗುತ್ತದೆ. ಇಲ್ಲಿ ಸೇತುವೆಯ ಅವಶ್ಯಕತೆ ಇದೆ. ಆದುದರಿಂದ ಈಗಲಾದರೂ ದಯವಿಟ್ಟು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿ ಈ ಕೆಲಸವನ್ನು ಪೂರೈಸಬೇಕು. ಪ್ಲಾನಿಂಗ್ ಕಮಿಷನ್ ಸದಸ್ಯರಾದ ಶ್ರೀ ರಾಮಮೂರ್ತಿಯವರು ಅಲ್ಲಿಗೆ ಬಂದಿದ್ದಾಗ ಈ ಬೇಡಿಕೆಯನ್ನು ಅವರ ಮುಂದಿಟ್ಟೆವು. ಆದರೂ ಇದನ್ನು ಯೋಜನೆಯಲ್ಲಿ ಸೇರಿಸಿಲ್ಲ. ಗೊಂದಿಹೊಳೆ ಧಾರವಾಡಕ್ಕೆ ಸೇರಿದೆಯೆಂದು ಇತ್ಯರ್ಥವಾಗಿಲ್ಲವಾದುದರಿಂದ, ತಜ್ಞರ ಅಭಿಪ್ರಾಯ ತೆಗೆದುಕೊಂಡು, ಯಾವುದಾದರೂ ಒಂದು ಕಡೆ ಸೈಟನ್ನು ಗೊತ್ತು ಮಾಡಿ ಇದನ್ನು ಕಾರ್ಯಗತ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಸೊರಬ-ಸಿದ್ದಾಪುರ ರಸ್ತೆಯಲ್ಲಿ ಚಂದ್ರಗುತ್ತಿ ಹೋಬಳಿ ಇದೆ. ಅದು ನಮ್ಮ ತಾಲ್ಲೂಕಿಗೆ ಕೊನೆಯ ಹೋಬಳಿ. ಅಲ್ಲಿಗೆ ಮಾನ್ಯ ಮಂತ್ರಿಗಳು ಹೋಗಿಲ್ಲ ಅದು ಬಹಳ ಹಿಂದುಳಿದ ಪ್ರದೇಶ. ಬಹಳ ಹಳೆಯ ಕಾಲದಲ್ಲಿ ಒಂದು ಪದಾರ್ಥ ಕೊಟ್ಟು ಇನ್ನೊಂದು ಪದಾರ್ಥವನ್ನು ತೆಗೆದುಕೊಳ್ಳುತ್ತಿದ್ದ ವ್ಯಾಪಾರ ಅಲ್ಲಿ ಈಗಲೂ ನಡೆಯುತ್ತಿದೆ. ಅಲ್ಲಿ ಜೋಳದ ಗುಡ್ಡೆಯ ಹತ್ತಿರ ಒಂದು ಸೇತುವೆ ಕಟ್ಟಬೇಕು.

ಷಿಕಾರಿಪುರ ತಾಲ್ಲೂಕು ಈಸೂರಿನ ಹತ್ತಿರ ಕುಮುದ್ವತಿ ನದಿಗೆ ಒಂದು ಸೇತುವೆ ಆಗಬೇಕೆಂದು ಬಹಳ ದಿವಸಗಳಿಂದ ಜನರು ಬೇಡಿಕೆಯನ್ನಿಡುತ್ತಿದ್ದಾರೆ. ಅದನ್ನು ಕೂಡಲೆ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

ಹೊಸನಗರದ ಹತ್ತಿರ ಕುಮುದ್ವತಿಗೆ ಸೇತುವೆ ಕಟ್ಟಬೇಕೆಂದು ನಾಲ್ಕು ವರ್ಷದ ಹಿಂದೆ ಪ್ರಾರಂಭಿಸಿದರು. ಆದರೂ ಇನ್ನೂ ಅಂದಾಜಾಗಿಲ್ಲ, ಇದನ್ನೂ ಮಾಡಬೇಕು. ಹೊಸನಗರ—ಆನಂದಾಪುರದ ರಸ್ತೆಯ ಹತ್ತಿರ ಒಂದು ಸೇತುವೆ ಕೆಲಸವನ್ನು ಪ್ರಾರಂಭಿಸಿ ನಿಲ್ಲಿಸಿದ್ದಾರೆ. ಒಬ್ಬ ಕಂಟ್ರಾಕ್ಟರಿಗೆ ಕೊಟ್ಟಿದ್ದೆವು, ಅವರು ಬಿಟ್ಟುಬಿಟ್ಟರು ಎಂದು ಇಲಾಖೆಯವರು ಹೇಳುತ್ತಾರೆ. ಅರ್ಧದಲ್ಲಿ ನಿಂತು ಹೋಗಿದೆ . . . .

ಅಧ್ಯಕ್ಷರು.—ಎರಡು ಮೂರು ಹೇಳಿದರೆ ಮಾಡುತ್ತಾರೆ, ಇಷ್ಟೊಂದು ಹೇಳಿದರೆ ಹೇಗೆ?

ಶ್ರೀ ಮಲ್ಲಿಕಾರ್ಜುನಪ್ಪಗೌಡ.—ಬಹಳ ಹೇಳಿದರೆ ಒಂದೆರಡಾದರೂ ಮಾಡುತ್ತಾರೆಂದು ನಂಬಿಕೆ. ಮಲೆನಾಡಿನಲ್ಲಿ ಸಣ್ಣಸಣ್ಣ ಹಳ್ಳಿಗಳಿಗೆ, ಸೇತುವೆಗಳನ್ನು ಕಟ್ಟಿದರೆ, ಮಳೆಗಾಲದಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ತಿರುಗಾಡುವ ಜನರಿಗಾಗುತ್ತಿರುವ ತೊಂದರೆ ತಪ್ಪುತ್ತದೆ.

ಕಟ್ಟಡಗಳ ವಿಚಾರದಲ್ಲಿ, ಷಿಕಾರಿಪುರ ತಾಲ್ಲೂಕು ಹಿತ್ತಲದಲ್ಲಿ ಒಂದು ಜಾನುವಾರು ಆಸ್ಪತ್ರೆ ಕಟ್ಟಬೇಕೆಂದು ಅಲ್ಲಿನ ಜನರು ಹಣ ಕಟ್ಟಿ ನಾಲ್ಕು ವರ್ಷವಾಯಿತು; ಆ ಕಟ್ಟಡ ಆಗಬೇಕೆಂದು ಕೇಳುತ್ತಿದ್ದಾರೆ. ಇದಕ್ಕೆ ಗಮನ ಕೊಟ್ಟು, ಇದು ಬಹಳ ಹಿಂದುಳಿದ ತಾಲ್ಲೂಕಾಗಿರುವುದರಿಂದ ಇದನ್ನು ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

*ಶ್ರೀ ಕೆ. ಲಕ್ಕಪ್ಪ (ಚನ್ನರಾಯಪಟ್ಟಣ).—ಸ್ವಾಮಿ, ಬಹಳ ಕಾಲದಿಂದ ಮೂಲೆಗೆ ಬಿದ್ದಿರುವ ರಸ್ತೆಯ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ನಿಂತಿದ್ದೇನೆ. ನಾನು ಮಾತನಾಡಬಾರದೆಂದು ಕುಳಿತಿದ್ದೆ. ಆದರೆ ಮಂತ್ರಿಗಳು ಬಹಳ ಆಸಕ್ತಿಯಿಂದ ಸದಸ್ಯರು ಹೇಳುವ ವಿಷಯಗಳನ್ನು ಗುರುತು ಹಾಕಿಕೊಳ್ಳುತ್ತಿದ್ದಾರೆ, ಆದಕಾರಣ ಧೈರ್ಯಮಾಡಿ ಮಾತನಾಡಲು ನಿಂತಿದ್ದೇನೆ. ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಹಿರೇಸಾವೆಯಿಂದ ನೊಣವಿನಕೆರೆಗೆ ರಸ್ತೆ ಹಾಕಬೇಕೆಂದು ಬಹಳ ವರ್ಷಗಳಿಂದ ಜನರು ಜಿಲ್ಲಾಬೋರ್ಡನ್ನು ಕೇಳಿಕೊಳ್ಳುತ್ತಿದ್ದರು. ಅದರ ಫಲವಾಗಿ ಜಿಲ್ಲಾಬೋರ್ಡಿನವರು ಆ ರಸ್ತೆಯ ಆವಶ್ಯಕತೆಯನ್ನು ಮನಗಂಡು ಸುಮಾರು ಹದಿನೈದು ವರ್ಷಗಳ ಕೆಳಗೆ ಮೂರು ಮೈಲಿ ಫಾಸಲೆ ರಸ್ತೆಮಾಡಿ, ಮುಂದೆ ಮಾಡಲು ಶಕ್ತಿಯಿಲ್ಲದೆ ಕಾರಣಾಂತರದಿಂದ ಕೈಬಿಟ್ಟರು. ಆಮೇಲೆ ಸರ್ಕಾರದಲ್ಲಿ ಅವರು ಮನವಿ ಮಾಡಿಕೊಂಡರು, ಅನೇಕಸಾರಿ ಖುದ್ದುಬಂದು ಸರ್ಕಾರದವರನ್ನು ಕಂಡರು. ನಾನು ಕೂಡ ಅನೇಕಸಾರಿ ಪ್ರಶ್ನೆಗಳನ್ನೂ ಹಾಕಿ ಕೇಳಿಕೊಂಡಿದ್ದೇನೆ. ಮುಖ್ಯಮಂತ್ರಿಗಳನ್ನೂ, ಹಿಂದೆ ಮಂತ್ರಿಗಳಾಗಿದ್ದ ಶ್ರೀ ದಾಸಪ್ಪನವರನ್ನೂ ಕಡಿದಾಳ್ ಮಂಜಪ್ಪನವರನ್ನೂ ಕಂಡಾಗ, ಇದನ್ನು ಶೀಘ್ರದಲ್ಲಿ ಮಾಡುವುದಕ್ಕೆ ಪ್ರಯತ್ನಮಾಡುತ್ತೇವೆಂದು ಹೇಳಿದರು.

ಅದರ ಪ್ರತಿಫಲವಾಗಿ ಈಗ್ಗೆ ಮೂರು ವರ್ಷಗಳ ಹಿಂದೆ ಟೋಕನ್ ಗ್ರ್ಯಾಂಟ್ ಆಗಿ 25 ಸಾವಿರ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಒದಗಿಸಿದ್ದರು. ಆದರೆ ಕೆಲವು ಕಾರಣಗಳಿಂದ, ಅಂದರೆ, ಮುಖ್ಯವಾಗಿ ಆ ರಸ್ತೆಯನ್ನು Central Government Road fund ನಿಂದ ತೆಗೆದುಕೊಳ್ಳಬೇಕೆಂದು ಯೋಚನೆಮಾಡಿ ಆ ಫಂಡಿನಿಂದ ಮಂಜೂರ್ಮಾಡಿದರು. ಒಂದು ವರ್ಷ ಕಳೆದ ಮೇಲೆ ಆ ಎಸ್ಟಿಮೇಟ್ ಪ್ರಕಾರ ಕೇವಲ 25 ಸಾವಿರ ರೂಪಾಯಿಗಳಿಗೆ ರಸ್ತೆಯನ್ನು ಮಾಡಿಸುವುದಕ್ಕಾಗುವುದಿಲ್ಲ, ಬೇರೆ revised estimateಮಾಡಿ ಕಳುಹಿಸಿ ಎಂದು ನಮ್ಮ ಜಿಲ್ಲೆಯ ಎಕ್ಸಿಕ್ಯೂಟಿವ್ ಇಂಜಿನಿಯರಿಗೆ ಕಳುಹಿಸಿದರು. ಅವರು ಅದಕ್ಕೆ re-estimateಮಾಡಿ ಸುಮಾರು ಒಂದು ಲಕ್ಷ ರೂಪಾಯಿ ಬೇಕಾಗುತ್ತದೆಂದು ಕಳುಹಿಸಿದರು. ಮೊದಲು 25 ಸಾವಿರ ರೂಪಾಯಿಗಳಿಗೆ ಮಂಜೂರಾಗಿದ್ದುದು ಈಗ ಒಂದು ಲಕ್ಷಕ್ಕೆ ಅಂದಾಜಾಗಿದೆ. ಇದನ್ನು ಕೇಂದ್ರ ಸರ್ಕಾರದವರು ಕೊಡಬೇಕೆಂದು ಯೋಚನೆಮಾಡಿ, Revised Estimate ಮಂಜೂರ್ಮಾಡಿ ಎಂದು ಕೇಂದ್ರ ಸರ್ಕಾರಕ್ಕೆ ಬರೆದರು. ಆದರೆ ಕೇಂದ್ರದವರು ಮೊದಲು 25 ಸಾವಿರ ರೂಪಾಯಿಗಳ ಅಂದಾಜು ಆಗಿದ್ದುದು ಈಗ ಒಂದು ಲಕ್ಷ ರೂಪಾಯಿಗಳಿಗೆ ಮಾಡಿ ಕಳುಹಿಸಿದ್ದೀರಿ. ಇದನ್ನು ಮಂಜೂರ್ಮಾಡುವುದಕ್ಕಾಗ ವುದಿಲ್ಲವೆಂದು

(ಶ್ರೀ ಕೆ. ಲಕ್ಕಪ್ಪ.)

ಹೇಳಿದರು. ಆ ಕಾರಣದಿಂದ ಈ ರಸ್ತೆಯ ಕೆಲಸ ಅಲ್ಲಿಗೇ ನಿಂತುಬಿಟ್ಟಿತು. Central Government fundನಿಂದ ಮಾಡುವುದಕ್ಕೆ ಸಾಧ್ಯವಿಲ್ಲದೆ ಇದ್ದರೆ ನಮ್ಮ ಸರ್ಕಾರದ ಹಣದಿಂದಲೇ ಕಾರ್ಯಗತಮಾಡ ಬೇಕೆಂದು ಅನೇಕ ಸಂದರ್ಭಗಳಲ್ಲಿ ಒತ್ತಾಯಮಾಡಿದೆ. ಸರ್ಕಾರದವರು ಈ ಕೆಲಸವನ್ನು ತೆಗೆದುಕೊಳ್ಳಬೇಕೆಂಬ ಉದಾರ ಭಾವನೆಯಿಂದ ಇದ್ದರು. ಅಷ್ಟರಲ್ಲಿ road re-classification ಪ್ರಕಾರ ಅದನ್ನು ಜಿಲ್ಲಾ ಬೋರ್ಡು ರಸ್ತೆಯನ್ನಾಗಿ ಮಾಡಿದರು ಜಿಲ್ಲಾ ಬೋರ್ಡು ರಸ್ತೆಗಳನ್ನು ಜಿಲ್ಲಾಬೋರ್ಡಿನವರೇ ಮಾಡ ಬೇಕು, ಸರ್ಕಾರದವರು ಮಾಡುವುದಿಲ್ಲ ಎಂಬ ಒಂದು ನೀತಿಯಮೇಲೆ ಈ ರಸ್ತೆಯನ್ನು ಜಿಲ್ಲಾಬೋರ್ಡಿನವರು ಮಾಡಬೇಕು ಎಂದು ಅವರಿಗೆ ಬರೆದರು. ಈ ರಸ್ತೆ ಯಲ್ಲಿ ಕೆಲವು ಭಾಗ ತುಮಕೂರು ಜಿಲ್ಲಾಬೋರ್ಡಿಗೂ, ಕೆಲವುಭಾಗ ಹಾಸನ ಜಿಲ್ಲಾಬೋರ್ಡಿಗೂ ಸೇರುತ್ತದೆ. ತುಮಕೂರು ಜಿಲ್ಲಾಬೋರ್ಡಿನವರು ನಮ್ಮ ಭಾಗದಲ್ಲ ನಮ್ಮ ಎಲ್ಲೆಯವರೆಗೆ ಆಗತಕ್ಕ ರಸ್ತೆಯನ್ನು ಮಾಡಿ ದ್ದೇವೆ, ಉಳಿದಭಾಗದ ರಸ್ತೆಯು ಹಾಸನ ಜಿಲ್ಲಾ ಬೋರ್ಡಿನವರ ಎಲ್ಲೆಯೊಳಗೆ ಬರುವುದರಿಂದ ಹಾಸನ ಜಿಲ್ಲಾಬೋರ್ಡಿನವರು ಮಾಡಬೇಕೆಂದು ಬರೆದರು. ಅದಕ್ಕೆ ಹಾಸನ ಜಿಲ್ಲಾಬೋರ್ಡಿನವರು ಈ ರಸ್ತೆಯನ್ನು ಮಾಡಿಸುವ ಅವಶ್ಯಕತೆ ಇದೆ, ಆದರೆ ನಮ್ಮಲ್ಲಿ ಇದಕ್ಕೆ ಖರ್ಚುಮಾಡಲು ದುಡ್ಡಿಲ್ಲವಾದುದರಿಂದ ತೆಗೆದು ಕೊಳ್ಳುವುದಕ್ಕಾಗುವುದಿಲ್ಲವೆಂದು ಬರೆದರು. ಹೀಗಾಗಿ ಆ ರಸ್ತೆಯು ಅಷ್ಟಕ್ಕೇ ನಿಂತಿದೆ. ಹಾಸನ ಬೌಂಡರಿ ಯೊಳಗೆ ಐದಾರು ಮೈಲಿಗಳ ರಸ್ತೆಯಾಗಬೇಕು. ಇದಕ್ಕೆ ಒಂದು ರಿವೈಸ್ಡ್ ಅಂದಾಜುಮಾಡಿ ಕಳುಹಿಸಿ ಎಂದು ಈಗ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಫೀಸಿಗೆ ಕಳುಹಿಸಿದ್ದಾರೆ. ಅಲ್ಲಿ ಅವರು ಹೋಗಿ ಸರ್ವೆಮಾಡಿ, ಅಂದಾಜುತಯಾರ್ಮಾಡಿ, ಸೂಪರಿಂಟೆಂಡಿಂಗ್ ಇಂಜಿನಿ ಯರ್ ಅವರ ಆಫೀಸಿಗೆ ಕಳುಹಿಸಿ ಸುಮಾರು ಆರು ತಿಂಗಳಾಯಿತು. ಇನ್ನೂ ಅಲ್ಲೇ ಇದೆ. ನಾನು ಇಲ್ಲಿಗೆ ಈ ಅಧಿವೇಶನಕ್ಕೆ ಬಂದಮೇಲೆ ಚೀಫ್ ಇಂಜಿನಿ ಯರ್ ಅವರ ಆಫೀಸಿಗೆ ಎರಡು ಮೂರು ಸಲ ಹೋಗಿ ವಿಚಾರಿಸಿದ್ದರಮೇಲೆ ಜಾಗ್ರತೆಯಾಗಿ ಈ ಅಂದಾಜನ್ನು ತರಿಸಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಅದು ಇನ್ನೂ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ದಯವಿಟ್ಟು ಈ ರಸ್ತೆಯ ಅಂದಾಜನ್ನು ಈಗಲಾದರೂ ಕೂಡಲೇ ಮಂಜೂರ್ಮಾಡಿ, ರಸ್ತೆಯ ಕೆಲಸವನ್ನು ಕಾರ್ಯಗತ ಮಾಡಿಕೊಡಬೇಕೆಂದು ಹೇಳಿ ನನ್ನ ಭಾಷಣವನ್ನು ನಿಲ್ಲಿ ಸುತ್ತೇನೆ.

*ಶ್ರೀ ಬಿ. ವೈ. ನೀಲೇಗೌಡ (ಪಾಂಡವಪುರ).— ಸ್ವಾಮಿ, ನಾನು ಇಷ್ಟು ಸದಸ್ಯರ ಕಾಲವನ್ನು ಹೆಚ್ಚಾಗಿ ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಈ ಮಾನ್ಯ ಸಭೆಯಲ್ಲಿ ನಮ್ಮ ಜಿಲ್ಲೆಗೆ ಸಂಬಂಧಪಟ್ಟ ಒಂದು ರಸ್ತೆಯ ವಿಚಾರವಾಗಿ ನಮಗಿರತಕ್ಕ ತೊಂದರೆಯನ್ನು ತಿಳಿಸಿದರೆ, ಆ ಕೊರತೆಯನ್ನು ನಿವಾರಣೆ ಮಾಡುತ್ತಾ ರೆಂಬ ನಂಬಿಕೆ ಮತ್ತು ಆಶೆಯಿಂದ ಸರ್ಕಾರದವರಿಗೆ ಒಂದೆರಡು ವಿಷಯಗಳನ್ನು ತಿಳಿಸಬಯಸುತ್ತೇನೆ. ನಮ್ಮ ತಾಲ್ಲೂಕಿನಿಂದ ಕೃಷ್ಣರಾಜಪೇಟೆಗೆ ಒಂದುರಸ್ತೆ L.C.K. Road ಎಂದಿದೆ. ಇದನ್ನು ಮುಳುಗಡೆ ಯಾದ ರೈತರ ಅನುಕೂಲಕ್ಕಾಗಿ 1935ನೆ ಇಸವಿಯಲ್ಲಿ ಮಾಡಿದರು. ಈ L.C.K. ರಸ್ತೆಯನ್ನು ಮಾಡಿದಮೇಲೆ ಅದು ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸೇರಿದ್ದೇ ಅಥವ ಜಿಲ್ಲಾಬೋರ್ಡಿಗೆ ಸೇರಿದ್ದೇ ಎಂಬ ವಾದದಲ್ಲಿಯೇ 1951-52ನೆಯ ಇಸವಿಯವರೆಗೂ ಕೂಡ ಯಾವ ವಿಧ ವಾದ ರಿಪೇರಿಯನ್ನೂ ಮಾಡಿಸಲಿಲ್ಲ. ಆಮೇಲೆ 1952ನೆಯ ಇಸವಿಯ ಕೊನೆಯಲ್ಲಿ ಇದನ್ನು ಮೂರನೆ ತರಗತಿಯ State Fund Road ಎಂದು ವಿಂಗಡಿಸಿ ದರು. ಇದಕ್ಕೆ ಮೈಲಿಗೆ ಸುಮಾರು 200 ರೂಪಾಯಿ ರಿಪೇರಿಗೆ ಕೊಡುತ್ತಾರೆ. ಇದಕ್ಕೆ ಬಹಳ ವರ್ಷಗಳಿಂ ದಲೂ ರಿಪೇರಿಯಾಗದೆ ಇರುವುದರಿಂದ ರಸ್ತೆ ಬಹಳ ಕೆಟ್ಟುಹೋಗಿ ಅದು ರಸ್ತೆಯೂ ಅಲ್ಲ, ಕಾಡೂ ಅಲ್ಲ ಎನ್ನುವ ಪರಿಸ್ಥಿತಿಗೆ ಬಂದಿದೆ. ಇದನ್ನು ಆಗಿನಿಂದಲೂ ಯಾರಿಗೆ ಹೇಳಿಕೊಂಡರೂ ಕೂಡ ಅವರ ಗಮನ ಈ ರಸ್ತೆಯ ಕಡೆ ಹೋಗಿಲ್ಲ.

ಈ ರಸ್ತೆಗೆ ಅಡ್ಡಲಾಗಿ ಒಂದು ದೊಡ್ಡ ಹಳ್ಳವಿದೆ. ಈ ಮಾರ್ಗದಲ್ಲಿ ಒಂದು ಬಸ್ಸು ಓಡಾಡುತ್ತದೆ. ಬಸ್ಸು ಈ ಹಳ್ಳವಿರುವ ಸ್ಥಳಕ್ಕೆ ಸುಮಾರು ರಾತ್ರಿ ಒಂಭತ್ತು ಘಂಟೆಗೆ ಬರುತ್ತದೆ. ಕೆಲವುವೇಳೆ ಬಸ್ಸು ಅಲ್ಲಿಯೇ ನಿಂತು ಹೆಂಗಸರು ಮಕ್ಕಳಾದಿಯಾಗಿ ಬಸ್ಸಿನಲ್ಲಿ ಪ್ರಯಾಣ ಮಾಡುವವರು ರಾತ್ರಿಯೆಲ್ಲ ಅಲ್ಲಿಯೇ ಇರಬೇ ಕಾದ ಸನ್ನಿವೇಶ ಬಂದಿದೆ. ನಾನು ಎಷ್ಟೋಸಲ ಇದರ ಬಗ್ಗೆ ಸರ್ಕಾರಕ್ಕೆ ತಿಳಿಸಿದ್ದೇನೆ ಮತ್ತು ಸ್ಥಳದ ಅಧಿಕಾರಿಗಳಿಗೂ ತಿಳಿಸಿದ್ದೇನೆ. ಆದರೂ ಕೂಡ ಯಾವಕಾರಣದಿಂದಲೋ ಇದರಕಡೆ ಹೆಚ್ಚು ಗಮನ ಕೊಟ್ಟಿಲ್ಲ. ಈಗಲಾದರೂ ಸರ್ಕಾರದವರು ಈ ಹಳ್ಳಕ್ಕೆ ಒಂದು ಸೇತುವೆಯನ್ನು ಮಾಡಿಸಿಕೊಡಬೇಕೆಂದು ಹೇಳುತ್ತೇನೆ.

*ಶ್ರೀ ಬಿ. ವಿ. ನಾರಾಯಣರೆಡ್ಡಿ (ಬಾಗೇಪಲ್ಲಿ—ಗುಡಿ ಬಂಡ).— ಸ್ವಾಮಿ, ನಾನು ಇಲ್ಲಿಗೆ ಬಂದಾಗಿನಿಂದಲೂ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಚಿತ್ರಾವತಿನದಿಗೆ ಒಂದು ಸೇತುವೆಯನ್ನು ಕಟ್ಟಬೇಕೆಂದು ಹೇಳುತ್ತಿದ್ದರೂ ಇದು ವರೆಗೂ ಯಾರೂ ಅಲ್ಲಿ ಒಂದು ಸೇತುವೆಯನ್ನು ಕಟ್ಟಿಸಿ ಕೊಡಲಿಲ್ಲ. ಇದನ್ನೆಲ್ಲ ನೋಡಿದರೆ ಸರ್ಕಾರದಲ್ಲಿ ಮಂತ್ರಿಗಳೂ, ಮತ್ತು ಇಲಾಖೆಗಳೂ ಇವೆಯೋ ಇಲ್ಲವೋ ಗೊತ್ತಿಲ್ಲ. ಜನರಿಗೆ ಉಪಯೋಗವಾಗತಕ್ಕ ಇಷ್ಟು ಸಣ್ಣಕೆಲಸವನ್ನು ಮಾಡಿಸದೆ ಇದ್ದಮೇಲೆ ಮಂತ್ರಿಗಳು ಈ ಸಭೆಯಲ್ಲಿ ಯಾತಕ್ಕೆ ಕುಳಿತುಕೊಳ್ಳು ತ್ತಾರೆಯೋ ಗೊತ್ತಿಲ್ಲ. ಮಂತ್ರಿಗಳು promise ಮಾಡುತ್ತಾರೆ, ಆಮೇಲೆ ಅವರೇ ಅದನ್ನು break ಮಾಡುತ್ತಾರೆ. ಇವರೆಲ್ಲ ಯಾಕೆ ಈ ರೀತಿ ಮಾಡು ತ್ತಾರೆ ಎನ್ನುವುದು ಕೂಡ ಗೊತ್ತಿಲ್ಲ. ನಮ್ಮ ಬಾಗೇಪಲ್ಲಿ ತಾಲ್ಲೂಕು ಒಂದು peculiar taluk. ಭಾಷಾ ದೃಷ್ಟಿಯಿಂದ ನೋಡಿದರೆ ನಮ್ಮ ದೃಷ್ಟಿಗೆ ಅದು peculiar ಆಗಿ ಕಾಣುತ್ತದೆ. ನೀವು ಕನ್ನಡ ಮಾತ ನಾಡುತ್ತೀರಿ, ನಾವು ತೆಲುಗು ಮಾತನಾಡುತ್ತೇವೆ. ಆ ತಾಲ್ಲೂಕಿನ 77 ಸಾವಿರ ಪ್ರಜಾಸಂಖ್ಯೆಯಲ್ಲಿ ಸುಮಾರು 200 ಜನ ಕನ್ನಡ ಭಾಷೆಯನ್ನಾಡಬಹುದು, ಅಷ್ಟೇ. ಇನ್ನೊಂದು ವಿಚಾರವೆಂದರೆ ಯಾವ ವಿಷಯದಲ್ಲಿ ನೋಡಿದರೂ ಸಹ ನಮಗೆ ಬೇಕಾದ ಸೌಲಭ್ಯಗಳನ್ನು ಒದಗಿಸುತ್ತಿಲ್ಲ. ವಿದ್ಯುಚ್ಛಕ್ತಿ ಮೊದಲೇ ಇಲ್ಲ, ರಸ್ತೆ ಗಳು ಅಷ್ಟಕ್ಕೂ ಇಲ್ಲ. ರೆವೆನ್ಯೂ ಇಲಾಖೆಯವರು ಮಾತ್ರ ಕಂದಾಯವನ್ನು ವಸೂಲ್ಮಾಡುತ್ತಾರೆ. ನಮಗೆ ಯಾವ ಸೌಕರ್ಯಗಳನ್ನೂ ಒದಗಿಸದೆ ಇರುವ ಕಾರಣ No tax campaign ಯಾಕೆ ಪ್ರಾರಂಭ ಮಾಡಬಾರದು ಎಂದು ಯೋಚನೆಮಾಡುತ್ತಿದ್ದೇನೆ. ನಮ್ಮ ಹತ್ತಿರ ಕಂದಾಯದ ರೂಪದಲ್ಲಿ ಹಣವನ್ನು ವಸೂಲ್ಮಾಡಿ ನಮಗೆ ಆಗಬೇಕಾಗಿರುವ ಯಾವ ಕೆಲಸ ಗಳನ್ನೂ ಮಾಡಿಕೊಡದೆ ಇರುವುದನ್ನು ನೋಡಿದರೆ ಇವರು ಯಾಕೆ ಈ ರೀತಿ ಮಾಡುತ್ತಾರೆನ್ನಿಸುತ್ತದೆ.

ಬಾಗೇಪಲ್ಲಿಗೆ ಬರಬೇಕಾದರೆ ಚಿಕ್ಕಬಳ್ಳಾಪುರದಿಂದ ಬಂದರೆ ಚಿತ್ರಾವತಿನದಿ ಸಿಕ್ಕುತ್ತದೆ. ಚಿಂತಾಮಣಿ

ಕಡೆಯಿಂದ ಬಂದರೆ ಪಾಪಘ್ನಿನದಿ ಸಿಕ್ಕುತ್ತದೆ. ಈ ಎರಡು ನದಿಗಳಿಗೂ ಸೇತುವೆಗಳಿಲ್ಲ. ಮಳೆಗಾಲದಲ್ಲಂತೂ ಈ ನದಿಗಳನ್ನು ದಾಟುವುದಕ್ಕೆ ಬಹಳ ಕಷ್ಟವಾಗುತ್ತದೆ. ಮಾನ್ಯಮಂತ್ರಿಗಳು ಒಂದು high level causeway ಕಟ್ಟಲು 75 ಸಾವಿರ ರೂಪಾಯಿಗಳು ಮಂಜೂರಾಗಿದೆ ಎಂದು ಹೇಳಿದರು. ಆದರೆ ಕಾರ್ಯ ಮಾತ್ರ ಆಗಿಲ್ಲ.

ತಿರುಮಣಿ ಅಣೆಕಟ್ಟನ್ನು ಕಟ್ಟಲು ಮೊದಲನೆಯ ಪಾಂಚವಾರ್ಷಿಕ ಯೋಜನೆಯಲ್ಲಿ $3\frac{1}{2}$ ಲಕ್ಷಕ್ಕೆ ಅಂದಾಜು ಮಾಡಿದ್ದೇವೆಂದು ಮಾನ್ಯ ಕಡಿದಾಳ್‌ಮಂಜಪ್ಪನವರು ಹೇಳಿದ್ದರು. ಈ ಸಂಬಂಧದ ಮಾತುಕತೆಗಳಿಗೆ ನನ್ನನ್ನು ಆಂಧ್ರ ಸರ್ಕಾರದವರ ಬಳಿಗೆ ಕಳುಹಿಸುವುದಾಗಿ ಹೇಳಿದ್ದರು. ಈಗ ನೋಡಿದರೆ ಅದು ಮೊದಲನೆಯ ಪಾಂಚವಾರ್ಷಿಕ ಯೋಜನೆಯಲ್ಲಿಯೂ ಇಲ್ಲ. ಎರಡನೆಯ ಯೋಜನೆಯಲ್ಲೂ ಇಲ್ಲ. ಹೀಗೆ ಬಾಯಲ್ಲಿ ಒಂದು ಹೇಳುತ್ತಾರೆ, ಕಾರ್ಯದಲ್ಲಿ ಒಂದು ಮಾಡುತ್ತಾರೆ. ನಾನು ಖಂಡಿತವಾಗಿ ಹೇಳಬೇಕಾದರೆ ಈಗಿನ ಸರ್ಕಾರದ ಕೈಯಲ್ಲಿ ಏನೂ ಆಗುವುದಿಲ್ಲ. ಇಂಥ ಸರ್ಕಾರವನ್ನು ಉರುಳಿಸಬೇಕು. ಇವರಿಗೆ ಯೋಗ್ಯತೆ ಇದ್ದರೆ ಯಾವುದಾದರೂ ಕೆಲಸ ಮಾಡುತ್ತೇವೆಂದು ಬಾಯಲ್ಲಿ ಹೇಳಿದರೆ ಅದನ್ನು ಮಾಡಬೇಕು. ಹೇಳುವುದೇ ಒಂದು, ಮಾಡುವುದೇ ಒಂದು.

ಒಂದು ಭಾಗದಲ್ಲಿ 375 ಪಂಪ್‌ಸೆಟ್ಟುಗಳನ್ನು ಕೊಡುವುದು ಮತ್ತೊಂದು ಭಾಗದಲ್ಲಿ 12 ಕೂಡ ಕೊಡದೆ ಇರುವುದು ನ್ಯಾಯವಲ್ಲ. ಇವರು ಕಾಂಗ್ರೆಸ್ ಸಂಸ್ಥೆಗೆ ಸೇರಿದವರಂತೆ. ಇಂಥವರ ಬಾಯಲ್ಲಿ ಬರುವುದೇ ಬೇರೆ, ಕೈಯಲ್ಲಿ ಮಾಡುವುದೇ ಬೇರೆ. 21 ಜನರು ನಮ್ಮ ಕಡೆ ಇದ್ದಿದ್ದರೆ ಈ ಸರ್ಕಾರವನ್ನು ಉರುಳಿಸಿ ಮನೆಗೆ ಕಳುಹಿಸುತ್ತಿದ್ದೆ. ಮುಖ್ಯಮಂತ್ರಿಗಳು ವಿರೋಧಪಕ್ಷದ ನಾಯಕರನ್ನು ತಮ್ಮ ಸಂಗಡ ಪ್ರವಾಸಗಳಿಗೆ ಕರೆದುಕೊಂಡು ಹೋಗಿ ಅವರನ್ನು ತಮ್ಮ ಕಡೆಗೆ ಒಲಿಸಿಕೊಳ್ಳುತ್ತಿದ್ದಾರೆ. ಇವರು ಓಟು ಪಡೆಯಲು ಕಾಂಗ್ರೆಸ್ ಸಂಸ್ಥೆಯ ಹೆಸರನ್ನು ಹೇಳಿಕೊಂಡು, ದೊಡ್ಡದೊಡ್ಡ ನಾಯಕರುಗಳಿಂದ ಹೇಳಿಕೆಗಳನ್ನು ಕೊಡಿಸಿ, ತಮ್ಮ ಕೆಲಸವನ್ನು ಮಾಡಿಕೊಳ್ಳುತ್ತಿದ್ದಾರೆ.

ವಿಧಾನಸೌಧಕ್ಕೆ ಆರು ಲಕ್ಷ ರೂಪಾಯಿ ಹಾಳಾಯಿತು. ಶ್ರೀ ನಂಜಪ್ಪನವರು 5-6 ಸಾವಿರ ರೂಪಾಯಿ ನುಂಗಿದರೆಂದು ಜನ ಹೇಳುತ್ತಾರೆ. ಈ ರೀತಿ ಬಡಬೋರೇಗೌಡನ ಹೆಸರು ಹೇಳಿಕೊಂಡು ಓಟು ತೆಗೆದುಕೊಂಡು ಬಂದು ಇಲ್ಲಿ ಕುಳಿತುಕೊಂಡು ದರ್ಬಾರು ಮಾಡುತ್ತಿದ್ದಾರೆ. ಬೋರೇಗೌಡನಿಗೆ ಇದರಿಂದ ಮೂರು ಕಾಸಿನ ಪ್ರಯೋಜನ ಕೂಡ ಇಲ್ಲ. ಮೆಟರ್ನಿಟಿವಾರ್ಡು ಕೊಡುತ್ತೇವೆಂದು ಹೇಳಿ ಒಂದೂ ಕೊಟ್ಟಿಲ್ಲ. ಕೇಳಿದರೆ ಪಬ್ಲಿಕ್‌ವರ್ಕ್ಸ್ ಇಲಾಖೆ ಕೇಳಿ ಎಂದು ಹೇಳುತ್ತಾರೆ. ಅವರನ್ನು ಕೇಳಿದರೆ ಬಿಲ್ಲಾಗಿಲ್ಲವೆಂದು ಹೇಳುತ್ತಾರೆ. ಈ ಇಲಾಖೆ ಯಾರ ಕೈಲಿದೆ ? ಮಂತ್ರಿಗಳ ಕೈಲಿರುವಾಗ ಅವರು ನೋಡಬೇಡವೆ ?

Sri T. N. MUDALAGIRI GOWDA (Kunigal).—On a point of order, Sir. The member is not speaking on the relevant Demand. He should be asked to confine himself to the Demand under consideration.

Sri B. V. NARAYANA REDDY.—Yes. This work was promised to be taken up on several occasions but nothing has been done yet. What is wrong with the Minister ? Government is well aware that in rainy season, it would not be possible even to get the post to Bagepalli ; swimmers have to cross the stream and get the post. Therefore, a High Level Causeway, as promised several times, may be constructed early and thereby let the Government fulfil their promise.

Mr. SPEAKER.—The House will now adjourn for lunch and meet at 3-30.

---

*The House adjourned for Lunch at Three of the Clock and reassembled at Thirty Minutes past Three of the Clock.*

---

[MR. DEPUTY SPEAKER in the Chair].

*ಶ್ರೀ ಎಚ್. ಎಂ. ಚನ್ನಬಸಪ್ಪ (ಕೈಗಾರಿಕಾ ಶಾಖೆಯ ಮಂತ್ರಿಗಳು).—ಸ್ವಾಮಿ, 50 ಸಿವಿಲ್ ವರ್ಕ್ಸ್ ಮತ್ತು 81 ಕ್ಯಾಪಿಟಲ್ ಅಕೌಂಟ್ ಆಫ್ ಸಿವಿಲ್ ವರ್ಕ್ಸ್ ಇವೆರಡರ ಬಗ್ಗೆ ಸುಮಾರು 7,27,58,981 ರೂಪಾಯಿಗಳ ಡಿಮ್ಯಾಂಡನ್ನು ಸಭೆಯ ಮುಂದೆ ಇಟ್ಟಮೇಲೆ ಮಾನ್ಯ ಸದಸ್ಯರು ಅದರ ಸಂಬಂಧವಾಗಿ ಮಾತನಾಡುತ್ತಾ ಅನೇಕ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಪಬ್ಲಿಕ್ ವರ್ಕ್ಸ್ ಇಲಾಖೆ ಬಹಳ ಮುಖ್ಯವಾದ ಇಲಾಖೆ. ಈ ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ಸುಮಾರು 1951ನೆಯ ಇಸವಿಯಿಂದ ನಡೆದಿರತಕ್ಕ ಕೆಲಸಕಾರ್ಯವನ್ನು ತಾವು ಸ್ವಲ್ಪ ಪರಿಶೀಲಿಸಿದರೆ ಎಷ್ಟು ಪ್ರಮಾಣದಲ್ಲಿ ಕೆಲಸಕಾರ್ಯಗಳು ಹೆಚ್ಚಾಗಿವೆಯೆಂಬುದು ಗೊತ್ತಾಗುತ್ತದೆ. ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ಏನೇನು ಕೆಲಸ ಕಾರ್ಯಗಳು ಸುಮಾರು ನಾಲ್ಕೈದು ವರ್ಷಗಳಿಂದ ನಡೆಯುತ್ತಿವೆಯೆಂಬ ಬಗ್ಗೆ ತಮಗೆ ಒಂದು ವರದಿ ಕೊಟ್ಟಿದೆ. ಆ ವರದಿಯಲ್ಲಿರುವ ಅಂಕಿ ಅಂಶಗಳನ್ನು ತಾವು ನೋಡಿದರೆ ಈಗ ಸುಮಾರು ಐದಾರು ವರ್ಷಗಳಿಂದ ಬಹಳ ಹೆಚ್ಚಿನ ಪ್ರಮಾಣದಲ್ಲಿ ಈ ಇಲಾಖೆಯ ಕೆಲಸ ಬೆಳೆದಿದೆಯೆಂಬುದು ಗೊತ್ತಾಗುತ್ತದೆ. 1951-52ನೆಯ ಸಾಲಿನಲ್ಲಿ, 4,42,50.062 ರೂಪಾಯಿಗಳು, 1952-53 ರಲ್ಲಿ ನಾಲ್ಕೂವರೆ ಕೋಟಿ ರೂಪಾಯಿಗಳು, 1953-54 ರಲ್ಲಿ 5 ಕೋಟಿ 29 ಲಕ್ಷ ರೂಪಾಯಿಗಳು, 1954-55 ರಲ್ಲಿ ಎಂಟು ಕೋಟಿ ಹದಿನಾಲ್ಕು ಲಕ್ಷ ರೂಪಾಯಿಗಳೂ, 1955-56 ರಲ್ಲಿ 12 ಕೋಟಿ 50 ಲಕ್ಷ ರೂಪಾಯಿಗಳು ಈ ರೀತಿ ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ಕೆಲಸವಾಯಿತು. ಈಗ ಐದು ವರ್ಷಗಳಲ್ಲಿ ಸುಮಾರು ಮೂರರಷ್ಟು ಕೆಲಸ ಹೆಚ್ಚಿದೆ. ಕೇವಲ 4 ಕೋಟಿ 42 ಲಕ್ಷ ರೂಪಾಯಿಗಳ ಕೆಲಸವಿದ್ದುದು $12\frac{1}{2}$ ಕೋಟಿ ರೂಪಾಯಿಗಳಿಗೇರಿ ಕೋಟಿಗಟ್ಟಲೆ ಈ ಇಲಾಖೆಯ ಕೆಲಸ ಕಾರ್ಯ ಹೆಚ್ಚಾಗುತ್ತಿದೆ.

ಆದರೆ ತಾವುಗಳೆಲ್ಲರೂ ಒಂದು ಅಂಶವನ್ನು ನೋಡುವುದಾದರೆ ಈ ಕೆಲಸಗಳ ಒತ್ತಡದ ಪ್ರಮಾಣ

(ಶ್ರೀ ಎಚ್. ಎಂ. ಚನ್ನಬಸಪ್ಪ.)

ವೆಷ್ಟು ಹೆಚ್ಚಾಗಿದೆ ಎನ್ನುವುದು ತಮಗೆಲ್ಲಾ ಗೊತ್ತಾಗುತ್ತದೆ. ಈ ಮೈನರ್ ಟ್ಯಾಂಕುಗಳ ರೆಸ್ಟೋರೇಷನ್ ಬಗ್ಗೆ ಸರ್ಕಾರ 1951-52ರಲ್ಲಿ ಖರ್ಚು ಮಾಡಿದತಕ್ಕ ಮೊಬಲಗು 12,38,023 ರೂಪಾಯಿ; ಆದರೆ 1955-56ರಲ್ಲಿ 21,45,000 ರೂಪಾಯಿ ಗ್ರ್ಯಾಂಟನ್ನು ಒದಗಿಸಲಾಗಿದೆ. ಇಷ್ಟು ಮೊಬಲಗು ಖರ್ಚಾಗಿದೆ. ನಾನು ಈಗಾಗಲೆ ಹಿಂದೆ ಹೇಳಿದುದಕ್ಕೆ 25 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ.

**Mr. DEPUTY SPEAKER.**—That is correct.

**Sri H. M. CHANNABASAPPA.**—I am submitting that the work that is being discharged by this department on all accounts has increased very much. ಹೀಗೆ ಕೆರೆಗಳ ಜೀರ್ಣೋದ್ಧಾರದ ಬಗ್ಗೆ ಹಣ ಖರ್ಚಾಗಿದೆ. ಇನ್ನು ಕಟ್ಟಡಗಳ ಬಗ್ಗೆ ಖರ್ಚಾಗಿರತಕ್ಕ ಮೊಬಲಗು ಎಷ್ಟಾಗಿರುತ್ತದೆ ಎಂಬುದನ್ನು ತಿಳಿಸುತ್ತೇನೆ. 1951-52ರಲ್ಲಿ 34·26 ಲಕ್ಷ ರೂಪಾಯಿಗಳು ಖರ್ಚಾಗಿವೆ. 1952-53 ರಲ್ಲಿ 38·58 ಲಕ್ಷ ರೂಪಾಯಿಗಳು ಖರ್ಚಾಗಿವೆ. 1953-54 ರಲ್ಲಿ 54·7[illegible] ಲಕ್ಷ ರೂಪಾಯಿಗಳೂ, 1954-55 ರಲ್ಲಿ 84·71 ಲಕ್ಷ ರೂಪಾಯಿಗಳೂ, 1955-56 ರಲ್ಲಿ 129·41 ಲಕ್ಷ ರೂಪಾಯಿಗಳೂ ಖರ್ಚಾಗಿದೆ. ಇಷ್ಟು ಮೊಬಲಗಿನ ಕಟ್ಟಡದ ಕೆಲಸಗಳು ನಡೆಯುತ್ತಿವೆ. ಈ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಈ ದಿವಸ ಇಷ್ಟು ಕೆಲಸ ಕಾರ್ಯಗಳು ಎಂದರೆ ಕೆರೆ-ಕಟ್ಟಡಗಳ ವಿಚಾರದಲ್ಲಿ ನಡೆಯುತ್ತಿವೆ ಎಂಬ ಅಂಕಿ ಅಂಶಗಳನ್ನು ನಾನು ಈಗ ತಮ್ಮ ಮುಂದಿಟ್ಟಿರತಕ್ಕ ಉದ್ದೇಶ ಏನೆಂದರೆ, ಈ ಇಲಾಖೆಯಲ್ಲಿ ಎಷ್ಟರಮಟ್ಟಿಗೆ ಕೆಲಸದ ಒತ್ತಡ ಹೆಚ್ಚಾಗಿದೆ ಎಂಬುದನ್ನು ತಮಗೆಲ್ಲರಿಗೂ ತಿಳಿಸಬೇಕೆಂಬ ಉದ್ದೇಶದಿಂದ ನಾನೀಗ ಈ ಅಂಕಿ ಅಂಶಗಳನ್ನೆಲ್ಲಾ ತಮ್ಮ ಮುಂದೆ ಇಟ್ಟಿದ್ದೇನೆ. ಹೀಗೆ ಕೋಟ್ಯಂತರ ರೂಪಾಯಿಗಳ ಕೆಲಸ ಕಾರ್ಯಗಳು ನಡೆಯುತ್ತಿರುವ ಕಡೆ ಎಷ್ಟೋ ಅಲ್ಲಿ-ಇಲ್ಲಿ ಕೆಲವು ಲೋಪದೋಷಗಳುಂಟಾಗುತ್ತವೆ. ಆದರೆ ಎಲ್ಲಾ ಕಡೆಗಳಲ್ಲಿಯೂ ಈ ಕಾರ್ಯಗಳು ಎಲ್ಲಾ ಜನರೂ ಒಪ್ಪತಕ್ಕ ರೀತಿಯಲ್ಲಿ ಅಷ್ಟು ಸಮರ್ಪಕವಾಗಿ ನಡೆಯುತ್ತಿವೆಯೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಈ ಕೆಲಸ ಕಾರ್ಯಗಳೆಲ್ಲಾ ಎಷ್ಟರಮಟ್ಟಿಗೆ ಆ ಒಂದು ದೇಶಭಕ್ತಿ, ರಾಷ್ಟ್ರಪ್ರೇಮಗಳಿಂದ ನಡೆಸಬೇಕೆಂಬ ಕಾತರತೆ ಮತ್ತು ಕುತೂಹಲಗಳು ತಮಗೆಲ್ಲರಿಗೂ ಇರುತ್ತವೆಯೋ ಅಷ್ಟೇ ಕಾತರತೆ—ಕುತೂಹಲಗಳು ಸರ್ಕಾರದವರಿಗೂ ಇರುತ್ತವೆಂದು ಹೇಳಿದರೆ ಇದನ್ನು ತಾವೆಲ್ಲರೂ ಒಪ್ಪಲೇಬೇಕು. ಈ ಪಬ್ಲಿಕ್ ವರ್ಕ್ಸ್ ಇಲಾಖೆಯೆನ್ನುವುದಾದರೋ ಹಣ ಕಾಸನ್ನು ಖರ್ಚು ಮಾಡತಕ್ಕಂಥ ಇಲಾಖೆ. ಈ ಇಲಾಖೆ ವರ್ಷಂಪ್ರತಿ 12 ಕೋಟಿ ರೂಪಾಯಿಗಳಿಗೂ ಮೀರಿ ಖರ್ಚುಮಾಡುತ್ತಿದೆ. ಆದುದರಿಂದ ಲೆಕ್ಕಾಚಾರಗಳ ವಿಲೇವಾರಿ ಮತ್ತು ಕೆಲಸಗಳನ್ನು ಎಷ್ಟು ವಿತರಣೆಯಿಂದ ನಡೆಸಿಕೊಂಡು ಹೋಗಬೇಕು ಎಂಬೀ ವಿಚಾರಗಳಲ್ಲಿ ಈ ಇಲಾಖೆಗೆ ಬಹಳಮಟ್ಟಿನ ಜವಾಬ್ದಾರಿಯಿರಬೇಕು. ಈ ಇಲಾಖೆಯಲ್ಲೂ ವಿತರಣೆಯಿಂದ, ದಕ್ಷತೆಯಿಂದ, ಧರ್ಮ ದೃಷ್ಟಿಯಿಂದ ಕೆಲಸ ಮಾಡತಕ್ಕಂಥ ಜನರು ಎಷ್ಟಿದ್ದಾರೆ, ದೇಶದಲ್ಲಿ ವಾತಾವರಣ ಯಾವ ರೀತಿಯಿದೆ, ಎಲ್ಲೆಲ್ಲಿ ಏನೇನು ಬಂದೋಬಸ್ತಾಗಬೇಕು, ಯಾವ ಯಾವ ಕೆಲಸಗಳನ್ನು ಎಷ್ಟೆಷ್ಟು ಪರಿಶೀಲನೆ ಮಾಡಿ ಕೈಗೊಳ್ಳಬೇಕು, ಎಂಬುದನ್ನು ಗಮನಿಸಿ ಕೆಲಸ ಕಾರ್ಯಗಳನ್ನು ಮಾಡಬೇಕಾಗಿದೆ. ಸಾರ್ವಜನಿಕರ ಹಣ ದುರ್ವ್ಯಯ, ದುರ್ವಿನಿಯೋಗ ಆಗದೆ ಇರುವಂತೆ ಎಲ್ಲಾ ಅಂಶಗಳನ್ನು ಒಂದು ವಿಚಕ್ಷಣೆಯಿಂದ ನೋಡಿಕೊಂಡು ಈ ಕೆಲಸಕಾರ್ಯಗಳನ್ನು ನಡೆಸತಕ್ಕ ವಿಚಾರದಲ್ಲಿ ಕೇವಲ ಸರ್ಕಾರದ ಪ್ರಯತ್ನ ಒಂದೇ ಏನೂ ಮಾಡಲಾರದು. ಈ ವಿಚಾರದಲ್ಲಿ ಸಾರ್ವಜನಿಕರ ನೆರವು ಬಹಳ ಅಗತ್ಯವಾಗಿದೆ. ಆದರೆ ಈ ಇಲಾಖೆಯ ಆಡಳಿತದ ಬಗ್ಗೆ ಶ್ರೀಮಾನ್ ಗೋಪಾಲಗೌಡರು ಕೆಲವು ಟೀಕೆ-ಟಿಪ್ಪಣಿಗಳನ್ನು ಮಾಡಿದರು. ಮತ್ತೆ ಕೆಲವು ಸಲಹೆಗಳನ್ನೂ ಮಾಡಿದ್ದಾರೆ. ಶ್ರೀ ವ್ಯಾಸ್ಕರನ್‌ಹ್ಯಾಸ್‌ರವರೂ ಇದೇ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಶ್ರೀ ಗೋಪಾಲಗೌಡರು ಕೆಲವು ನ್ಯೂನತೆಗಳನ್ನೇನೋ ಹೇಳಿದರು. ಆದರೆ ಅಷ್ಟು ಹೇಳಿದರೆ ಏನೂ ಸಾಲದು. ಹಾಗೆ ಸುಮ್ಮನೆ ಟೀಕೆ ಮಾಡತಕ್ಕದ್ದು ಅಷ್ಟೇನೂ ಪ್ರಾಮುಖ್ಯವಾದದ್ದಲ್ಲ. ಆ ರೀತಿ ಅಧಿಕಾರಿಗಳನ್ನು ಅಡ್ಡದಾರಿಗೆಳೆಯತಕ್ಕ ಮಾರ್ಗಕ್ಕೆ ಸಾರ್ವಜನಿಕರು ಪ್ರವೇಶಿಸಬಾರದು. ಆದರೆ ಹೀಗೆ ಕೆಲವು ಸಾರ್ವಜನಿಕರೂ ಮತ್ತು ಇತರರೂ ಪ್ರವೇಶಿಸುತ್ತಿದ್ದಾರೆಂದು ಹೇಳಿದ್ದಾರೆ. ಆದರೆ ಹೀಗೆ ಸಾರ್ವಜನಿಕರು ವರ್ತಿಸಿದಲ್ಲಿ ಅದು ಸರ್ಕಾರಿ ಅಧಿಕಾರಿ ವರ್ಗದವರ ತಪ್ಪಲ್ಲ. ಹಾಗೊಂದುವೇಳೆ ಉದ್ದೇಶಪೂರ್ವಕವಾಗಿ ಅಧಿಕಾರಿಗಳು ತಮ್ಮ ಆಡಳಿತದಲ್ಲಿ ರೂಲ್ಸಿಗೆ ವಿರುದ್ಧವಾಗಿ ವರ್ತಿಸುತ್ತಿದ್ದಾರೆ ಮತ್ತು ಅವರಲ್ಲಿ ಅಂಥ ಒಂದು ದಕ್ಷತೆ ಆ ಕಾರ್ಯ ನಡೆಸಲು ಇಲ್ಲವೆಂಬುದಾಗಿ ತಿಳಿದುಬಂದ ಪಕ್ಷದಲ್ಲಿ, ಅವರು ಆ ರೀತಿ ಅಡ್ಡದಾರಿಯಲ್ಲಿ ಪ್ರವೇಶಮಾಡದಿರುವಂತೆ ಒಂದು ಬಿಗಿಯಾದ ವಾತಾವರಣವನ್ನು ಕಲ್ಪಿಸಿ, ಆ ಕೆಲಸಕಾರ್ಯಗಳು ನಿಷ್ಕಳಂಕವಾದ ರೀತಿಯಲ್ಲಿ ನಡೆಯುವಂತೆ ಅವಕಾಶ ಕಲ್ಪಿಸತಕ್ಕದ್ದು ನಮ್ಮ ಮತ್ತು ಮುಖಂಡರುಗಳಾದಂಥ ತಮ್ಮೆಲ್ಲರ ಕರ್ತವ್ಯವಾಗಿದೆ. ಹೀಗೆ ಈ ಲಂಚ ರುಷುವತ್ತುಗಳು ದೇಶದಲ್ಲಿ ಇಲ್ಲದಂತೆ ಸಾರ್ವಜನಿಕರ ಕೆಲಸ ಕಾರ್ಯಗಳು ಸತ್ಯ ಧರ್ಮ ನೀತಿಗಳಿಂದ ನಡೆಯುವಂತೆ ಮಾಡತಕ್ಕದ್ದು ಕೇವಲ ಸರ್ಕಾರದವರ ಕರ್ತವ್ಯ ಮಾತ್ರವೇ ಅಲ್ಲ, ಇದು ಪ್ರಜೆಗಳೆಲ್ಲರ ಕರ್ತವ್ಯವೂ ಆಗಿದೆ. ಅವರು ಹೇಳಿದಂಥ ವಿಷಯಗಳನ್ನೆಲ್ಲಾ ಬಹಳ ಆಸಕ್ತಿಯಿಂದ ನಾನು ಕೇಳಿದೆನು. ಆದರೆ ಅಂಥ ಅನೀತಿವಂತರು ಮೂರು-ನಾಲ್ಕು ಜನರು ಹೀಗೆ ಕೋಟ್ಯಂತರ ರೂಪಾಯಿಗಳ ವ್ಯವಹಾರ ನಡೆಯುತ್ತಿರುವ ಕಡೆ ಇದ್ದರೂ ಇರಬಹುದು. ಆದರೆ ಸತ್ಯ ಧರ್ಮ ನೀತಿಗಳಿಂದ ನಡೆಯತಕ್ಕಂಥ ಅಧಿಕಾರಿಗಳು ಸಹಸ್ರಾರು ಮಂದಿ ಇದ್ದಾರೆ. ಪ್ರಜಾಪ್ರತಿನಿಧಿಗಳಾದ ತಮ್ಮಂಥವರೇ ಕಣ್ಣಾರೆ ಕಂಡ ವಿಚಾರಗಳನ್ನು ನಮ್ಮ ಮುಂದೆ ತಿಳಿಸುವುದಕ್ಕೂ, ಸತ್ಯವಾದಂಥ ವಿಚಾರಗಳನ್ನು ಹೇಳುವುದಕ್ಕೂ ನೀವೇ ಹಿಂದು ಮುಂದು ನೋಡುತ್ತಿದ್ದರೆ ಇನ್ನು ಸರ್ಕಾರದವರಾದರೂ ಈ ಸತ್ಯ ಧರ್ಮಗಳನ್ನು ದೇಶದಲ್ಲಿ ನೆಲಸುವಂತೆ ಮಾಡಲು ಹೇಗೆತಾನೆ ಸಾಧ್ಯವಾಗುತ್ತದೆ? ಇಂಥಿಂಥ ಕಡೆ ದೇಶದಲ್ಲಿ ಹೀಗೀಗೆ ನಡೆಯುತ್ತಿದೆ, ಇಂಥಿಂಥ ಕಡೆ ಇಂಥಿಂಥ ಅನ್ಯಾಯಗಳು ನಡೆಯುತ್ತಿವೆ ಎಂಬುದಾಗಿ ನೀವು ನಿಷ್ಪಕ್ಷಪಾತ ಭಾವನೆಯಿಂದ ಜನರ ಎದುರಿನಲ್ಲಿ ಹೇಳುವ ಪಕ್ಷಕ್ಕೆ ಅಂಥ ಅಧಿಕಾರಿಗಳನ್ನು ಆ ಕೂಡಲೆ ಶಿಕ್ಷೆಗೊಳಪಡಿಸಲು ಸರ್ಕಾರದವರು ಎಂದಿಗೂ ಹಿಂಜರಿಯುವುದಿಲ್ಲ. ಸರ್ಕಾರದವರು ಸದಾ ಸೂಕ್ತ ಕಾರ್ಯಕ್ರಮ ಕೈಗೊಳ್ಳಲು ಸಿದ್ಧರಾಗಿದ್ದಾರೆ. ಆದರೆ ಈ ಮಾನ್ಯ ಸಭೆಯ ಸದಸ್ಯರಾದಂಥ

ತಾವುಗಳೇ, ದೇಶದ ಪ್ರತಿನಿಧಿಗಳಾದಂಥ ನೀವುಗಳೇ ಹೀಗೆ ಕಂಡದ್ದನ್ನು ಕಂಡಹಾಗೆ ತಿಳಿಸಿ ಆ ತಪ್ಪಿತಸ್ಥರನ್ನು ಶಿಕ್ಷೆಗೆ ಒಳಪಡಿಸದೆ ಹೋದರೆ—ಇಂಥ ಕಾರ್ಯಕ್ಕೆ ತಾವುಗಳೇ ಹಿಂದಕ್ಕೆ ಸರಿದ ಪಕ್ಷದಲ್ಲಿ ಇನ್ನು ಆ ಅವಿದ್ಯಾವಂತರಾದ ಹಳ್ಳಿಯ ಜನರು ಇದ್ದುದ್ದನ್ನು ಇದ್ದಹಾಗೆ ಸರ್ಕಾರದವರ ಮುಂದೆ ಹೇಳುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು ತಾವೇ ಹೇಳಬೇಕು.

ಶ್ರೀ ಎಸ್. ಗೋಪಾಲಗೌಡ.—ತಾವು ಹಾಗೆ ಬೇಕೆಂದು ಅಪೇಕ್ಷಿಸುವುದಾದರೆ ನಾನು ಸಿದ್ಧಪಡಿಸಿಟ್ಟುಕೊಂಡಿರುವ 300 ಜನರ ಒಂದು ಪಟ್ಟಿಯೇ ಇದೆ. ನಾನು ಅದನ್ನು ತಾವು ಯಾವಾಗಬೇಕೆಂದರೆ ಆಗ ಕೊಡುವುದಕ್ಕೆ ಸಿದ್ಧವಾಗಿದ್ದೇನೆ.

Sri H. M. CHANNABASAPPA.—I shall be very happy, I shall be exceedingly grateful to the Hon'ble Members of this House and also grateful to anyboby who is prepared to furnish me whatever information he has got and which goes to help to verify the administration and I should like to express my gratitude to such of those people as will be helpful in that direction. ಆದುದರಿಂದ ಈ ಅನೀತಿಯ ವಿಚಾರ ಎಲ್ಲಕಡೆಗಳಲ್ಲೂ ಇದೆ ಎಂದು ಹೇಳುವುದನ್ನು ಬಹುಶಃ ತಾವೂ ಒಪ್ಪಲಾರಿರಿ, ಅದನ್ನು ನಾವೂ ಕೂಡ ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ದೇಶದಲ್ಲಿ ಎಷ್ಟೋ ಕಡೆ ಸತ್ಯ ಧರ್ಮಗಳಿಂದ ಕೆಲಸ ಮಾಡತಕ್ಕಂಥ ಜನರಿದ್ದಾರೆ. ಅದೇ ರೀತಿ ನಮ್ಮಲ್ಲಿಯೂ ಅಷ್ಟೆ ಆ ಸತ್ಯ ಧರ್ಮ ಗಳಿಂದ ಕೆಲಸ ಮಾಡತಕ್ಕ ಜನರಿರುತ್ತಾರೆ. ಆದರೆ ಇದರಲ್ಲಿ ಕೆಲವರು ಸ್ವಾರ್ಥಿಗಳು ಅಥವಾ ಮತ್ತೆ ಯಾವ ಕಾರಣದಿಂದಲಾದರೂ ಪ್ರತಿಫಲಾಪೇಕ್ಷೆ ಮಾಡಿ, ಅದರ ಉದ್ದೇಶಕ್ಕಾಗಿ ಕೆಲಸಗಳು ತಡವಾಗಿ ನಡೆಯುವಂತೆ ಅದರ ಬಗ್ಗೆ ಅಡ್ಡಿ ಆತಂಕಗಳನ್ನುಂಟುಮಾಡತಕ್ಕಂಥ ಕೆಲವರು ಇದ್ದರೂ ಇರಬಹುದು. ಅದೇನೂ ಅಂಥ ಒಂದು ಆಶ್ಚರ್ಯದ ವಿಷಯವಲ್ಲ. ಅಂಥವರ ವಿಷಯದಲ್ಲಿ ಶಿಕ್ಷೆ ವಿಧಿಸಲು ಯಾವ ಅಭ್ಯಂತರವೂ ಇಲ್ಲ. ಅದಕ್ಕೂ ಒಂದು ವೇಳೆ ಅವರು ಆ ಶಿಕ್ಷೆಯ ಪರಿಣಾಮದಿಂದ ಎಚ್ಚರಗೊಂಡು ಉತ್ತಮದಾರಿಗೆ ಬಾರದೆ ಹೋದ ಸಂದರ್ಭಗಳೇನಾದರೂ ಕಂಡುಬಂದರೆ ಅಂಥವರನ್ನು ಕೆಲಸದಿಂದಲೇ ಬರ್‌ತರ್ಫ್ ಕೂಡ ಮಾಡುವುದಕ್ಕೆ ಸರ್ಕಾರದವರು ಸಿದ್ಧವಾಗಿದ್ದಾರೆ. ಹೀಗೆ ಮಾಡದೆ ಹೋದರೆ ಕೆಲಸ ಕಾರ್ಯಗಳು ಸತ್ಯಧರ್ಮದಿಂದ ನಡೆಯಲು ಸಾಧ್ಯವಿರುವುದಿಲ್ಲ. ದೇಶಾಭ್ಯುದಯದ ಕೆಲಸಗಳು ಬಹಳ ಹದಗೆಟ್ಟು ಹೋಗುತ್ತವೆ. ಆದರೆ ಒಂದು ಅಂಶವನ್ನು ತಿಳಿಸಬೇಕಾಗಿದೆ. ಮೈಸೂರು ದೇಶದಲ್ಲಿ ಇತರ ಎಲ್ಲಾ ಸಂಸ್ಥಾನಗಳಲ್ಲಿರತಕ್ಕಂಥ ಅಧಿಕಾರಿಗಳಿಗಿಂತಲೂ ಹೆಚ್ಚು ದಕ್ಷರಾದಂಥ ಅಧಿಕಾರಿಗಳು ಇಲ್ಲಿರುತ್ತಾರೆಂದು ಹೇಳಿದರೆ ಅತಿಶಯೋಕ್ತಿಯಲ್ಲವೆಂಬುದನ್ನು ತಾವೆಲ್ಲರೂ ಒಪ್ಪುತ್ತೀರೆಂದು ನಂಬಿದ್ದೇನೆ. ಈ ವಿಚಾರವನ್ನು ನಾನೊಬ್ಬನು ಹೇಳುವುದೇನು ಇಡೀ ದೇಶವೇ ಹೇಳುತ್ತಿದೆ. ಆದರೆ ಇತ್ತೀಚೆಗೆ ದೇಶಾದ್ಯಂತವೂ ಆಹಾರ ಹತೋಟಿ ಆಜ್ಞೆಗಳು ಬಂದಮೇಲೆ ಈ ಅಧಿಕಾರಿಗಳ ಕ್ಷೇತ್ರದಲ್ಲೂ ಮತ್ತು ಸಾರ್ವಜನಿಕ ಕ್ಷೇತ್ರದಲ್ಲೂ ಈ ಸತ್ಯಧರ್ಮಗಳು ಬಹಳ ಮಟ್ಟಿಗೆ ಸಡಿಲವಾಗುತ್ತಾ ಬಂದಿವೆ. ಆದುದರಿಂದ ಈ ಸಾರ್ವಜನಿಕ ಕೆಲಸಕಾರ್ಯಗಳು ಸತ್ಯಧರ್ಮದಿಂದ ನಡೆಯಬೇಕಾಗಿದ್ದರೆ ಸರ್ಕಾರದವರು ಯಾವತ್ತೂ ಇದಕ್ಕೆ ಹಿಂಜರಿಯುವುದಿಲ್ಲ. ಇದಕ್ಕೋಸ್ಕರವೇ ಈಗ ಆಂಟಿಕರಪ್ಷನ್ ಮತ್ತು ಎಫಿಷಿಯೆನ್ಸಿ ಆಡಿಟ್ ಇಲಾಖೆಗಳನ್ನಿಟ್ಟು ಕೆಲಸ ನಡೆಸುತ್ತಿದ್ದೇವೆ. ಈಗ ಈ ಇಲಾಖೆಗಳನ್ನು ಇನ್ನೂ ಸ್ವಲ್ಪಮಟ್ಟಿಗೆ ಬಿಗಿಮಾಡಿ, ಬಲಪಡಿಸಿ, ಕೆಲಸ ನಡೆಸಲಾಗುತ್ತದೆ. ಇನ್ನು ಈ ಇಲಾಖೆಗಳ ಜೊತೆಗೆ ಒಂದು ಇಂಟೆಲಿಜನ್ಸ್ ಇಲಾಖೆಯನ್ನು ಕೂಡ ಇಟ್ಟು ಅಕ್ರಮ-ಅನೀತಿಯಿಂದ ನಡೆಸತಕ್ಕಂಥವರನ್ನು ಹಿಡಿದು ಅವರ ತಪ್ಪುಗಳನ್ನು ಸಾಬೀತು ಮಾಡಿ ಅವರನ್ನು ಶಿಕ್ಷೆಗೊಳಪಡಿಸತಕ್ಕಂಥ ಒಂದು ವಿಧಾನವನ್ನು ಸರ್ಕಾರದವರು ತೀವ್ರವಾಗಿ ಆಲೋಚನೆ ಮಾಡುತ್ತಿದ್ದಾರೆ. ಅಂತೂ ಹೀಗೆಲ್ಲಾ ಈ ವಿಷಯದಲ್ಲಿ ಸರ್ಕಾರದವರು ಹೆಚ್ಚು ಉತ್ಸಾಹದಿಂದ ಈ ಅನೀತಿಯುತವಾದ ಕಾರ್ಯಗಳನ್ನು ಮಟ್ಟಹಾಕಲು ಸರ್ವ ಪ್ರಯತ್ನಗಳನ್ನೂ ನಡೆಸುತ್ತಿದ್ದೇವೆ. ಆದರೆ ನಮ್ಮ ಅಹವಾಲನ್ನು ಸರ್ಕಾರದವರ ಮುಂದೆ ಇಟ್ಟಿದ್ದೇವೆಂದು ಹೇಳಿ ಜನರು ಕೈಕಟ್ಟಿ ಕುಳಿತುಕೊಂಡರೆ ಆಗ ಸರ್ಕಾರ ನಿಸ್ಸಹಾಯಕವಾಗುತ್ತದೆ. ಸರ್ಕಾರದವರು ಇಂಥ ವಿಚಾರದಲ್ಲಿ ಎಷ್ಟು ಆಸಕ್ತಿವಹಿಸುತ್ತಾರೋ ಅದಕ್ಕೂ ಮಿಗಿಲಾದಂಥ ಆಸಕ್ತಿಯನ್ನು ಮಾನ್ಯ ಸಾರ್ವಜನಿಕರು ಈ ಬಗ್ಗೆ ವಹಿಸಿ, ಈ ಕೆಲಸಗಳೆಲ್ಲಾ ಒಂದು ಆದರ್ಶಮಟ್ಟದಲ್ಲಿ ಮುಂದುವರಿಯುವಂತೆ ಸರ್ಕಾರದವರಿಗೆ ನೆರವಾಗಬೇಕೆಂದು ದೇಶದ ಮುಖಂಡರಾದ ತಮ್ಮೆಲ್ಲರಲ್ಲೂ ನಾನು ಈ ಸಂದರ್ಭದಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಈ ಕಂಟ್ರಾಕ್ಟರುಗಳನ್ನು, ಲೈಸೆನ್ಸ್ಡ್ ಕಂಟ್ರಾಕ್ಟರುಗಳ್ನಾಗಿ ಮಾಡಬೇಕೆಂಬ ವಿಷಯದಲ್ಲಿ ಸರ್ಕಾರದವರಿಗೆ ಉತ್ಸುಕತೆ ಇದೆ. ಈ ವಿಷಯದಲ್ಲಿ ಒಂದು ಬಿಲ್ ತಯಾರಾಗಿ ಸ್ಕ್ರೂಟಿನೈಸಿಂಗ್ ಕಮಿಟಿಯ ಮುಂದೆ ಸ್ಕ್ರೂಟಿನೈಸ್ ಆಗುತ್ತಾ ಇದೆ. ಇನ್ನು ಕೆಲವು ದಿನಗಳಲ್ಲೇ ಆ ಬಿಲ್ಲು ಬರುತ್ತದೆ. ಬಂದರೂ ಕೂಡ ಅದರಲ್ಲೂ ಕಷ್ಟ ಸುಖ ಇದೆ ಕೆಲವು ಕಂಟ್ರಾಕ್ಟ್ ಕೆಲಸಗಾರರಿಗೆ ಬಿಟ್ಟು ಬಡವರು ಬಗ್ಗರಿಗೆ ಅವಕಾಶವಿಲ್ಲ ಎಂದು ಹೇಳಿರತಕ್ಕ ಜನರು ಅನೇಕರಿರುತ್ತಾರೆ. ಆದರೆ ಒಂದು ವಿಷಯವನ್ನು ಮಾತ್ರ ಮನಗಾಣಬೇಕು. ಕಂಟ್ರಾಕ್ಟ್ ಕೆಲಸ ಮಾಡತಕ್ಕವರಿಗೆ ತಕ್ಕ ಆರ್ಥಿಕ ಶಕ್ತಿಯು ಇರಬೇಕು ಮತ್ತು ಅವರಿಗೆ ಸ್ವಲ್ಪ ಜವಾಬ್ದಾರಿಯೂ ಇರಬೇಕು. ಅಂಥವರಿಗೆ ಲೈಸೆನ್ಸ್ ಕೊಟ್ಟು, ಅಂಥವರಿಂದ ಕೆಲಸ ತೆಗೆದುಕೊಂಡು, ತಪ್ಪು ಮಾಡಿದ ಪಕ್ಷದಲ್ಲಿ ಆ ತಪ್ಪಿಗೆ ತಕ್ಕ ಶಿಕ್ಷೆ ಮಾಡತಕ್ಕ ವ್ಯವಸ್ಥೆಯೂ ಕೂಡ ಇರಬೇಕು. ಈ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ಆದಷ್ಟು ಜಾಗ್ರತೆ ತೆಗೆದುಕೊಳ್ಳುತ್ತೇವೆ. I am not very particular about personalities. But if anything is done by any one so as to undermine the interests of the people and against the rules, he will come to trouble. It is for you therefore to help in investigation and bring them to book.

ಕೆಲವು ಮಾನ್ಯ ಸದಸ್ಯರು ಬಹುಶಃ ಈ ಬಡ್ಜೆಟ್ಟನ್ನು ಕೂಲಂಕಷವಾಗಿ ನೋಡಿಲ್ಲ ಎಂದು ಕಾಣುತ್ತದೆ. ಶ್ರೀ ಮಾಧವಾಚಾರ್‌ರವರು ಕೆಲವು ರಸ್ತೆಗಳನ್ನು ಆಸ್‌ಫಾಲ್ಟ್ ಮಾಡಬೇಕೆಂದು ಹೇಳಿದರು

(SRI H. M. CHANNABASAPPA.)

ಅದರ ಅಂದಾಜನ್ನು ಮಾಡಿ ಕೆಲಸ ತೆಗೆದುಕೊಳ್ಳುವುದಕ್ಕೆ ಹಣವನ್ನು ಒದಗಿಸಿದ್ದೇವೆ. 152ನೇ ಪುಟದಲ್ಲಿ ನೋಡಿದರೆ ಗೊತ್ತಾಗುತ್ತದೆ.

ಶ್ರೀ ಬಿ. ವಿ. ನಾರಾಯಣರೆಡ್ಡಿಯವರು ತಮಗೆಲ್ಲರಿಗೂ ಗೊತ್ತಿರುವಂತೆ ಬಹಳ ಉದ್ವೇಗದಿಂದ ಚಿತ್ರಾವತಿನದಿಗೆ ಅಡ್ಡವಾಗಿ ಸೇತುವೆ ಕಟ್ಟುವುದಕ್ಕೆ ಹಣ ಮಂಜೂರು ಮಾಡಿಲ್ಲ ಎಂದು ಹೇಳಿದರು. ಅವರು ಈ ಬಡ್ಜೆಟ್ ಪುಸ್ತಕವನ್ನು ನೋಡಲಿಲ್ಲ ಎಂದು ಕಾಣುತ್ತದೆ. ಅದಕ್ಕೂ ಸಹ ಹಣ ಒದಗಿಸಿದ್ದೇವೆ.

**Sri Mulka GOVINDA REDDY** (Chitaldrug).—It is being included in the Budget, but the work is not being carried out.

ಶ್ರೀ ಎಚ್. ಎಂ. ಚನ್ನಬಸಪ್ಪ.—ಆಮೇಲೆ ಶ್ರೀ ಮಲ್ಲಿಕಾರ್ಜುನಪ್ಪಗೌಡರು ಚಂದ್ರಗುತ್ತಿ ಹತ್ತಿರ ಸೇತುವೆ ಕಟ್ಟಬೇಕೆಂದು ಹೇಳಿದರು. ಅದಕ್ಕೆ ಸಹ ಒದಗಿಸಿದ್ದೇವೆ. 139ನೇ ಪುಟವನ್ನು ನೋಡಿದರೆ ಗೊತ್ತಾಗುತ್ತದೆ.

ಅನೇಕ ಮಾನ್ಯ ಸದಸ್ಯರು ಹಣ ಒದಗಿಸಿದ್ದರೂ ಕೂಡ ಕೆಲಸ ಆಗುತ್ತಿಲ್ಲ ಎಂಬುದನ್ನು ಗಮನಿಸಿಯೇ ಪ್ರಶ್ನೆಗಳನ್ನು ಕೇಳಿರುತ್ತಾರೆ. ಈಗ ಯಾವಯಾವುದಕ್ಕೆ ಒದಗಿಸಿದ್ದೇವೋ ಅವುಗಳನ್ನೆಲ್ಲಾ ಅತ್ಯವಶ್ಯಕವಾಗಿ ತೆಗೆದುಕೊಳ್ಳಬೇಕೆಂಬ ಆಶೆಯಿಂದಲೇ ಒದಗಿಸಿದ್ದೇವೆ. ಅನೇಕ ಕೆಲಸಕಾರ್ಯಗಳು ಮಂಜೂರಾಗಬೇಕು. ಇನ್ನೂ ಕೆಲವು ಕೆಲಸಗಳು ಇವೊತ್ತು ನಾಳೆ ಮಂಜೂರಾತಿ ಆಗುವ ಸ್ಥಿತಿಯಲ್ಲಿದೆ. ಪ್ರಾಸ್ಪೆಕ್ಟೀವ್ ಪ್ರಾಜೆಕ್ಟುಗಳನ್ನು ಕೂಡ ಸೇರಿಸಿದ್ದೇವೆ. ಕಾರಣಾಂತರಗಳಿಂದ ಆ ಪ್ರಾಜೆಕ್ಟುಗಳು ಆಗುವುದರೊಳಗೆ ಯಾವುದಾದರೂ ಅಡ್ಡಿ ಆತಂಕಗಳು ಬಂದರೆ ಅಂಥವು ಮಾತ್ರ ನಿಧಾನವಾಗುತ್ತವೆಯೇ ಹೊರತು ಅಡ್ಡಿ ಆತಂಕ ಇಲ್ಲದೇ ಇದ್ದರೆ ಹಣವನ್ನು ಒದಗಿಸಿದ ಮೇಲೆ ಖರ್ಚುಮಾಡುವ ಬಗ್ಗೆ ಆತುರವಾಗಿದ್ದೇವೆ. ಆದುದರಿಂದ ಸಾಧ್ಯವಾದಷ್ಟು ಪ್ರಯತ್ನ ಮಾಡಿ ಯಾವಯಾವ ಕೆಲಸಗಳಿಗೆ ಹಣ ಒದಗಿಸಿದ್ದೇವೆಯೋ ಆಯಾ ಹಣ ಆಯಾ ಬಾಬುಗಳಿಗೆ ಖರ್ಚಾಗುವ ರೀತಿಯಲ್ಲಿ ಖಂಡಿತವಾಗಿಯೂ ವ್ಯವಸ್ಥೆ ಮಾಡುತ್ತೇನೆಂದು ಹೇಳಿ ಅರಿಕೆ ಮಾಡುತ್ತೇನೆ.

ಇನ್ನೊಂದು ವಿಷಯ ಹೇಳಿದರು. ಈ ಇಲಾಖೆಯಲ್ಲಿ ಎರಡು ಕೆರೆಗಳು ಒಡೆದುಹೋದಕಾಲದಲ್ಲಿ ಆ ಬಗ್ಗೆ ಅಧಿಕಾರಿಗಳ ಮೇಲೆ ಕಾರ್ಯಕ್ರಮವನ್ನು ತೆಗೆದುಕೊಳ್ಳಲಿಲ್ಲ ಎಂದು ಆಪಾದನೆ ಮಾಡಿದರು.

ಶ್ರೀ ಜೆ. ಮಹಮ್ಮದ್ ಇಮಾಂ (ಜಗಳೂರು).—ಕಾರ್ಯಕ್ರಮ ತೆಗೆದುಕೊಂಡಿದ್ದೀರಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ತಪ್ಪುಮಾಡಿದವದವರಿಗೆ ಶಿಕ್ಷೆ ಮಾಡತಕ್ಕ ವಿಚಾರದಲ್ಲಿ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ ಎಂದು ಟೀಕೆ ಮಾಡಿದರು. ತಪ್ಪು ಮಾಡಿದವರಿಗೆ ಶಿಕ್ಷೆ ಮಾಡಬೇಕೆಂಬ ವಿಷಯದಲ್ಲಿ ಮೊದಲೇ ಹೇಳಿದಂತೆ ನಮಗೆ ಆಸಕ್ತಿ ಇದೆ, ತಪ್ಪು ಮಾಡಿದವರಿಗೆ ಶಿಕ್ಷೆ ಮಾಡುವುದಕ್ಕೂ ಕೂಡ ಕಾನೂನಿನಲ್ಲಿ ವಿಧಾಯಕವಾದ ರೀತಿಯಲ್ಲಿ ಮಾಡಬೇಕೇ ಹೊರತು ಕಾನೂನಿನ ವ್ಯಾಪ್ತಿ ಮೀರಿಹೋಗಿ ಮಾಡುವುದಕ್ಕಾಗುವುದಿಲ್ಲ. 320-(3) (c) ಪ್ರಕಾರ ಯಾವ ಅಧಿಕಾರಿಗೆ ಶಿಕ್ಷೆ ಮಾಡಬೇಕಾದರೂ ಕೂಡ ಪಬ್ಲಿಕ್ ಸರ್ವೀಸ್ ಕಮಿಷನರನ್ನೂ ಕನ್ಸಲ್ಟ್ ಮಾಡಬೇಕೆಂದು ವಿಧಾಯಕವಾಗಿದೆ.

ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ಮಾಡಬೇಡಿ ಎಂದು ಯಾರು ಹೇಳುತ್ತಾರೆ?

**Sri H. M. CHANNABASAPPA.**—According to article 323 of the Constitution. . . .

*(Sri L. Siddappa interrupted)*

**Sri H. M. CHANNABASAPPA.**—I am not going to allow even one single point unanswered. You please wait. Why don't you have some patience?

**Mr. DEPUTY SPEAKER.**—Well, this practice is really very bad—members interrupting the Minister and the Minister himself replying, these being done without taking the permission of Chair. Whether it is the Minister or the members, they must take the permission of the Chair before interrupting. The Minister cannot go on answering side talks. That will interfere with his own time.

**Sri H. M. CHANNABASAPPA.**—I would like to submit that it is one of the practices in Parliament and a parliamentary procedure for a member to interject and the Minister concerned to answer.

**Mr. DEPUTY SPEAKER.**—But that is done with the permission of the Chair. If it is not so, it is not a healthy practice.

**Sri J. MOHAMED IMAM.**—If you permit me, I want this matter to be cleared so that we may not commit mistakes. I understand that the Chair's ruling is that for every interruption permission should be obtained beforehand. If that is the ruling of the Chair as I have understood it, I wish to say this. Interruptions come all at once, spontaneously and they do not give notice even to ourselves. I wish to point out that some slight interjections without allowing the speaker to lose the trend of his reply is permissible even in the Parliament.

**Mr. DEPUTY SPEAKER.**—Interjection is different from interruption. And interjections too have got their own limits. So also interruptions. If there are too many interjections and interruptions, I think that ought not

to be permitted. And if it is the desire of Hon'ble Members to interrupt at any particular stage, well, the Chair will automatically give permission. There need be absolutely no doubt about it. But there must be a healthy tradition built up in this House.

ಶ್ರೀ ಎಚ್. ಕೆ. ವೀರಣ್ಣಗೌಡ(ಮದ್ದೂರು).—ತಾವು ಅಪ್ಪಣೆ ಕೊಟ್ಟರೆ ಒಂದು ವಿಷಯ ಅರಿಕೆ ಮಾಡಿಕೊಳ್ಳುತ್ತೇನೆ. ಸದಸ್ಯರಾಗಲಿ, ಮಂತ್ರಿಗಳಾಗಲಿ ಮಾತನಾಡುತ್ತಾಯಿರುವಾಗ ಪ್ರಶ್ನೆ ಹಾಕುವುದು, ಟೀಕೆ ಮಾಡುವುದು ಸ್ವಾಭಾವಿಕವಾಗಿ ಬಂದಿದೆ. ನಾನು ಹೀಗೆ ಟೀಕೆ ಮಾಡುತ್ತೇನೆ ಅಪ್ಪಣೆ ಕೊಡುತ್ತೀರಾ ಇಲ್ಲವೇ ಎಂದು ಕೇಳುವಷ್ಟು ಹೊತ್ತಿಗೆ ಉತ್ತರ ಕೊಡುತ್ತಿರುವವರು ಬಹಳ ದೂರ ಹೊರಟು ಹೋಗಿರುತ್ತಾರೆ. ಈಗ ಪ್ರಶ್ನೆ ಮಾಡುವವರು ಸಾಮಾನ್ಯವಾಗಿ ಎದ್ದು ನಿಂತುಕೊಂಡು ಕೂಡ ಕೇಳುವುದಿಲ್ಲ. ಕುಳಿತುಕೊಂಡೇ ಕೇಳುವುದು ಸ್ವಾಭಾವಿಕವಾಗಿ ಬಂದಿದೆ. ಇದು Healthy practiceಅಲ್ಲ ಎಂದರೆ ಇದೇ ಒಂದು ಪ್ರಿಸಿಡೆಂಟ್ ಆಗುತ್ತದೆ. ಇದು ಸರಿಯಲ್ಲ ಎಂದು ನನ್ನ ಅಭಿಪ್ರಾಯ.

**Sri A. G. RAMACHANDRA RAO** (Minister for Law and Education).—There will be interjections, interruptions seeking information and interruptions as such. If there are interjections, it is not wrong unless there are too many. If there are questions seeking information, unless they are abnormal, they may be all right. But interruptions just to create some trouble is not good.

**Sri J. MOHAMED IMAM.**—You cannot attribute motives like that.

**Mr. DEPUTY SPEAKER.**—Unless there are too many, I am not going to interfere. But the thing is this. For example Sri L. Siddappa said something to which the Hon'ble Minister said something and I did not hear what he said. Such things will again create complications. I am not anxious to interfere with interjections or interruptions.

4 P.M.

**Sri Mulka GOVINDA REDDY.**—Interrupting a speaker or interjecting a member is one of the recognised parliamentary practices available not only in the Parliament but also in this House. We have been doing it. Unless there are interruptions or interjections, the debate will not be lively.

**Mr. DEPUTY SPEAKER.**—I do not totally deny the interruptions or interjections, but there must be some limit for them.

**Sri H. M. CHANNABASAPPA.**—I would like to draw the attention of the Hon'ble members to article 320 (3) (c) which reads as follows.—

> "The Union Public Service Commission or the State Public Service Commission, as the case may be, shall be consulted—
>
> on all disciplinary matters affecting a person serving under the Government of India or the Government of a State in a civil capacity, including memorials or petitions relating to such matters;"

ಈ ಅಧಿಕಾರಿಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ಕಳುಹಿಸಬೇಕೆಂದು ಹೇಳಿ 1955ನೆಯ ಇಸವಿಯಲ್ಲಿ ಪಿ.ಎಸ್.ಸಿ.ಗೆ ಕಳುಹಿಸಿದರು. ಸರ್ಕಾರದ ಪರವಾಗಿ ಹೇಳುವುದಾದರೆ ನಾವು ಪಿ.ಎಸ್.ಸಿ.ಅವರು ಈ ರಿಪೋರ್ಟಿನಮೇಲೆ ತಮ್ಮ ಅಭಿಪ್ರಾಯವನ್ನು ಹೇಳಿದ ಹೊರತು ಯಾವ ಕಾರ್ಯಕ್ರಮವನ್ನು ತೆಗೆದು ಕೊಳ್ಳುವುದಕ್ಕೂ ಸಾಧ್ಯವಿಲ್ಲ.

**Sri H. K. VEERANNA GOWDH.**—When a man's character is under question, when there is a report against him and when that report is pending before the Government, unless that is settled, how are the Government justified in giving promotion to such an officer?

**Sri H. M. CHANNABASAPPA.**—I beg to submit through you to the Hon'ble Member, that unless and until that officer is proved guilty, we have got to treat him as an honest officer and we have to give all the benefits which are due to him in the normal course of his duties. If he is found guilty, we shall punish him according to rules.

**Mr. DEPUTY SPEAKER.**—The time is up.

The question is:

> "That a sum not exceeding Rs. 5,01,90,281 be granted to the Government to defray the charges which will come in course of payment during the year ending 31st day of March 1957, in respect of 'Civil Works'".

*The motion was adopted.*

## DEMAND No. 41. A—CAPITAL OUTLAY ON CIVIL WORKS.

### 81. CAPITAL ACCOUNT OF CIVIL WORKS.

MR. DEPUTY SPEAKER.—The question is :

"That a sum not exceeding Rs. 2,25,68,700 be granted to the Government to defray the charges which will come in course of payment during the year ending 31st day of March 1957, in respect of 'Capital Account of Civil Works' ".

*The motion was adopted.*

## DEMAND No. 45—ADVANCES AND LOANS.

### P. LOANS AND ADVANCES BY THE STATE GOVERNMENT.

MR. DEPUTY SPEAKER.—Motion moved.—

"That a sum not exceeding Rs. 3,12,86,000 be granted to the Government to defray the charges which will come in course of payment during the year ending 31st day of March 1957, in respect of 'Loans and Advances by the State Government' ".

The time fixed for this demand is 5 O'clock. The Hon'ble Minister will require about 15 minutes to reply to the debate.

SRI A. G. RAMACHANDRA RAO (Minister for Law and Education).—There are two parts covered in this Demand, Sir. I think two Ministers will have to reply. 15 minutes will be required for answering the points.

MR. DEPUTY SPEAKER.—So, only 45 minutes are available for the Hon'ble Members to speak.

*SRI H. C. LINGA REDDY (Malur).—While supporting this Demand (P. Loans and Advances by the State Government), I would like to make some suggestions for the Government. I had tabled three cut motions and the points covered by these cut motions, I would just like to say a few words about each one of them. The first point is, that the various loans issued by various agencies have to be consolidated and there should be one common agency to dispose of all the loans. There is the Revenue Department dealing with the Land Improvement Loans, takavi loans, the subsidy well loans and certain other loans. There is the Industrial Department dealing with the State Industries Aid loan and also there is the V.D. Scheme. There are various schemes in the various taluks dealing with industrial loans. So far as the Revenue Department is concerned, it deals with the grant of Land Improvement and Takavi loans. After all the amount allotted for the whole State is about Rs. 10 lakhs. This amount is very meagre. At the taluk and sub-division levels alone certain amounts will be disposed of and at the Deputy Commissioner's and the Revenue Commissioner's and at the Government's level certain amounts will be disposed of ; but the parties will have to put in applications and wait for a very long time for getting the loans sanctioned. It is unfortunate that many applicants will not receive the benefit of these loans early. There is a good deal of delay in the disposal of loan applications.

Again, Sir, there is the Land Mortgage Bank that has been dealing with the long term loans ; and there is the District Co-operative Bank that deals with the short term loans and the Land Mortgage Banks take a good deal of time in disposing of the applications. The primary societies at the taluk level take about five or six months and the Central Co-operative Bank at Bangalore take a good deal of time—in calling for good many documents, they raise a number of queries and sometimes they take about two to three years in disposing of the applications. But the District Co-operative Banks dealing with the short term credit, they have been very quickly disposing of the loans, because the primary societies recommend for loans and the District Central Co-operative Bank easily dispose of the loans after satisfying that there is sufficient security ; but in the case of Land Mortgage Banks, there is a good deal of delay because

the primary societies take their own time and the Central Bank at Bangalore takes a very long time and parties very often have got to travel long distances to come to Bangalore and have their papers looked into before they get their loans sanctioned. I would therefore suggest to the Government to have a plan worked out that all these loans are brought under one common agency like the District Co-operative Bank which is now dealing with the short term credit loans; they have been very expeditiously disposing of the loan applications and even recoveries are very good. Similarly, if there should be a District Co-operative Bank dealing with the long term loan also, I think, of the same type we have for the disposal of the short term credit loan, it will be good. A Committee has to be set up by the Government or the Government have got to take the opinion of the Experts in this matter. And if the disposal of these loans is entrusted to a Central Bank at the district headquarters, the Central Bank at Bangalore may be the agency of approval for this purpose just as the short term credit is practically disposed of by the District Co-operative Bank subject to the approval by the Apex Bank. Under the auspices of the Co-operative Department, they need not have so it much powers; its powers and functions may be decentralised and all powers be entrusted to a bank at the District level and the powers of this Revenue Department and the Industries Departments dealing with the short term credit and the long term credit and other kinds of loans may be transferred to the District Bank. Thereby a good deal of duplication of work could be avoided. We will be able to know as to which party is in receipt of such benefits. There is a possibility of the loans being misused, and if there is one common agency at the District level, they can find out who exactly is the applicant and whether he has taken industrial loan or a loan from the V.D. or a loan from the Central Co-operative Bank. I would like to mention another point, Sir. I am glad that the Government have decided to give land improvement loans through the Land Mortgage Banks. The Land Mortgage Banks hitherto were issuing loans only to clear all arrears of debts. Hereafter, the Government will be going to the aid of the raiyat population and they will be helping them for the improvement of their lands by giving them land improvement loans. But the loans given by the Government under the scheme of land improvement carry an interest of only about 4 to 5 per cent, while the Land Mortgage Bank loans will carry an interest of 6½ per cent which was hitherto 7½ per cent. The interest will be very heavy. What I am given to understand is, the State Government gives a subsidy to the extent of about 2 or 3 per cent. Just as the State Government are giving land improvement loans to the raiyats at the rate of 4 or 5 per cent, even here also I request them to give a subsidy to cover the difference in the interest. Again, Sir, the land mortgage societies have been collecting instalments from their loanees irrespective of the fact whether there is famine, or good crops or good harvests or not. During times of famine or scarcity, it is very necessary that the Government should allow them to pay the amount within two or three years. They should give them some time; they should suspend the question of collection of instalments and postpone the instalments, since similar practice is in vogue in Madras. With these observations, I support this Demand and request the Government to concede all these points.

*ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ಈ ಡಿಮ್ಯಾಂಡಿನ ವಿಚಾರವಾಗಿ ಮಾನ್ಯ ಶ್ರೀ ಲಿಂಗಾರೆಡ್ಡಿಯವರು ಹೇಳಿದಂಥ ಸಲಹೆಗಳನ್ನು ಅನುಮೋದಿಸುತ್ತಾ ಒಂದು ವಿಷಯದಲ್ಲಿ ಮಾತ್ರ ಅವರು ಹೇಳುವುದು ಅಷ್ಟು ಸೂಕ್ತವಲ್ಲವೋ ಏನೋ ಎಂದು ಭಾವಿಸುತ್ತೇನೆ. ಅದು ಏನು ಎಂದರೆ ಜಮೀನು ಅಡಮಾನದ ಬ್ಯಾಂಕುಗಳು ಸಾಲವನ್ನು ಈಗ ಕೊಡುತ್ತಾ ಇರತಕ್ಕ ಪದ್ಧತಿ. ಬೆಂಗಳೂರಿನಲ್ಲಿರತಕ್ಕ ಅಪೆಕ್ ಬ್ಯಾಂಕ್, ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ನೇರವಾಗಿ ಪ್ರೈಮರಿ ಸೊಸೈಟಿಗಳಿಗೆ ಸಾಲ ಕೊಡುತ್ತಾರೆ. ಅದರಿಂದ ಪ್ರೈಮರಿ ಸೊಸೈಟಿಗಳಿಗೆ ಸಂಬಂಧಪಟ್ಟ ಷೇರುದಾರರಿಗೆ ಸಾಲ ಸಿಕ್ಕುವ ಪದ್ಧತಿ ಇದೆ. ಈ ಮಧ್ಯೆ ಅವರು ಒಂದು ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಜಿಲ್ಲಾ ಬ್ಯಾಂಕ್ಸ್ ಮಾಡಬೇಕೆಂದು ಒಂದು ಸಲಹೆಯನ್ನು ಕೊಡುತ್ತಿದ್ದಾರೆ. ಅದನ್ನು ಸ್ವಲ್ಪ ವಿಚಾರ ಮಾಡಿ ನೋಡಿದರೆ ಒಂದು ಕಷ್ಟವಾಗುತ್ತದೆ.

(ಶ್ರೀ ಡಿ. ದೇವರಾಜ ಅರಸ್.)

ಡಿಸ್ಟ್ರಿಕ್ಟು ಲೆವಲ್‌ನಲ್ಲಿ ಪುನಃ ಇನ್ನೊಂದು ಸಿಬ್ಬಂದಿ ಇಟ್ಟಾಗ, ಆ ಸಿಬ್ಬಂದಿಗೆ ಹೆಚ್ಚಾಗಿ ದುಡ್ಡು ಖರ್ಚುಮಾಡಬೇಕಾಗಿ ಬಂದರೆ, ಈಗ ಕೊಡುವ ಬಡ್ಡಿ ದರವನ್ನು ಹೆಚ್ಚಿಸಿ ನಾವು ರೈತರಿಗೆ ಸಾಲ ಕೊಡಬೇಕಾಗಿ ಬರುತ್ತದೆ. ಇದನ್ನು ಗಮನದಲ್ಲಿಟ್ಟುಕೊಳ್ಳುವುದಾದರೆ, ಡಿಸ್ಟ್ರಿಕ್ಟು ಲೆವಲ್ ಒಂದು ಬ್ಯಾಂಕ್ ಸ್ಟೇಟ್ ಲೆವಲ್ ಒಂದು ಬ್ಯಾಂಕ್—ಹೀಗೆ ಮಾಡುವುದು ಅಷ್ಟು ಸಾಧುವಾದುದಲ್ಲ. ಈಗ ಸ್ಟೇಟ್ ಲೆವಲ್ ಕೊಡುತ್ತಾ ಇರುವ ಅಪೆಕ್ಸ್ ಬ್ಯಾಂಕ್ಸ್ 10 ಸಾವಿರ ರೂಪಾಯಿ ಸಾಲ ಕೊಡುತ್ತಾರೆ. ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ 10 ಸಾವಿರ ರೂಪಾಯಿಗಳನ್ನು. ನೇರವಾಗಿ ಸಾಲ ಕೇಳುವವರಿಗೆ ಕೊಡಿ ಎಂದು ಹೇಳಿದರೆ ಕಷ್ಟವಾಗುತ್ತದೆ. ಹಾಗೆಮಾಡದೆ, ನಾಲ್ಕೈದು ಸಾವಿರಕ್ಕೆ ಒಂದು ಮಟ್ಟ, ಸ್ಟೇಟ್ ಲೆವಲ್‌ನಲ್ಲಿ ಒಂದು ಮಟ್ಟ, ತಾಲ್ಲೂಕ್ ಲೆವಲ್‌ನಲ್ಲಿ ಇನ್ನೊಂದು ಮಟ್ಟ, ಈ ರೀತಿ ಏಜೆನ್ಸಿಗಳನ್ನು ಜಾಸ್ತಿಯಾಗಿ ಸೃಷ್ಟಿ ಮಾಡಿಕೊಂಡು ಹೋಗುವುದು ಸಾಧುವಾದುದಲ್ಲ. ಒಟ್ಟಿನಲ್ಲಿ ಒಂದು ಮಾತು ಅವರು ಹೇಳಿದರು. ರೈತರಿಗೆ ಸಾಲವನ್ನು ಹಂಚತಕ್ಕ ಏಜೆನ್ಸಿ ಬೇಕಾದಷ್ಟು ಆಗಿವೆ. ತಕಾವಿ ಸಾಲ, ಲ್ಯಾಂಡ್ ಮಾರ್ಟ್‌ಗೇಜ್ ಲೋನ್ ಹಂಚುವುದಕ್ಕೆ ರೆವಿನ್ಯೂ ಅಧಿಕಾರಿಗಳು ಒಂದು ಕಡೆ ರೂರಲ್ ಇಂಡಸ್ಟ್ರಿಯಲ್ ಸ್ಕೀಂ ಸಾಲವನ್ನು ಹಂಚುವುದಕ್ಕೆ ಮತ್ತೊಂದು ಏಜೆನ್ಸಿ ಆಮೇಲೆ ಕೋಆಪರೇಟೀವ್ ಡಿಪಾರ್ಟ್‌ಮೆಂಟ್ ಒಂದು, ಮತ್ತು ಹೊಸದಾಗಿ ಸಂಸ್ಥಾನಾಮಳೆ ಸ್ಥಾಪನೆಯಾಗಿರತಕ್ಕ ಅಲ್ಪಕಾಲಾವಧಿ ಸಾಲ ಹಂಚುವ ಏಜೆನ್ಸಿ ಒಂದು, ಹೀಗೆ 5-6 ಏಜೆನ್ಸೀಸ್ ಆಗಿಬಿಟ್ಟು ನಮ್ಮ ರೈತರಿಗೆ ಸಾಲ ತೆಗೆದುಕೊಳ್ಳುವುದಕ್ಕೆ ಯಾರ ಹತ್ತಿರ ಯಾವುದು ಸಾಲ ತೆಗೆದುಕೊಳ್ಳಬೇಕು ಎಂದು ಒಂದು ಕನ್ಫ್ಯೂಷನ್ ಆಗಿದೆ. ಈಗ ಅಲ್ಪಕಾಲಾವಧಿ ಸಾಲ ಕೊಡುವುದಕ್ಕೋಸ್ಕರ ಎಲ್ಲಾ ಡಿಸ್ಟ್ರಿಕ್ಟು ಹೆಡ್ ಕ್ವಾರ್ಟರ್ಸ್‌ಗಳಲ್ಲಿ ಡಿಸ್ಟ್ರಿಕ್ಟ್ ಬ್ಯಾಂಕ್‌ಗಳನ್ನು ಮಾಡಿದ್ದಾರೆ. ಡಿಸ್ಟ್ರಿಕ್ಟ್ ಬ್ಯಾಂಕ್ ಅಲ್ಪಕಾಲಾವಧಿ ಸಾಲ ಕೊಡುವುದರ ಜೊತೆಗೆ ಮಿಡ್ಲ್ ಟರ್ಮ್ ಲೋನ್ಸ್ ಕೊಡಬೇಕೆಂದು ಮಾಡಿಕೊಂಡಿದ್ದಾರೆ. ಒಂದು ವೇಳೆ ಡಿಸ್ಟ್ರಿಕ್ಟು ಬ್ಯಾಂಕಿನಿಂದ ಮಿಡ್ಲ್ ಟರ್ಮ್ ಲೋನ್ಸ್ ಕೊಡುವುದು ಜಾರಿಗೆ ಬಂದಿದ್ದೇ ಆದರೆ, ಈಗ ಅಪೆಕ್ಸ್ ಬ್ಯಾಂಕಿಗೆ ಇರುವ ಹೊರೆ ಸ್ವಲ್ಪಮಟ್ಟಿಗೆ ಕಡಿಮೆಯಾಗಬಹುದು ಎಂದು ಊಹೆ ಮಾಡಬಹುದು. ಆದುದರಿಂದ ಸರ್ಕಾರದಿಂದ ಕೊಡತಕ್ಕ ಸಾಲಗಳು ಜಮೀನು ಆಬಾದು ಸಾಲ, ತಕಾವಿಸಾಲ, ಇತ್ಯಾದಿ, ಇತ್ಯಾದಿ ಸಾಲಗಳನ್ನು ನೀವು ಏನು ಕೊಡುತ್ತೀರೋ ಅವನ್ನು ಒಂದುವೇಳೆ ಸಾಧ್ಯವಾದರೆ ಮತ್ತು ಅಪೆಕ್ಸ್ ಬ್ಯಾಂಕಿನಿಂದ ಕೊಡುವ ಸಾಲಗಳನ್ನು ಡಿಸ್ಟ್ರಿಕ್ಟು ಬ್ಯಾಂಕು ಮೂಲಕ ಕೊಡುವುದಾದರೆ, ಡಿಸ್ಟ್ರಿಕ್ಟು ಬ್ಯಾಂಕ್ ಬಹಳ ಚೆನ್ನಾಗಿ ಕೆಲಸಮಾಡಿ ಬಹುಬೇಗ ಸಾಲವನ್ನು ಹಂಚುತ್ತಾರೆ. ಸಾಲ ವಸೂಲಿ ಕೂಡ ಜಾಗ್ರತೆ ಆಗುತ್ತದೆ. ಆದ್ದರಿಂದ ಎಲ್ಲಾ ಕಡೆಗಳಿಂದಲೂ ತೆಗೆದುಕೊಳ್ಳುವ ಸಾಲದ ದುಡ್ಡನ್ನು ಆ ಬ್ಯಾಂಕಿನ ಮುಖಾಂತರ ಕೊಡುವುದಾದರೆ ಹೆಚ್ಚಿಗೆ ಫಲಕಾರಿಯಾಗುತ್ತದೆ. ಏಜೆನ್ಸಿ ಸೃಷ್ಟಿ ಮಾಡಿದಂತಾಗುವುದಿಲ್ಲ. ರೈತರಿಗೆ ನೇರವಾಗಿ ಬೇಗ ಸಾಲಗಳು ಸಿಕ್ಕುತ್ತವೆ. ಈ ರೀತಿ ಒಂದು ಸಲಹೆಯನ್ನು ಸರ್ಕಾರದವರು ತೀವ್ರವಾಗಿ ಯೋಚನೆ ಮಾಡುವುದು ಅಗತ್ಯ ಎಂದು ಹೇಳಿ ನಾನು ಈ ಮನವಿಯನ್ನು ಪುಷ್ಟೀಕರಿಸುತ್ತೇನೆ.

*ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ-ಅನುಸೂಚಿತ ಜಾತಿಗಳು).—ಸ್ವಾಮಿ, ಶ್ರೀ ಲಿಂಗಾರೆಡ್ಡಿಯವರು ಮತ್ತು ಶ್ರೀ ದೇವರಾಜ್ ಅರಸು ಅವರು. ರೈತರಿಗೆ ಸಾಲಗಳನ್ನು ಡಿಸ್ಟ್ರಿಕ್ಟು ಬ್ಯಾಂಕ್ ಮೂಲಕ ಕೊಡುವುದು ಸೂಕ್ತ ಎಂದು ಈಗ ತಾನೇ ಹೇಳಿದರು. ಆದರೆ ನನಗೆ ತಿಳಿದಮಟ್ಟಿಗೆ ಸರ್ಕಾರದಿಂದ ಸಾಲಗಳನ್ನು ಕೊಡುವುದು ನಾನಾತರಹವಾಗಿವೆ. ಕೆಲವು ಸ್ಟ್ಯಾಚ್ಯುಟರಿ ಆಫೀಸರುಗಳು ಕೊಡುವ ಸಾಲಗಳಿವೆ. ಅವು ಯಾವುವೆಂದರೆ, ಜಮೀನು ಆಬಾದು ಸಾಲ ತಕಾವಿ ಸಾಲ, Accidental fire loan ಇತ್ಯಾದಿ.—Statutory officers, ಎಂದರೆ Deputy Commissioners, Amildars, Sub-Division Officers, Revenue Commissioner and Government. ಇವರು Statutory Powers ಪ್ರಕಾರ ಎಷ್ಟೆಷ್ಟು ಕೊಡಬಹುದು ಎಂದು ಹಣವನ್ನು ನಿಗದಿಮಾಡಿ ಕೊಡತಕ್ಕ ಸಾಲಗಳು. ಇವು ರೈತರಿಗೆ ವರ್ಷವರ್ಷದ ಪರಿಸ್ಥಿತಿ ಮೇಲೆ ಕೊಡುವ ಸಾಲ. ತಕಾವಿಸಾಲ ಕೊಡುವುದಕ್ಕೆ rules and regulations ಇವೆ. ಅದಕ್ಕೆ ಆಗತಕ್ಕ ರಿಕಾರ್ಡು ಬೇರೆ. ಜಮೀನು ಆಬಾದು ಸಾಲಕ್ಕೆ ಆಗತಕ್ಕ ರೆಕಾರ್ಡ್ಸ್ ಬೇರೆ. ಈ ರೀತಿ ನಾನಾತರಹವಿದೆ. ಇನ್ನು ಎತ್ತುಗಳನ್ನು ತೆಗೆದುಕೊಳ್ಳುವುದಕ್ಕೆ: ಗೊಬ್ಬರ, ಬಿತ್ತನೆಬೀಜ, ಮುಂತಾದುವನ್ನು ಕೊಂಡುಕೊಳ್ಳುವುದಕ್ಕೆ ರೆವಿನ್ಯೂ ರೂಲ್ಸ್‌ಗೆ ಸಂಬಂಧಪಟ್ಟ ಸಾಲಗಳು ಇವೆ. ಆದರೆ ಲ್ಯಾಂಡ್ ಮಾರ್ಟ್‌ಗೇಜ್ ಸೊಸೈಟಿಗಳು ಮತ್ತು ಕೋ-ಆಪರೇಟಿವ್ ಸೊಸೈಟಿಗಳು ಇವುಗಳ ಮೂಲಕ ಕೊಡತಕ್ಕ ಸಾಲಗಳೇ ಬೇರೆ. ಒಂದಕ್ಕೊಂದಕ್ಕೆ ಒಂದುಗೂಡಿಸಿ ಅದಕ್ಕೋಸ್ಕರ ಒಂದು ಸಮಿತಿಯನ್ನು ನೇಮಕಮಾಡುವುದು, ಈ ಕಾನೂನಿಗೆ ಅನ್ವಯಿಸುವ ಹಾಗೆ ಕಾಣುವುದಿಲ್ಲ. Legislature ಕಾನೂನು ತಿದ್ದುಪಡಿ ಆಗದ ಹೊರತು ಇದು ಸಾಧ್ಯವಿಲ್ಲವೆಂದು ತಿಳಿದುಕೊಂಡಿದ್ದೇನೆ. ಒಂದೊಂದು ಸಾಲಕ್ಕೆ ಒಂದೊಂದು ತರಹ ರೂಲ್ಸ್ ಇದೆ. ಕೋ-ಆಪರೇಟಿವ್ ಸೊಸೈಟಿಗಳಿಗೆ ಬೈಲಾಸ್ ಇವೆ. ಯಾವ ಆಸ್ತಿಯನ್ನು ಮಾರ್ಟಗೇಜ್ ಮಾಡಬೇಕು; ಯಾವಾಗ ಸಾಲವನ್ನು ವಾಪಸು ಪಾವತಿ ಮಾಡಬೇಕು; ಕೊಡತಕ್ಕ ಪೀನಲ್ ಇಂಟರೆಸ್ಟು ಯಾವುದು ಎಂಬುದಕ್ಕೆ ಬೈಲಾಗಳಿವೆ. ಈ ರೀತಿ ಕಂಡೀಷನ್ ಮೇಲೆ ಕೊಡುವ ಸಾಲಕ್ಕೂ, ಸ್ಟ್ಯಾಚ್ಯುಟರಿಬಾಡೀಸ್ ಮಂಜೂರು ಮಾಡುವ ಸಾಲಕ್ಕೂ ಅರ್ಥಾರ್ಥ ಸಂಬಂಧವಿಲ್ಲ. ತಕಾವಿಸಾಲ, ಜಮೀನು ಆಬಾದು ಸಾಲ – ಇವೆಲ್ಲಕ್ಕೂ ಕಮಿಟಿ ಏತಕ್ಕೆ ಮಾಡಬೇಕು ಎಂದು ನನಗೆ ಅರ್ಥವಾಗುವುದಿಲ್ಲ. ಡಿಸ್ಟ್ರಿಕ್ಟ್ ಬ್ಯಾಂಕ್ ಒಂದು ವೇಳೆ ಸಾಲ ಕೊಡುವ ಪಕ್ಷದಲ್ಲಿ ಸರಕಾರದ ಕೋಟಾ ಕೊಟ್ಟರೆ, ಆಗ ಸಾಲಗಳನ್ನು ಅಡ್ಮಿನಿಸ್ಟರ್ ಮಾಡುವ ಬಾಡಿ ಬೇರೆಯಾಗುತ್ತದೆ. ರೂಲ್ಸ್ ಮತ್ತು ರೆಗ್ಯುಲೇಷನ್ಸ್ ಯಾವುದು ಮಾಡಿಕೊಂಡಿರುತ್ತಾರೋ, ಅದರಂತೆ ಹೋಗಬೇಕಾಗುತ್ತದೆ. ಆಕ್ಟ್‌ನಲ್ಲಿರುವ ರೂಲ್ಸ್‌ಗಳಂತೆ ತೀರ್ಮಾನ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಆದುದರಿಂದ ಇವೆಲ್ಲವನ್ನೂ ಅವರು ಹೇಳಿದಂತೆ ಒಟ್ಟಿಗೆ ಸೇರಿಸಬಾರದು. ವಿಶ್ವೇಶ್ವರಯ್ಯ ಗ್ರಾಮ ಕೈಗಾರಿಕೆ ಯೋಜನೆಯಲ್ಲಿ ಸಾಲಗಳನ್ನು ಕೈಗಾರಿಕೆ ಇಲಾಖೆಯವರು ಕೊಡುತ್ತಿದ್ದಾರೆ. ಇದೇ ಬೇರೆ, Short term loans, Long term loans, ಮತ್ತು Medium term loans ಇವುಗಳೇ ಬೇರೆ. ಇದಕ್ಕಾಗಿ ಡಿಸ್ಟ್ರಿಕ್ಟ್ ಬ್ಯಾಂಕುಗಳನ್ನು ಮಾಡಿ ಅವು

ಗಳ ಮೂಲಕ ಸಾಲ ಕೊಡುತ್ತಾರೆ. ಆರು ತಿಂಗಳು ಒಂಭತ್ತು ತಿಂಗಳೊಳಗೆ ವಾಪಸು ಕೊಡುವಂತೆ ರೈತರಿಗೆ ವ್ಯವಸಾಯ ಕಾಲದಲ್ಲಿ ಅನುಕೂಲ ಮಾಡಬೇಕೆಂದು ಈ ಸಾಲಗಳನ್ನು ಕೊಡುತ್ತಾರೆ, ರಿಜರ್ವ್ ಬ್ಯಾಂಕು, ಡಿಸ್ಟ್ರಿಕ್ಟ್ ಬ್ಯಾಂಕುಗಳಿಂದ ಇದಕ್ಕೆ ಹಣ ಕೊಡುವುದು. ಹೀಗಿರುವಾಗ ಇವೆಲ್ಲಕ್ಕೂ ಒಂದು ಸಮಿತಿ ಮಾಡಿ, ಅದರ ಮೂಲಕ ಕೊಡುವುದೆಂದರೆ ಹೇಗೆ?

Sri H. C. LINGA REDDY.—On a point of clarification, Sir. My Hon'ble friend has a mistaken impression of what I said. I suggested that an expert Committee may go into the matter so that all these things may be consolidated and not an agency to be created to deal with all kinds of loans. I did not say that the Committee should dispose of loans.

ಶ್ರೀ ಎಂ. ಚಿಕ್ಕಲಿಂಗಯ್ಯ.—ಡಿಸ್ಟ್ರಿಕ್ಟ್ ಕೋ-ಆಪರೇಟಿವ್ ಬ್ಯಾಂಕುಗಳಿವೆ, ಅಲ್ಲದೆ ಡಿಸ್ಟ್ರಿಕ್ಟ್ ಬ್ಯಾಂಕುಗಳನ್ನು ಹೊಸದಾಗಿ ಮಾಡಿಕೊಂಡು ರಿಜರ್ವ್ ಬ್ಯಾಂಕಿನಿಂದ ಸಾಲ ಪಡೆದು ಈ ಡಿಸ್ಟ್ರಿಕ್ಟ್ ಬ್ಯಾಂಕುಗಳ ಮೂಲಕ ಸಾಲ ಕೊಡುವುದಕ್ಕೆ ಏರ್ಪಾಡು ಮಾಡಿದ್ದಾರೆ. ತಾಲ್ಲೂಕು ಸಹಕಾರ ಸಂಘಗಳ ಮೂಲಕ ಸಾಲ ಕೊಡುತ್ತಾರೆ. Statutory ಸಾಲಕ್ಕೂ ಸಹಕಾರ ಸಂಘಗಳು ಬೈಲಾ ಪ್ರಕಾರ ಕೊಡತಕ್ಕ ಸಾಲಕ್ಕೂ ಸಂಬಂಧವಿಲ್ಲ. ಹೀಗಿರುವಾಗ ಎಲ್ಲವನ್ನೂ ಸೇರಿಸಿ ಒಂದು ಸಮಿತಿಯನ್ನು ಮಾಡಿ ಕೊಡುವುದೆಂದರೆ ಬಹಳ ಕಷ್ಟ, ಇದರಲ್ಲಿ ನಾನಾ ತೊಂದರೆಗಳು ಬರುತ್ತವೆ. ತಕಾವಿ, ಲ್ಯಾಂಡ್ ಇಂಪ್ರೂವ್ ಮೆಂಟ್ ಲೋನ್ ಇವು statutory ಸಾಲಗಳು. ಅಧಿಕಾರಿಗಳಿಂದ ಸೂಕ್ತ ಸಲಹೆ ಪಡೆದು ರೈತರಿಗೆ ಸಕಾಲದಲ್ಲಿ ಇವು ಸಿಕ್ಕುವಂತೆ ಮಾಡಬೇಕು. ಅಲ್ಲದೆ ಈ ಸಾಲಗಳು ರೈತರಿಗೆ ಕಡಮೆ ಬಡ್ಡಿಯಲ್ಲಿ ಸಿಕ್ಕಬೇಕು. ಆದರೆ ಈಗ ತಕಾವಿ ಮತ್ತು ಲ್ಯಾಂಡ್ ಇಂಪ್ರೂವ್ ಮೆಂಟ್ ಸಾಲಗಳು ಬಡವರಿಗೆ ಸಿಕ್ಕುತ್ತಿಲ್ಲ, ಪ್ರಭಾವಶಾಲಿಗಳಾದ ಜನರಿಗೆ ಸಿಕ್ಕುತ್ತಿವೆ. ಡೆಪ್ಯುಟಿ ಕಮಿಷನರು, ಸಬ್ ಡಿವಿಜನ್ ಆಫೀಸರು, ಅಮಲ್ದಾರರು ಇವರಿಗೆ ಇಷ್ಟಿಷ್ಟು ಸಾಲದವರೆಗೆ ಕೊಡಬಹುದೆಂದು ಅಧಿಕಾರವಿದೆ. ಮುಖ್ಯವಾಗಿ ಬಡರೈತರಿಗೆ ಈ ಸಾಲಗಳು ಸಿಕ್ಕಬೇಕು. ಡಿಸ್ಟ್ರಿಕ್ಟ್ ಬ್ಯಾಂಕು, ಸಹಕಾರ ಸಂಘ ಮುಂತಾದುವುಗಳಲ್ಲಿ ರೈತರಿಗೆ ಸಾಲ ಸಿಕ್ಕಬೇಕಾದರೆ ಕಷ್ಟವಾಗುತ್ತದೆ. ಸರ್ಕಾರದ ಮೂಲಕ ಕೊಡುವ ಸಾಲಗಳೇನಿವೆಯೋ ಅವುಗಳನ್ನು, ಅಧಿಕಾರಿಗಳಿಗೆ ಸೂಕ್ತ ಸಲಹೆ ಕೊಟ್ಟು ಬಡವರಿಗೆ ಕೊಡಬೇಕು. ಬ್ಯಾಂಕುಗಳ ಮೂಲಕ ರೈತರಿಗೆ ಕೊಡುವ ಅಲ್ಪ ಕಾಲಾವಧಿಯ ಸಾಲವನ್ನು ಜನವರಿಯಲ್ಲಿ ತೆಗೆದುಕೊಂಡರೆ ಅವರು ಮಾರ್ಚಿಯೊಳಗೆ ಬಡ್ಡಿ ಸೇರಿಸಿ ವಾಪಸು ಕೊಡಬೇಕಾಗುತ್ತದೆ. ಆದಕಾರಣ ನಾನು ಸೂಚಿಸಿರುವ ರೀತಿ ಸರ್ಕಾರ ಕೊಡುವ ಸಾಲವನ್ನು ಹೆಚ್ಚು ಕೊಟ್ಟು ಸಹಾಯ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಒಟ್ಟಿನಲ್ಲಿ ಎಲ್ಲವನ್ನೂ ಸೇರಿಸಿ ಸಮಿತಿಯನ್ನು ಮಾಡುವುದು ಸೂಕ್ತವಲ್ಲ ಮತ್ತು ಕಾನೂನಿಗೆ ವಿರೋಧವಾಗುತ್ತದೆ.

*ಶ್ರೀ ಕೆ. ವಿ. ಬೈರೇಗೌಡ (ಬೆಂಗಳೂರು-ಉತ್ತರ).—ಶ್ರೀ ದೇವರಾಜ ಅರಸಿನವರು ಏನು ಹೇಳಿದರೋ ಅದು ಅನುಭವದ ವಿಷಯ. ಶ್ರೀಮಾನ್ ಚಿಕ್ಕಲಿಂಗಯ್ಯನವರು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ. ಸಮಿತಿಗೆ ಸಾಲ ಕೊಡುವ ಅಧಿಕಾರ ಕೊಡಬೇಕೆಂದು ಹೇಳಲಿಲ್ಲ. ಸಾಲ ಕೊಡುವುದರಲ್ಲಿ ನಾಲ್ಕಾರು ತೊಡಕುಗಳಿರುವುದರಿಂದ ಅದು ಸರಿಯಾಗಿ ನಡೆಯುತ್ತಿಲ್ಲ. ಉದಾಹರಣೆಗೆ, ತಕಾವಿ ಲೋನ್ ಮತ್ತು ಲ್ಯಾಂಡ್ ಇಂಪ್ರೂವ್ ಮೆಂಟ್ ಲೋನ್ ಇವುಗಳನ್ನು ಕೊಡುವಾಗ ಅಧಿಕಾರಿಗಳ personal responsibility ಇರುವುದರಿಂದ, ಅವರು ಸರಿಯಾಗಿ ಕೊಡುತ್ತಿಲ್ಲ. ಬಡವರಿಗೆ ಕೊಡಬೇಕಾದರೆ ಇರುವ ಕಷ್ಟವೂ ಇದೇ. ಬಡವರಿಗೆ ಕೊಟ್ಟರೆ ಹಣ ವಾಪಸು ಬರುತ್ತದೆಯೋ ಇಲ್ಲವೋ ಎಂಬ ಅನುಮಾನದಿಂದ ಬೇಗ ಅವರಿಗೆ ಕೊಡುವುದಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—Personal responsibility ಇರುವುದರಿಂದ ಅಧಿಕಾರಿಗಳು ಹೇಗೆ ಹಿಂದೆಗೆಯುತ್ತಾರೋ, ಸಮಿತಿ ಮಾಡಿದರೂ ಅವರಿಗೂ ಇದೇ ಅನುಮಾನವುಂಟಾಗುತ್ತದೆ.

Sri D. DEVARAJ URS.—He is insisting on that point of a Committee. It was suggested that a Committee should go into the question of consolidating all these agencies and not that the Committee itself should be disbursing loans.

ಶ್ರೀ ಕೆ. ವಿ. ಬೈರೇಗೌಡ.—ಇಲಾಖೆಯ ಅಧಿಕಾರಿಗಳು ಕೊಡತಕ್ಕ ತಕಾವಿ ಮತ್ತು ಲ್ಯಾಂಡ್ ಇಂಪ್ರೂವ್ ಮೆಂಟ್ ಕಾಲಗಳಲ್ಲಿ ಒಂದು ತೊಂದರೆಯಿದೆ. ಮೈಸೂರು ಸಂಸ್ಥಾನದಲ್ಲಿ ಸರ್ವೆ ಆಗದೇಯಿರುವ ಜೋಡಿ ಇನಾಮ್ ಗ್ರಾಮಗಳಲ್ಲಿ ರೈತರಿಗೆ ಸಾಲ ಸಿಕ್ಕುವುದು ಕಷ್ಟವಾಗಿದೆ; ಸಿಕ್ಕುವುದಿಲ್ಲ, ಸರ್ವೆ ಆಗಿರುವ ಗ್ರಾಮಗಳು ಡಿಸ್ಟ್ರಿಕ್ಟಿಗೆ ನಾಲ್ಕಾರು ಸಿಕ್ಕಬಹುದು. ಇನ್ನೂ ಅನೇಕ ಗ್ರಾಮಗಳು ಸರ್ವೆ ಆಗಿಲ್ಲ, ಅಲ್ಲಿ ರೈತರಿಗೆ ಕಷ್ಟ. ಸರ್ವೆ ಆಗದೇಯಿರುವುದರಿಂದ ಅವರಿಗೆ ಸಾಲ ದೊರಕುತ್ತಿಲ್ಲ. ಮದರಾಸ್ ಸರ್ಕಾರದಲ್ಲಿ ಸಾಲ ಯಾರಿಗಾದರೂ ಕೊಡಬೇಕೆಂದು ಅರ್ಜಿ ಹಾಕಿಕೊಂಡರೆ, ಇಂಥವರು ಸಾಲ ಕೇಳುತ್ತಾರೆಂದು ಗೆಜೆಟ್ಟಿನಲ್ಲಿ ಪ್ರಕಟಣೆ ಮಾಡುತ್ತಾರೆ; ಅದಕ್ಕೆ ಯಾವ ತಕರಾರೂ ಬರದಿದ್ದರೆ ಆಗ ಸಾಲ ಮಂಜೂರು ಮಾಡುತ್ತಾರೆ. ಇಲ್ಲಿಯೂ ಆ ರೀತಿ ಮಾಡಿ, ಸರ್ವೆ ಆಗದೇಯಿರುವ ಗ್ರಾಮಗಳ ರೈತರಿಗೂ, ಜೋಡಿ ಗ್ರಾಮಗಳ ರೈತರಿಗೂ ಅನುಕೂಲ ಮಾಡಬೇಕೆಂದೂ, ಅವರಿಗೆ ಸುಲಭವಾಗಿ ಸಾಲ ಸಿಕ್ಕುವಂತೆ ಮಾಡಬೇಕೆಂದೂ ಸಲಹೆ ಮಾಡುತ್ತೇನೆ.

ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ-ಅನುಸೂಚಿತ ಜಾತಿಗಳು).—ಈಗಾಗಲೇ ನಮ್ಮ ಸ್ನೇಹಿತರು ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಮುಖ್ಯವಾಗಿ, ಬಡವರು ಮತ್ತು ನಿಮ್ನ ಪಂಗಡದವರಿಗೆ ತಕಾವಿ ಸಾಲ ಮತ್ತು ಲ್ಯಾಂಡ್ ಇಂಪ್ರೂವ್ ಮೆಂಟ್ ಸಾಲ ಬೆಂಗಳೂರು ಜಿಲ್ಲೆಯಲ್ಲಿ ಒಬ್ಬರಿಗೂ ಸಿಕ್ಕಿಲ್ಲವೆಂದು ಹೇಳಿದರೆ ಉತ್ಪ್ರೇಕ್ಷೆಯಲ್ಲ. ಇದಕ್ಕೆ ಕಾರಣ, ಅಧಿಕಾರಿಗಳ personal responsibility ಇರುವುದು. ನನಗೆ ಗೊತ್ತಿರುವ ಹಾಗೆ, ಕೆಲವರು ಸಾಲ ಬೇಕೆಂದು ಕೇಳಿದ ಮೇಲೆ, ಅವರಿಂದ ಅರ್ಜಿ ಹಾಕಿಸಿದ ಮೇಲೆ, ಅಮಲ್ದಾರರಲ್ಲಿಗೆ ಖುದ್ದು ಹೋದಾಗ ಆ ಅರ್ಜಿದಾರರಿಗೆ ಸಾಲ ಕೊಡಲು ಶಿಫಾರಸು ಮಾಡುವುದಕ್ಕಾಗುವುದಿಲ್ಲ, ಅವರ ಜಮೀನಿನ ಸೆಕ್ಯೂರಿಟಿ ಸರಿಯಾಗಿಲ್ಲ ಎಂದು ಹೇಳಿದುದು ನನ್ನ ಅನುಭವಕ್ಕೆ ಬಂದಿದೆ. ಆದುದರಿಂದ personal

(ಶ್ರೀ ಬಿ. ಟಿ. ಕೆಂಪರಾಜ್)

responsibility of the officer ಎಂದು ಏನು ಒಂದು ಕಲಮು ಇದೆಯೋ ಅದನ್ನು ಬದಲಾವಣೆ ಮಾಡಬೇಕು. ಉದಾಹರಣೆಗೆ ಹರಿಜನರಿಗೆ ಎರಡೆಕರೆ ಜಮೀನನ್ನು ಮುಫತ್ತಾಗಿ ಸರ್ಕಾರ ಕೊಡುತ್ತಾರೆ. ಅವರು ಅದನ್ನು ಸಾಗುವಳಿ ಮಾಡಲು ಎತ್ತುಗಳನ್ನೂ ಬೀಜವನ್ನೂ ಕೊಂಡುಕೊಳ್ಳಲು ಸಾಲಕ್ಕಾಗಿ ಅರ್ಜಿ ಹಾಕುತ್ತಾರೆ. ಇಂಥ ಜಮೀನಿಗೆ ರೆವಿನ್ಯೂ ಇನ್ಸ್‌ಪೆಕ್ಟರು ಬೆಲೆ ಕಟ್ಟುವುದಿಲ್ಲ. ಕಟ್ಟಿದರೂ ಹತ್ತು ರೂಪಾಯಿ ಕಟ್ಟುತ್ತಾರೆ. ಎತ್ತುಗಳನ್ನು ಕೊಂಡುಕೊಳ್ಳಬೇಕಾದರೆ 250-300 ರೂಪಾಯಿ ಸಾಲ ಬೇಕಾಗುತ್ತದೆ. ಅಂಥ ಸಮಯದಲ್ಲಿ ಸಾಲ ಸಿಕ್ಕುವುದಿಲ್ಲ. ಹೀಗೆ ಯಾವಾಗ ಸಾಲ ಸಿಕ್ಕುವುದಿಲ್ಲವೋ ಆಗ ಅವನು ತನ್ನ ಜಮೀನನ್ನು ಮಾರಬೇಕಾಗುತ್ತದೆ. ಜಮೀನು ಕೈತಪ್ಪಿ ಹೋಗುತ್ತದೆ. ಹೀಗಾಗಿ ಸಾಲಗಳನ್ನು ಮಂಜೂರು ಮಾಡುವುದಕ್ಕೆ ಏನು ಹಣ ಒದಗಿಸಿಕೊಂಡಿದ್ದಾರೋ, ಯಾರಿಗೆ ಸಿಕ್ಕಬೇಕೋ ಅಂಥವರಿಗೆ ಸಿಕ್ಕದೆ ದೊಡ್ಡವರಿಗೆ ಸಿಕ್ಕುತ್ತದೆ. ಇದನ್ನು ಸರಿಮಾಡಬೇಕು.

ಎರಡನೆಯದಾಗಿ, ಲ್ಯಾಂಡ್ ಮಾರ್ಟ್‌ಗೇಜ್ ಲೋನ್ ಸಿಕ್ಕುವುದು ಬಹಳ ಕಷ್ಟ. ರಿಕಾರ್ಡ್ಸ್ build up ಮಾಡಲು ಒಂದು ಕ್ರಮವನ್ನು ಇಟ್ಟುಕೊಂಡಿದ್ದಾರೆ. ಈ ಕ್ರಮವನ್ನನುಸರಿಸಬೇಕಾದರೆ ಎಷ್ಟೋ ವರ್ಷವಾಗುತ್ತದೆ. ಆದರೂ ಸಾಲ ಎಷ್ಟೋ ವೇಳೆ ಮಂಜೂರಾಗುವುದಿಲ್ಲ. ಮುಲ್ಕಿ ಬಿದ್ದು ಅನೇಕ ವರ್ಷವಾದ ಮೇಲೆ, ಕೊಡುವುದಿಲ್ಲವೆಂದು ತಿಳಿಸುತ್ತಾರೆ. ಇದಕ್ಕೆ ಬೇಕಾದಷ್ಟು ಉದಾಹರಣೆಗಳನ್ನು ಕೊಡಬಲ್ಲೆ. ಇಂಥಾ ಸಾಲಗಳು ಜಾಗ್ರತೆ ವಿಲೇಯಾಗುವುದಕ್ಕೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕು. ಈಗ ಜಾರಿಯಲ್ಲಿರುವ ಕಾನೂನು ಅಥವಾ ನಿಬಂಧನೆಗಳನ್ನು ಬದಲಾವಣೆ ಮಾಡಲು ಸೂಕ್ತ ಕ್ರಮ ಕೈಗೊಂಡರೆ, ಈ ಸಾಲಗಳನ್ನು ಕೊಡುವ ಉದ್ದೇಶ ವೇನಿದೆಯೋ ಅದು ಸಫಲವಾಗುತ್ತದೆಂದು ಹೇಳುತ್ತೇನೆ.

4-30 P.M.

*ಶ್ರೀ ಜಿ. ಪಾಪಣ್ಣ (ಶಿಡ್ಲಘಟ್ಟ-ಚಿಕ್ಕಬಳ್ಳಾಪುರ).—ಸ್ವಾಮಿ, ಶ್ರೀ ಬೈರೇಗೌಡರು ಈಗತಾನೆ ಕೆಲವು ವಿಷಯಗಳನ್ನು ಹೇಳಿದ್ದಾರೆ. ನಾನು ಜೋಡಿ ಗ್ರಾಮದರೈತರುಗಳ ಸಂಬಂಧದಲ್ಲಿ ಒಂದೆರಡುಮಾತುಗಳನ್ನು ಹೇಳುತ್ತೇನೆ. ಜೋಡಿ ಗ್ರಾಮಗಳಲ್ಲಿರುವ ರೈತರಿಗೆ ಸರ್ಕಾರದಿಂದ ಸಾಲಸಿಕ್ಕದೆ ಇದೆ. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ರಿಸರ್ವ್ ಬ್ಯಾಂಕಿನವರು ರೈತರಿಗಿರುವ ಸಾಲದಲ್ಲಿ ಶೇಕಡ ಹದಿನಾರರಷ್ಟು ಭಾಗವನ್ನು ರೈತರಿಗೆ ಕಡಿಮೆ ದರದಲ್ಲಿ ಸಾಲವಾಗಿ ಕೊಡುವುದಕ್ಕೆ ಅವಕಾಶವನ್ನು ಕಲ್ಪಿಸಿದ್ದಾರೆ. ಸಂಸ್ಥಾನ ಸರ್ಕಾರದವರೂ ಕೂಡ ಸಾಲವನ್ನು ಕೊಡುತ್ತಾರೆ. ಏನಾದರೂ ಕೂಡ ಜೋಡಿ ಗ್ರಾಮಗಳಲ್ಲಿರುವ ರೈತರಿಗೆ ಈ ಸಾಲ ಸಿಕ್ಕುತ್ತಿಲ್ಲ. ಜೋಡಿ ಗ್ರಾಮಗಳಲ್ಲಿರುವ ರೈತನು ಸಾಲಕ್ಕೆ ಅರ್ಜಿ ಕೊಟ್ಟರೆ ಅವರಿಗೆ ಯಾವ ಆಧಾರದಮೇಲೆ ಸಾಲ ಕೊಡುವುದು ಎಂಬ ಕಾರಣದಿಂದ ಸಾಲ ದೊರೆಯುತ್ತಿಲ್ಲ, ಈ ಜೋಡಿಗ್ರಾಮಗಳ ರೈತರಿಗೂ ಸಹ ಸಾಲ ದೊರೆಯುವಂತೆ ಸರ್ಕಾರದವರು ಏನಾದರೂ ಏರ್ಪಾಡು ಮಾಡಬೇಕು. ಮದರಾಸಿನಲ್ಲಿ ಇಂಥ ಪದ್ಧತಿ ಇದೆ ಎಂದು ಮಾನ್ಯ ಮಿತ್ರರೊಬ್ಬರು ಹೇಳಿದರು.

ನನ್ನ ಪ್ರಶ್ನೆಯೊಂದಕ್ಕೆ ಉತ್ತರ ಕೊಡುತ್ತ ಮಾನ್ಯ ಮಂತ್ರಿಗಳು ಜೋಡಿ ಗ್ರಾಮಗಳ ಸಮಸ್ಯೆಯು ಬಗೆಹರಿಯಬೇಕಾದರೆ ಇನ್ನು ಐದು ವರ್ಷಗಳಾದರೂ ಬೇಕು ಎಂದು ತಿಳಿಸಿದ್ದಾರೆ. ಜೋಡಿಗ್ರಾಮಗಳ ರದ್ದಿಯಾತಿ ಆಕ್ಟಿನಿಂದ ಈ ಗ್ರಾಮಗಳ ರೈತರಿಗೆ ಈಗ ಸದ್ಯಕ್ಕೆ ವಿಮುಕ್ತಿ ದೊರಕುವಹಾಗಿಲ್ಲ. ಪರಿಸ್ಥಿತಿ ಹೀಗಿರುವುದರಿಂದ, ರೈತರಿಗೆ ದೊರಕಬೇಕಾದ ಸೌಲಭ್ಯಗಳನ್ನು ತಪ್ಪಿಸಿದರೆ ಜೋಡಿ ಗ್ರಾಮಗಳ ರೈತರು ಬಹಳ ಹಿಂದುಳಿಯಬೇಕಾಗುತ್ತದೆ. ಅದಕ್ಕೋಸ್ಕರ ಜೋಡಿಗ್ರಾಮಗಳ ರೈತರಿಗೂ ಸಹ ಸಾಲ ದೊರೆಯುವುದಕ್ಕೆ ಈ ಏರ್ಪಾಡಿನಲ್ಲಿ ಆಗಲಿ, ಅಥವಾ ಮತ್ತೆ ಬೇರೆ ಯಾವುದಾದರೂ ಏರ್ಪಾಡಿನಲ್ಲಿ ಆಗಲಿ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ.

*Sri Mulka GOVINDA REDDY (Chitaldrug).—I oppose this Demand, Sir. Criticisms have already been levelled against the way in which these schemes are put into operation. Some of the schemes that have been formulated by Government and undertaken by them are really worthy of praise. But unfortunately, while implementing these schemes, not only there is inordinate delay, but all sorts of mal-practices have been also allowed to creep in, so much so, the raiyats and those who want loans from Government have not been benefited to the extent that Government expects them to be benefited. Regarding the applications for loans from the Land Mortgage Banks, many a time, unnecessary queries have been raised and the correspondence is prolonged and by the time the loanee gets the amount, he will have spent considerable amounts in making trips to Bangalore. Again, Sir, regarding the loans for electrical pumps, unnecessarily queries are raised. Correspondence is prolonged, objections are taken to, so much so, those who want to get electrical pumps installed, will have incurred considerable amount in putting up a pump-house, in investing monies on other things. The Department concerned, makes inordinate delay in sanctioning these loans.

Coming to the loans for housing schemes for the low income groups, Sir, the Government have sanctioned about 35 lakhs to be distributed through the Provincial House Building Corporation. Whenever objection is raised and it is brought to the notice of the concerned authorities in the House Building Corporation, they say that they are inadequately staffed. They say that representations have been made to Government that some more hands may

be sanctioned so that loan applications may be expeditiously disposed of. The other day, we brought to the notice of the Minister that the Provincial House Building Corporation had sanctioned a loan for house building to one particular gentleman in Challakere taluk. He had sent his application with all the necessary certificates for the second instalment. When I made enquiries—the office has no telephone—with the President of the Corporation, he was kind enough to investigate into the matter and he gave me information that the paper had been sent to the Labour Housing Corporation. When that was enquired in that office, they said that no paper was received. We were made to move up and down and when we went to that office, the Provincial House building Corporation showed in their Register that on a certain date—10th March—that particular paper was despatched but they had no acknowledgment with them. This matter was reported to the Chairman and they always complain against the Labour Housing Corporation. I have no doubt that the Labour Housing Corporation is discharging its duties properly, efficiently and fairly. Whatever delay is caused, is caused in this Office. Many a time I have felt that this Provincial House Building Corporation is an intermediary agency which does not find any place. Just to provide some place to some of those that are working in that Corporation, Government is unnecessarily spending half a per cent interest that is derived on this particular House-building Corporation. Sir, some old bandicoots who are retired and who used to practise all sorts of methods to harass the public are placed in that department. I would earnestly urge the Minister to take proper action to see that the applications that are sent to this House Building Corporation are expeditiously disposed of. I would also urge that there should be no need for a person to go and approach these people. As a matter of course, papers should be disposed of according to a time schedule. I am glad to mention in this connection, Sir, that ever since Sri Anantaraman became the Chairman of the Land Mortgage Bank, he has been expeditiously disposing of these papers. Papers that were pending there for years together, have been cleared; I feel that should be the attitude of all these corporations and associations. The benefit that should accrue to the raiyats and others who seek loans through these corporations should go to them immediately and as early as possible.

Mr. DEPUTY SPEAKER.—The member's time is up.

Sri Mulka GOVINDA REDDY.—One word, Sir. The Government are giving some loans to the educated unemployed and others to start some industries. The Board for industries makes certain recommendations to the Government. Government does not take quick action. I am told that papers are lying in the offices of the Government, so much so, the intended benefit does not go to the applicant, and when it reaches him, it may be too late for him to start these industries, or something else might have happened. Such delays should not be allowed to occur.

*ಶ್ರೀ ಪಿ. ಆರ್. ನಾಯ್ಡು (ಮಲ್ಲೇಶ್ವರಂ).—ಸಾಲ ಕೊಡುವ ವಿಚಾರದಲ್ಲಿ ಒಂದಂಶವನ್ನು ಗಮನಕ್ಕೆ ತರುತ್ತೇನೆ. ರೈತರು, ಕಾರ್ಮಿಕರು ಎಂದೇನು ಹೇಳುತ್ತೇವೋ ಅವರಿಗೆ ಸ್ವಾತಂತ್ರ್ಯ ಬಂದರೂ ಕೂಡ ಸೌಖ್ಯ ದೊರೆಯದಿರುವುದನ್ನು ಕೇಳಿದರೆ ಸಂಕಟವಾಗುತ್ತದೆ. ಸ್ವಾತಂತ್ರ್ಯ ಬರುವುದಕ್ಕೆ ಮುಂಚೆಯೇ ಸುಖವಾಗಿದ್ದರೋ ಏನೋ ಎಂದು ಅನೇಕರು ಅಭಿಪ್ರಾಯಪಡುತ್ತಿದ್ದಾರೆ. ಸಾಲಕ್ಕಾಗಿ ಯಾರನ್ನಾದರೂ ಕರೆದುಕೊಂಡುಹೋಗಿ ಶಿಫಾರ್ಸು ಮಾಡಿಸುವುದು ತಪ್ಪಬೇಕು. ಬಡವ ಅಪ್ಲಿಕೇಷನ್ ಕೊಟ್ಟರೆ ತಕ್ಷಣ ಸರ್ಕಾರದಿಂದ ಉತ್ತರ ಬರಬೇಕು. ಇದಕ್ಕೆ ತಕ್ಕ ಏರ್ಪಾಡಾಗಬೇಕು. ಈ ದಿವಸ ಸಾಲ ಕೇಳಿದರೆ ಜಮೀನ್‌ದಾರರಿಗೆ, ಸಾಹುಕಾರರಿಗೆ, ಶ್ರೀ ಮುಲ್ಕಾ ಗೋವಿಂದರೆಡ್ಡಿಯವರಂಥ ಭಾರಿ ಜಮೀನ್‌ದಾರರಿಗೆ ಮೊದಲು ಸಿಕ್ಕುತ್ತದೆ ; ಬಡವರಿಗೆ, ಸಾಧಾರಣವಾಗಿ ಸಾಮಾನ್ಯ ರೈತರಿಗೆ ಸಿಕ್ಕುವುದಿಲ್ಲ. ಎರಡು ಸಾವಿರ ರೂಪಾಯಿ ಸಾಲ ಪಡೆಯಬೇಕಾದರೆ ಚಿತ್ರದುರ್ಗದಿಂದ ಬೆಂಗಳೂರಿಗೆ ಬರಬೇಕು, ನೂರೈವತ್ತು ರೂಪಾಯಿಗಳನ್ನು ರೈಲ್ವೆ ಛಾರ್ಜಿಗೆ ಖರ್ಚು ಮಾಡಬೇಕು, ವರ್ಷಗಟ್ಟಲೆ ನಿಧಾನವಾಗುತ್ತದೆ. ಸಂಬಂಧಪಟ್ಟ ಕಾಗದ ತರಿಸಿಕೊಂಡು ಜಾಗ್ರತೆ ಮಂಜೂರು ಮಾಡಬೇಕು ; ಅದೇ ಬರಲಿ ಎಂದು ಹೇಳಿದರೆ ಪ್ರಯೋಜನವಾಗುವುದಿಲ್ಲ. ಬ್ಯಾಂಕಿನ ಅಧ್ಯಕ್ಷರು ಪೇಪರ್ ಬರಲಿ ಎಂದು ಕೂಡಬಾರದು. ಏಕೆ ನಿಧಾನವಾಗಿದೆಯೆಂಬುದನ್ನು ವಿಚಾರಮಾಡಿ ಬೇಗ ಒದಗಿಸಬೇಕು. ಅದು ಬಿಟ್ಟು ಈ ದಿವಸ ಸಾಲಕ್ಕೆ ಅರ್ಜಿಹಾಕಿದರೆ ಎರಡು ವರ್ಷವಾದರೂ ಪೇಪರ್ ಬರಲಿ ಎಂದು ಸುಮ್ಮನಿರುವುದು ಸರಿಯಲ್ಲ.

(ಶ್ರೀ ವಿ. ಆರ್. ನಾಯ್ಡು.)

ಎರಡನೆಯದು ಬೆಂಗಳೂರಿಗೆಷ್ಟು ಪ್ರಾಮುಖ್ಯತೆಯಿದೆಯೋ ದಾವಣಗೆರೆ ಟೌನಿಗೂ ಅಷ್ಟೇ ಪ್ರಾಮುಖ್ಯತೆಯಿದೆ. ದಾವಣಗೆರೆಯಲ್ಲಿ ಫೈರ್ ಎಂಜಿನ್ ಇಲ್ಲದೆ ಮೊನ್ನೆ ಬಹಳ ನಷ್ಟವಾಯಿತು. ಅಲ್ಲಿರುವ ಒಂದು ಫೈರ್ ಎಂಜಿನ್ ಸಾಲದು. ಅಲ್ಲಿ ಹತ್ತಿ ಗಿರಣಿಗಳು, ಅನೇಕ ಗುಡಿಸಲುಗಳು ಇವೆ. ಆದ್ದರಿಂದ ಅರ್ಧ ಡಜನ್ ಫೈರ್ ಎಂಜಿನ್ಸ್ ಆದರೂ ಅಲ್ಲಿರುವಂತೆ ಏರ್ಪಾಡು ಮಾಡಬೇಕು.

*Sri B. NARAYANASWAMY (Mysore City—South).—Sir, while supporting this Demand I would like to speak on one or two points. Loan has been provided under the State Aid to Industries Act for 22 lakhs. But, the way these loans are being disbursed is rather very unjudicious. There should be some judicious distribution of such loans. The State Aid to Industries Act has got a definite purpose. The loans that are given under the Act are meant to encourage and to help small industries and help the educated unemployed to get jobs. But what is it that is happening now ? I think, during the last session an interpollation was tabled and by the answers we were surprised to find that only capitalists were provided with this kind of loan. Sir, sixty thousand rupees loan has been given to a capitalist for fire works. Perhaps, that money has been consumed to ashes. What is the meaning of giving Rs. 60,000 of loan under the State Aid Industries Act to such works ? If that amount had been given to some 20 or 30 small industries, it would have gonea long way to help them in the starting and developing those small industries. Therefore, I request the Government to be very judicious in granting these loans. Applicants who really deserve such help, most of them, have been denied the benefit of this loan.

Then, Sir, I would like to bring it to the notice of the Government that Mysore City has again been discriminated in the matter of giving loans to the City Improvement Trust Board. Under this Demand, I see that a loan of five lakhs of rupees has been allotted to the City Improvement Trust Board, Bangalore for clearance of slums ? whereas I do not see any such loan having been provided to Mysore City Improvement Trust Board. Am I to understand that there are no slum areas in Mysore City at all !

Thirdly, I see in the Budget that no provision has been made for giving loans to non-gazetted officers for house building ; whereas, higher amount has been provided to gazetted officers. Higher amount should be provided to non-gazetted officers and enable a number of them to build houses. These points I place before the Government for their consideration. I thank you for having given me an opportunity to do so.

*Dr. R. NAGAN GOWDA (Minister for Agriculture).—Sir, just a few points have been raised by some Hon'ble members regarding Co-operative Banks and I shall deal with those points. It was suggested that too many agencies were giving co-operative loans like short-term loans, medium-term loans and long-term loans, and create confusion and there wis duplication, and some thing should be done to simplify the procedure. This matter has often been discussed by co-operators and those engaged in co-operation and they have found that the method that is now being followed is the best in the interest of the movement. Sri D. Devaraj Urs suggested to constitute a committee to go into the different systems. I wish he had given more details about it, so that we could have considered it. Sir, I was surprised to hear Sri Chikkalingiah saying that short-term loans were difficult to be returned within six months. Such loans are required to be returned after the harvest and I do not think there would be any difficulty about returning the loan.

An important point about the jodi villages where there was no survey and settlement was raised. It is indeed difficult to give loans in these villages. But, the method that has been adopted in Madras would be investigated and we will see what could be done in the matter. Sri B.T. Kemparaj said that sanctioning loans in the Land Mortgage Banks takes years. It was so long ago ; now, things have improved and there are instances where loans have been sanctioned within one or two months. Even at the primary societi-

es' level, we are trying to expedite matters.

Sri Mulka Govinda Reddy said that the House Building Corporation was an unnecessary intermediary. But, it is difficult for Government to deal directly with such a large number of House Building Societies in the State. I am in touch with the persons and we will see that hereafter such mistakes do not occur. Lastly, I must say, Sir, that we are trying to make this entire co-operative movement work smoothly, efficiently and rapidly.

ಶ್ರೀ ಜಿ. ಬಸಪ್ಪ (ಹೊಸದುರ್ಗ).—ತಾವು ಎಲ್ಲಾ ಅರ್ಜಿಗಳನ್ನೂ ಒಂದು ತಾರೀಖಿನಲ್ಲಿ ಮಂಜೂರು ಮಾಡುವುದಕ್ಕೆ ಬದಲಾಗಿ ಯಾವ ಯಾವ ತಾರೀಖಿನಲ್ಲಿ ಸಾಲಕ್ಕಾಗಿ ಅರ್ಜಿಗಳು ಬರುತ್ತವೆಯೋ ಆಯಾ ತಾರೀಖಿನಲ್ಲಿ ಅರ್ಜಿಗಳನ್ನು ಏಕೆ ಪರಿಶೀಲನೆ ಮಾಡಬಾರದು? ತಾವು ಹಾಗೆ ಆಯಾ ದಿನವೇ ಅದನ್ನು ಪರಿಶೀಲನೆ ಮಾಡುತ್ತಾ ಹೋದರೆ ಹೀಗೆ ನಿಧಾನವಾಗಲು ಅವಕಾಶವಿರುವುದಿಲ್ಲ. ಹಾಗೆ ಮಾಡದೆ ತಾವು ಹೀಗೆ ಅತಿ ನಿಧಾನ ಮಾಡಿ ಸಾಲ ಮಂಜೂರು ಮಾಡಿದರೆ ಅದರಿಂದ ಪ್ರಯೋಜನವೇನಿದೆ?

ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ದಾವಣಗೆರೆ ಪಕ್ಕದಲ್ಲಿ ಹರಿಹರ ಇತ್ಯಾದಿ ಸ್ಥಳಗಳಲ್ಲಿ ಬೆಂಕಿ ಅನಾಹುತ ಜಾಸ್ತಿ ಆಗಿ ಅನೇಕ ಜನರು ಕಷ್ಟನಷ್ಟಗಳಿಗೀಡಾಗಿದ್ದಾರೆ. ಆದರೆ ಹಾಗೆ ಬೆಂಕಿ ಕಾಣಿಸಿಕೊಂಡ ಸ್ವಲ್ಪ ಹೊತ್ತಿನೊಳಗೇ ಬೆಂಕಿ ಆರಿಸತಕ್ಕ ಯಂತ್ರಗಳು ಬಂದು ಅನಾಹುತವನ್ನು ಹತೋಟಿಗೆ ತಂದುವು. ಅಂತು ಈ ದಿವಸ ಅಲ್ಲಿ 200 ಸಂಸಾರಗಳಿಗೆ ಬಹಳ ತೊಂದರೆಯಾಗಿದೆ. ಆದರೆ ಜನಗಳಿಗೆ ಸರ್ಕಾರ ಏನೋ ಕೊಂಚ ಪರಿಹಾರ ಒದಗಿಸಿದ್ದೇವೆಂದು ಹೇಳಿದರು. ಆದರೆ ಅದು ಏನೇನೂ ಸಾಲದು. ಅವರಿಗೆ ಇನ್ನು ಹೆಚ್ಚಿನರೀತಿಯಲ್ಲಿ ಸಹಾಯಗಳನ್ನೊದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಬೆಂಕಿ ಆರಿಸತಕ್ಕ ಒಂದು ಯಂತ್ರ ನಮ್ಮ ದಾವಣಗೆರೆಗೆ ಬಹಳ ಅವಶ್ಯಕವಾಗಿದೆ. ಒಂದು ಯಂತ್ರವನ್ನು ಅಲ್ಲಿ ಇಡಬೇಕೆಂಬ ಬಗ್ಗೆ ಒಂದು ಖೋತಾ ಸೂಚನೆಯನ್ನೇ ಕಳುಹಿಸಿದ್ದೆನು. ಆದರೆ ಅದರ ವಿಚಾರದಲ್ಲಿ ಸರ್ಕಾರದವರ ಅಭಿಪ್ರಾಯವೇನೆಂಬುದನ್ನು ಕೂಡ ತಿಳಿಸಬೇಕೆಂದು ಕೋರುತ್ತೇನೆ.

Dr. R. NAGAN GOWDA.—On the point raised by Sri G. Basappa regarding the late disbursement of loans and subventions, I may state that usually we receive applications till a very late time in the year and so the allotment of loans and subventions is held up till a very late period. So next year we are inviting these applications at an earlier date so that we could dispose them of in the middle of the year.

*ಶ್ರೀ ಎ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾ ಇಲಾಖೆಗಳ ಮಂತ್ರಿಗಳು).—ಸ್ವಾಮಿ, ದಾವಣಗೆರೆಗೆ ಒಂದು ಅಗ್ನಿ ಶಾಮಕಯಂತ್ರವನ್ನು ಒದಗಿಸಿ ಜನರಿಗೆ ಸಹಾಯ ಮಾಡುವ ವಿಚಾರದಲ್ಲಿ ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ಎರಡು ವಿಷಯಗಳನ್ನು ತಿಳಿಸಿರುತ್ತಾರೆ. ಅದರ ಪೈಕಿ ಒಂದನೆಯದು ಈಗ ಅಲ್ಲಿ ಬೆಂಕಿ ಅನಾಹುತಕ್ಕೆ ಈಡಾದ ಜನಗಳಿಗೆ ಒದಗಿಸಿರತಕ್ಕ ಸಹಾಯ ಸಾಲದು, ಅದನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ಒದಗಿಸಬೇಕು ಎನ್ನುವುದಾಗಿದೆ. ಆದರೆ ಈ ವಿಷಯ ಈ ಡಿಮ್ಯಾಂಡಿಗೆ ಸಂಬಂಧಪಡುವುದಿಲ್ಲ. ಆದಾಗ್ಯೂ ಒಂದು ವಿಚಾರ ತಿಳಿಸಲಿಚ್ಛಿಸುತ್ತೇನೆ. ಸರ್ಕಾರದವರು ಈಗಾಗಲೇ ಆ ವಿಚಾರವನ್ನು ಕೇಳಿದ ತಕ್ಷಣವೇ ತ್ವರಿತವಾಗಿ ಕೊಡಬೇಕಾಗಿದ್ದಂಥ ಸಹಾಯಗಳನ್ನೆಲ್ಲಾ ಕೊಟ್ಟಿದ್ದಾರೆ. ಆದರೆ ಅಲ್ಲಿಂದ ಡೀಟೈಲ್ ರಿಪೋರ್ಟು ಇನ್ನೂ ಬಂದಿಲ್ಲ. ಅದಕ್ಕಾಗಿ ನಾವು ಕಾಯುತ್ತಿದ್ದೇವೆ.

ಇನ್ನು ಆ ಅಗ್ನಿ ಶಾಮಕಯಂತ್ರ ಒಂದನ್ನು ಚಿತ್ರದುರ್ಗ ಜಿಲ್ಲೆಗೆ ಕೊಡಬೇಕಾದದ್ದು ಅಗತ್ಯವೆಂದು ಕಾಣುತ್ತದೆ. ಈಗಾಗಲೇ ಈ ವಿಚಾರದಲ್ಲಿ ಚಿತ್ರದುರ್ಗ ಮುನಿಸಿಪಾಲಿಟಿಯವರೊಂದಿಗೆ ಸರ್ಕಾರದವರು ವ್ಯವಹಾರ ನಡೆಸಿ ಆ ಬಗ್ಗೆ ಆಲೋಚನೆ ನಡೆಸುತ್ತಿದ್ದಾರೆ.

ಸ್ವಾಮಿ, ಇನ್ನು ಕೆಲವು ಮಾನ್ಯ ಸದಸ್ಯರು ಬೆಂಗಳೂರು ಸಿಟಿ ಮುನಿಸಿಪಾಲಿಟಿ ಮತ್ತು ಮೈಸೂರು ಸಿಟಿ ಮುನಿಸಿಪಾಲಿಟಿಗಳ ಸ್ಲಂಕ್ಲಿಯರೆನ್ಸ್ ಬಗ್ಗೆ ಒಂದು ಭೇದಭಾವನೆಯಿಂದ ಸಾಲಗಳನ್ನು ಕೊಡುತ್ತಿದ್ದಾರೆಂದು ಆಪಾದನೆ ಮಾಡಿರುತ್ತಾರೆ. ಆದರೆ ಅದು ನಿರಾಧಾರವಾದಂಥ ಆಪಾದನೆ. ಬೆಂಗಳೂರಿನಲ್ಲಿ ಈ ಸ್ಲಂಕ್ಲಿಯರೆನ್ಸ್ ಕೆಲಸ ಬಹಳ ಜಾಸ್ತಿಯಾಗಿರುತ್ತದೆ. ಅದಕ್ಕಾಗಿ ಹೆಚ್ಚು ಹಣ ಒದಗಿಸಬೇಕಾದದ್ದು ಅಗತ್ಯ. ಈ ಹೊತ್ತು ಬೆಂಗಳೂರಿನ ಜನಸಂಖ್ಯೆ ಒಂದಕ್ಕೆ ಹತ್ತರಷ್ಟು ಜಾಸ್ತಿಯಾಗಿದೆ. ರಾತ್ರಿ ಖಾಲಿಯಿದ್ದ ಜಾಗ ಬೆಳಿಗ್ಗೆ ಖಾಲಿ ಇರುವುದಿಲ್ಲ. ಆದರೆ ಮೈಸೂರಿನ ಜನಸಂಖ್ಯೆ ಕಮ್ಮಿ ಆಗುತ್ತಿದೆ. ಆದುದರಿಂದ ಇದು ಭೇದ ಭಾವನೆಯೆಂದು ಹೇಳುವುದಕ್ಕಾಗುವುದಿಲ್ಲ. ಯಾವ ಯಾವ ಸ್ಥಳಕ್ಕೆ ಎಷ್ಟೆಷ್ಟು ಅಗತ್ಯವಾಗಿದೆ ಎನ್ನುವುದನ್ನು ನೋಡಿ ಕೊಂಡು ಕೊಡುತ್ತಿದ್ದೇವೆ. ಅಲ್ಲಿಗೂ ಸಹ ಅದೇ ರೀತಿಯಲ್ಲಿ ಆವಶ್ಯಕತೆಯಿದ್ದರೆ ಕೊಡುತ್ತೇವೆ.

ಇನ್ನು ಈ ಕೈಗಾರಿಕೆಗಳ ಸಾಲದ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದನ್ನು ದೇಶದಲ್ಲಿರತಕ್ಕ ನಿರುದ್ಯೋಗ ಸಮಸ್ಯೆಯನ್ನು ನಿವಾರಣೆ ಮಾಡುವುದಕ್ಕೂ ಮತ್ತು ಕೆಲ ಕೆಲವು ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಸಹಾಯ ನೀಡಬೇಕೆಂಬ ಉದ್ದೇಶದಿಂದಲೂ ಜಾರಿಗೆ ತರಲಾಗಿದೆ. ಆದರೆ ಈ ಕೈಗಾರಿಕಾಕ್ಷೇತ್ರದಲ್ಲಿ ತೊಡಗಿರತಕ್ಕ ಜನರಿಗೆ ಸಹಾಯ ನೀಡುವಂತೆ ವ್ಯವಸಾಯ ಕ್ಷೇತ್ರದಲ್ಲಿರತಕ್ಕವರಿಗೂ ಕೂಡ ಈ ಪ್ರಯೋಜನ ಲಭಿಸುವಂತೆ ಮಾಡಬೇಕೆಂಬ ಉದ್ದೇಶದಿಂದ ಹೀಗೆ ತೀರ್ಮಾನ ಮಾಡಿಕೊಂಡು ಇಬ್ಬರಿಗೂ ಸಹಾಯವಾಗುವಂತೆ ಈ ಯೋಜನೆಯನ್ನು ಜಾರಿಗೆ ತಂದಿದ್ದೇವೆ.

Sri B. NARAYANASWAMY.—I brought to the notice of the Government that the Government have given a loan of Rs. 60,000 for fire works and I stated that it had been consumed to ashes. Is this the way of giving loans under the State Aid to Industries Act, I would like to know?

ಶ್ರೀ ಎ. ಜಿ. ರಾಮಚಂದ್ರರಾವ್.—ಪಟಾಕಿ ತಯಾರಿಕೆಯೂ ಕೂಡ ಒಂದು ಕೈಗಾರಿಕೆಯೇ. ಈ ದಿವಸ ನಾವು ಚೈನಾದಿಂದ ಪಟಾಕಿಗಳನ್ನು ತರಿಸುತ್ತಿದ್ದೇವೆ. ಇದಕ್ಕಾಗಿ ಕೋಟ್ಯಂತರ ರೂಪಾಯಿಗಳು ನಮ್ಮ ದೇಶದಿಂದ ಹೊರಗಡೆ ಹೋಗುವುದಕ್ಕೆ ಅವಕಾಶವಾಗಿದೆ. ಆದಕಾರಣ ಹೀಗೆ ನಮ್ಮ ಹಣ ಹೊರ ದೇಶಕ್ಕೆ ಹೋಗದ ಹಾಗೆ ನಮ್ಮಲ್ಲಿಯೇ ಉಳಿಯುವಂತೆ ಮಾಡುವುದಕ್ಕೂ ಮತ್ತು ನಮ್ಮದೇಶದ ಜನಗಳಿಗೆ ಒಂದು ಉದ್ಯೋಗ ದೊರೆಯುವಂತೆ ಮಾಡುವುದಕ್ಕೂ ಇದೊಂದು ಉತ್ತಮ ಮಾರ್ಗವೆಂದು ಹೇಳುತ್ತೇನೆ. ಈ ದಿವಸ ಸರ್ಕಾರದವರು ಒಂದು ಬೋರ್ಡನ್ನು ಸ್ಥಾಪನೆ ಮಾಡಿ ಆ ಮೂಲಕ ಈ ಸಾಲಗಳನ್ನು ಹಂಚಲಾಗುತ್ತಿದೆ. ಹೀಗಿರುವಾಗ ಸರ್ಕಾರವನ್ನು ವೃಥಾ ದೂರುವುದು ಸೂಕ್ತವಾದದ್ದಲ್ಲ ಮತ್ತು ಇದು ನಿರಾಧಾರವಾದ ದೂಷಣೆ.

ಶ್ರೀ ಬಿ. ಎಂ. ಶೀನಪ್ಪ (ಕಬ್ಬನ್ ಪೇಟೆ).—1955-56ರಲ್ಲಿ ಈಬಗ್ಗೆ ಬಡ್ಜೆಟ್ಟಿನಲ್ಲಿ ಒದಗಿಸಲಾಗಿದ್ದ 5ಲಕ್ಷರೂ. ಗಳಲ್ಲಿ ಒಂದು ಲಕ್ಷ ಮಾತ್ರ ಖರ್ಚಾಗಿ ಇನ್ನು 4ಲಕ್ಷ ರೂ. ಗಳು ಲ್ಯಾಪ್ಸ್ ಆಗಿರುವುದು ನಿಜವೇ? ಅಥವಾ ಎಲ್ಲಾ ಹಣವೂ ಖರ್ಚಾಗಿದೆಯೇ ತಿಳಿಸಬೇಕು.

ಶ್ರೀ ಎ. ಜಿ. ರಾಮಚಂದ್ರರಾವ್.—ಆ ಲೆಕ್ಕಗಳಿನ್ನೂ ನಮಗೆ ಬಂದಿಲ್ಲ. ಅವು ಬಂದನಂತರ ಅವನ್ನು ಪರಿಶೀಲನೆ ಮಾಡುತ್ತೇನೆ.

ಇನ್ನು ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಲ್ಯಾಂಡ್ ಇಂಪ್ರೂವ್‌ಮೆಂಟ್ ಮತ್ತು ತಕಾವಿ ಸಾಲಗಳನ್ನು ಮಂಜೂರು ಮಾಡತಕ್ಕ ಬಗ್ಗೆ ಸಾಲಗಳನ್ನು ಮಂಜೂರು ಮಾಡಲು ಸಂಬಂಧಪಟ್ಟ ಅಧಿಕಾರಿಗಳು ಎಂದರೆ ಅಮಲ್ದಾರರುಗಳು ಈ ಹಣದ ವಸೂಲಿಯ ಜವಾಬ್ದಾರಿಯೆಲ್ಲಾ ನಮ್ಮ ಮೇಲೆ ಬೀಳುತ್ತದೆಂದು ಹೆದರಿಕೊಂಡು ಆ ಸಾಲಗಳನ್ನೇ ಮಂಜೂರು ಮಾಡುತ್ತಿಲ್ಲ ಎಂಬುದಾಗಿ ತಿಳಿಸಿದರು. ನಿಜ. ಆದರೆ ಹಾಗೆ ಮಂಜೂರು ಮಾಡತಕ್ಕ ಹಣದ ಬಂದೋಬಸ್ತಿನ ಬಗ್ಗೆ ಆ ಅಧಿಕಾರಿಗಳು ನಿಗಾ ಇಡಲೇ ಬೇಕು. ಇತ್ತೀಚೆಗೆ ಈ ಜಮೀನುಗಳ ಬೆಲೆ ಕೂಡ ಬಹಳ ಮಟ್ಟಿಗೆ ಇಳಿಯುತ್ತಾ ಬರುತ್ತಿದೆ. ಆದರೆ ಜನಗಳಿಗೆ ಸಾಲ ಕೊಡಬಾರದು ಎಂಬ ಉದ್ದೇಶವೇನೂ ಇಲ್ಲ. ಆದಕಾರಣ ಆ ಅಧಿಕಾರಿಗಳ ಬಗ್ಗೆ ದೂರುಗಳನ್ನೂ ದೂಷಣೆಗಳನ್ನೂ ಮಾಡತಕ್ಕದ್ದು ಸರಿಯಲ್ಲವೆಂದು ಹೇಳುತ್ತೇನೆ.

ಇನ್ನು ಬಿಲ್ಡಿಂಗ್ ಕೋಆಪರೇಟೀವ್ ಸೊಸೈಟಿಗಳ ಮತ್ತು ಹೌಸಿಂಗ್ ಕಾರ್ಪೊರೇಷನ್‌ಗಳ ಬಗ್ಗೆ ಕೆಲವು ದೂರುಗಳನ್ನು ಮಾಡಿದ್ದಾರೆ. ನನಗೂ ಸಹ ಕೆಲವು ದಿವಸಗಳು ಹಿಂದೆ ಒಂದೆರಡು ದೂರುಗಳು ಬಂದಿದ್ದವು. ಆದರೆ ಅಲ್ಲಲ್ಲೇ ಕೆಲವು ಚಿಕ್ಕ ಪುಟ್ಟ ನ್ಯೂನತೆಗಳು ನಡೆದಿರಬಹುದು. ಈಗಾಗಲೇ ರೂರಲ್ ಕೋಆಪರೇಟೀವ್ ಸೊಸೈಟಿಗಳ ಸಾಲ ಕೊಡತಕ್ಕ ಬಗ್ಗೆ 35ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಮೊಬಲಗನ್ನು ಇನ್ನೂ ಹೆಚ್ಚು ಮಾಡಲು ಈಗಾಗಲೇ ಆ ರಿಕಾರ್ಡುಗಳನ್ನು ಬಿಲ್ಡ್ ಅಪ್ ಮಾಡುತ್ತಿದ್ದಾರೆ. ಇದರ ಬಗ್ಗೆ ಬಿಲ್ಡಿಂಗ್ ಕಾರ್ಪೊರೇಷನ್ನಿನವರು ಬಹಳ ಸಹಾಯ ಮಾಡಿದ್ದಾರೆ. ಅವರೂ ಬಹಳ ಶ್ಲಾಘನೀಯವಾದ ರೀತಿಯಲ್ಲಿ ಕೆಲಸಗಳನ್ನು ನಡಿಸಿಕೊಂಡು ಬರುತ್ತಿದ್ದಾರೆ. ಅಂತೂ ಈ ಎರಡು ಸಂಸ್ಥೆಯವರೂ ಒಂದು ಸರಿಸಮಾನವಾದ ರೀತಿಯಲ್ಲಿ ಕೆಲಸ ನಡೆಸಿಕೊಂಡು ಹೋಗುತ್ತಿದ್ದಾರೆಂದು ಹೇಳುತ್ತೇನೆ.

ಇನ್ನು ವ್ಯವಸಾಯಗಾರರಿಗೆ ಕೊಡತಕ್ಕ ಸಾಲದ ವಿಚಾರ ತಿಳಿಸಿದ್ದಾರೆ. ಆದರೆ ಇಲ್ಲಿಯವರೆಗೆ ರೈತರಿಗೆ ಈ ತಕಾವಿ, ಲ್ಯಾಂಡ್ ಇಂಪ್ರೂವ್‌ಮೆಂಟ್ ರೀತ್ಯಾ ಸಾಲ ಪಡೆಯಲು ಮಾತ್ರ ಅವಕಾಶವಿತ್ತು. ಆದರೆ ಇತ್ತೀಚೆಗೆ ಇವರಿಗಿನ್ನೂ ಹೆಚ್ಚಿನ ರೀತಿಯಲ್ಲಿ ಸಹಾಯ ನೀಡಬೇಕೆಂಬ ಉದ್ದೇಶದಿಂದ ಇವರಿಗೆ ಷಾರ್ಟ್ ಟರ್ಮ್, ಲಾಂಗ್ ಟರ್ಮ್ ಮತ್ತು ಮೀಡಿಯಂ ಟರ್ಮ್ ಎಂದು ಮೂರು ವಿಧವಾದ ಸಾಲಗಳನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಲಾಗಿದೆ. ಇದು ಹೊಸ ಯೋಜನೆ. ಹೀಗೆ ಇದರಲ್ಲಿ ರೈತರಿಗೆ ಸಾಲ ಕೊಡತಕ್ಕದ್ದೇ ಒಂದು ಭಾಗ, ಕೈಗಾರಿಕೆಗಳಿಗೆ ಸಾಲ ಕೊಡತಕ್ಕದ್ದೇ ಇನ್ನೊಂದು ಭಾಗ. ಇವೆರಡು ಒಂದೊಂದು ತರದ ಸಾಲಗಳಾಗಿವೆ. ಇವುಗಳನ್ನು ಮಂಜೂರು ಮಾಡುವುದರಲ್ಲೂ ಮತ್ತು ವಸೂಲು ಮಾಡುವುದರಲ್ಲೂ ಎರಡಕ್ಕೂ ವ್ಯತ್ಯಾಸವಿದೆ. ಈಗ ಈ ಯೋಜನೆಯ ಪ್ರಕಾರ ಎಷ್ಟರ ಮಟ್ಟಿಗೆ ಕೆಲಸ ನಡೆಯುತ್ತದೆ ಎಂಬುದನ್ನು ನೋಡೋಣ. ಹಾಗೇನಾದರೂ ತೊಂದರೆಗಳು ಕಂಡು ಬಂದರೆ ಮುಂದೆ ಇದನ್ನು ಬದಲಾವಣೆ ಮಾಡಬಹುದು. ಆದುದರಿಂದ ತಾವುಗಳೆಲ್ಲರೂ ದಯವಿಟ್ಟು ಈ ಡಿಮ್ಯಾಂಡಿಗೆ ಬೆಂಬಲ ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

5 P.M.

Mr. DEPUTY SPEAKER.—The question is:

"That a sum not exceeding Rs. 3,12,86,000 be granted to the Government to defray the charges which will come in course of payment during the year ending 31st day of March 1957, in respect of 'Loans and Advances by the State Government'."

*The motion was adopted.*

Mr. DEPUTY SPEAKER.—The House will now rise and meet at 12 O'Clock to-morrow.

---

*The House adjourned at One Minute past Five of the Clock to meet again at Twelve of the Clock on Wednesday, the 28th March 1956.*

---